

ಹಂಸಲೇಖ ಹೇಳಿದ್ದು ಸರಿ

ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 48 | ನವೆಂಬರ್ 22–28, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ರೈತರ ಧೀರ ಹೋರಾಟದ ಐತಿಹಾಸಿಕ ವಿಜಯಕ್ಕೆ ವೀರವಂದನೆ

ಗೋಕಾಕ್ ಚಳುವಳಿಗೆ ಮರಳುತ್ತಿದ್ದೇವೆಯೆ?



ಆದಿವಾಸಿ ಹಕ್ಕುಗಳನ್ನು ಕಸಿಯುವ ರಾಜಕಾರಣ





ಗಾಂಧೀಜಿಗೆ ಹೊಸ ಅವತಾರ!

ರೈತರ ಧೀರ ಹೋರಾಟದ ಐತಿಹಾಸಿಕ ವಿಜಯಕ್ಕೆ ವೀರವಂದನೆ

ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ರೈತರು ವರ್ಷವಿಡೀ ನಡೆಸಿರುವ ಉತ್ಸಾಹಭರಿತ, ಸ್ಫೂರ್ತಿದಾಯಕ ಮತ್ತು ಧೀರ ಹೋರಾಟದ ಐತಿಹಾಸಿಕ ವಿಜಯಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ವೀರವಂದನೆಗಳನ್ನು ಸಲ್ಲಿಸುವುದಾಗಿ ಹೇಳಿದೆ.

ಹಟಮಾರಿ ಪ್ರಧಾನಿ ಮತ್ತು ಅವರ ಸರ್ಕಾರವು ಬಗ್ಗಲೇ ಬೇಕಾಗಿ ಬಂದಿದೆ. ಆದರೂ ಮೋದಿಯವರು ಈ ಕರಾಳ ಕಾಯ್ದೆಗಳನ್ನು ಸಮರ್ಥಿಸಿ ಕೊಳ್ಳುತ್ತಲೇ ಇದ್ದಾರೆ, ರೈತರ ಒಂದು ವರ್ಗವನ್ನು ದಾರಿ ತಪ್ಪಿಸಲಾಗುತ್ತಿದೆ ಎಂದು ದೂಷಿಸುತ್ತಿದ್ದಾರೆ. ನಮ್ಮ ರೈತರ ಸಾವಿನ ಬಗ್ಗೆ ಅಥವಾ ಅವರ ಮೇಲಿನ ದಾಳಿಗಳ ಬಗ್ಗೆ ಯಾವುದೇ ಪಶ್ಚಾತ್ತಾಪ ವ್ಯಕ್ತಪಡಿಸಿಲ್ಲ.

ಈ ಕರಾಳ ಕಾನೂನುಗಳನ್ನು ರದ್ದುಗೊಳಿಸುವಾಗ ಸಂಸತ್ತು ಎಲ್ಲಾ ಕೃಷಿ ಬೆಳೆಗಳನ್ನು ಕನಿಷ್ಟ ಬೆಂಬಲ ಬೆಲೆ (ಎಂಎಸ್‌ಪಿ) ಗಳಲ್ಲಿ ಮಾರಾಟ ಮಾಡುವ ಕಾನೂನುಬದ್ಧ ಹಕ್ಕನ್ನು ರೂಪಿಸಬೇಕು ಎಂದು ಸಿಪಿಐ(ಎಂ) ಪುನರುಚ್ಚರಿಸಿದೆ.

ಈ ಹೋರಾಟದಲ್ಲಿ 750ಕ್ಕೂ ಹೆಚ್ಚು ರೈತರು ಹುತಾತ್ಮರಾಗಿದ್ದಾರೆ. ಅವರು ಬಿಜೆಪಿ ಆಡಳಿತದಿಂದ ಮಿಲಿಟರಿ ಮಾದರಿಯ ರಸ್ತೆ ತಡೆಗಳು, ಬೆದರಿಕೆಗಳು, ಭೀತಿಕಾರಕ ಕೃತ್ಯಗಳು ಮತ್ತು ಕೊಲೆಗಡುಕ ದೈಹಿಕ ದಾಳಿಗಳನ್ನು ಎದುರಿಸಿದರು. ಇಂತಹ ಕೃತ್ಯಗಳಲ್ಲಿ ತೊಡಗಿರುವವರ ಎಲ್ಲರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ನಮ್ಮ ರೈತರ ದೃಢಸಂಕಲ್ಪ ಶ್ಲಾಘನಾರ್ಹ ಎಂದಿದೆ ಮತ್ತು ಅವರು ತಮ್ಮ ಹಳ್ಳಿಗಳಿಗೆ ಹಿಂದಿರುಗುವ ಮೊದಲು ಈ ಭರವಸೆಗಳು ಸಾಕಾರಗೊಳ್ಳುವ ವರೆಗೆ ಕಾಯುತ್ತಾರೆ ಎಂದಿರುವ ಸಂಯುಕ್ತ ಕಿಸಾನ್ ಮೋರ್ಚಾದ ನಿಲುವನ್ನು ಅನುಮೋದಿಸಿದೆ.

ರೈತರು ಮೋದಿ ಸರಕಾರಕ್ಕೆ ಪಾಟ ಕಲಿಸಿದ್ದಾರೆ ಎಂದು ನವಂಬರ್19ರ ಬೆಳಿಗ್ಗೆ ಸುದ್ದಿ ಪ್ರಕಾಟವಾದ ಕೂಡಲೇ ಸಿಪಿಐ(ಎಂ) ಸಂಯುಕ್ತ ಕಿಸಾನ್ ಮೋರ್ಚಾವನ್ನು ಮತ್ತು ಲಕ್ಷಾಂತರ ರೈತರನ್ನು ಹಾರ್ದಿಕವಾಗಿ ಅಭಿನಂದಿಸಿದ ಸಂದೇಶವನ್ನು ತನ್ನ ಫೇಸ್‌ಬುಕ್‌ನಲ್ಲಿ ಹಾಕಿತ್ತು.

ಇದು ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದ ಐಕ್ಯ ರೈತ ಹೋರಾಟಕ್ಕೆ ಒಂದು ಭಾರೀ ವಿಜಯ ಎಂದು ಅದು ವರ್ಣಿಸಿದೆ. ಮೋದಿ ಸರಕಾರದ ಎಲ್ಲ ಹೊಲಸು ತಂತ್ರಗಳು ಸೋಲು ಅನುಭವಿಸಿದವು, ಸರ್ವಾಧಿಕಾರಶಾಹಿ ಆಳ್ವಿಕೆ ಕೊನೆಗೂ ಕರಾಳ ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಲೇ ಬೇಕಾಗಿ ಬಂದಿದೆ.

ಸರ್ವಾಧಿಕಾರ ನಡೆಯುವುದಿಲ್ಲ ಎಂಬ ಪಾಟವನ್ನು ರೈತರು ಮೋದಿ ಸರಕಾರಕ್ಕೆ ಕಲಿಸಿದ್ದಾರೆ ಎಂದು ಸಿಪಿಐ(ಎಂ) ಹೇಳಿದೆ.



ಇದು ರೈತ ಆಂದೋಲನದ ಒಂದು ಐತಿಹಾಸಿಕ ವಿಜಯುವಾಗಲಿದೆ: ಸಂಯುಕ್ತ ಕಿಸಾನ್ ಮೋರ್ಚಾ

ಜೂನ್ 2020 ರಲ್ಲಿ ಮೊದಲು ಒಂದು ಸುಗ್ರೀವಾಜ್ಞೆಯಾಗಿ ತಂದ ಎಲ್ಲಾ ಮೂರು ರೈತ ವಿರೋಧಿ, ಕಾರ್ಪೊರೇಟ್-ಪರ ಕರಾಳ ಕಾನೂನುಗಳನ್ನು ರದ್ದುಗೊಳಿಸುವ ಭಾರತ ಸರ್ಕಾರದ ನಿರ್ಧಾರವನ್ನು ಭಾರತದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಗುರು ನಾನಕ್ ಜಯಂತಿ ಸಂದರ್ಭದಲ್ಲಿ ಪ್ರಕಟಿಸಿದ್ದಾರೆ.

ಈ ನಿರ್ಧಾರವನ್ನು ಸ್ವಾಗತಿಸಿರುವ ಸಂಯುಕ್ತ ಕಿಸಾನ್ ಮೋರ್ಚಾ, ಸೂಕ್ತ ಸಂಸದೀಯ ಪ್ರಕ್ರಿಯೆಗಳ ಮೂಲಕ ಪ್ರಕಟಣೆಯು ಜಾರಿಗೆ ಬರುವುದನ್ನು ಕಾಯುವುದಾಗಿ ಹೇಳಿದೆ. ಅದು ಸಂಭವಿಸಿದಲ್ಲಿ, ಇದು ಭಾರತದಲ್ಲಿ ಒಂದು ವರ್ಷದಿಂದ ನಡೆಯುತ್ತಿರುವ ರೈತ ಆಂದೋಲನದ ಒಂದು ಐತಿಹಾಸಿಕ ವಿಜಯವಾಗಲಿದೆ ಎಂದು ವರ್ಣಿಸಿದೆ.

ಆದರೆ, ಈ ಹೋರಾಟದಲ್ಲಿ ಸುಮಾರು 700 ರೈತರು ಹುತಾತ್ಮರಾಗಿದ್ದಾರೆ. ಲಖಿಂಪುರ ಖಿರಿ ಹತ್ಯಾಕಾಂಡ ಸೇರಿದಂತೆ ಈ ಸಾವುಗಳನ್ನು ತಪ್ಪಿಸಬಹುದಾಗಿತ್ತು. ಇದಕ್ಕೆ ಕೇಂದ್ರ ಸರ್ಕಾರದ ಹಟವೇ ಹೊಣೆಯಾಗಿದೆ ಎಂದೂ ಅದು ಹೇಳಿದೆ.

ರೈತರ ಈ ಚಳುವಳಿಯು ಮೂರು ಕರಾಳ ಕಾಯಿದೆಗಳನ್ನು ರದ್ದುಪಡಿಸಲು ಮಾತ್ರವಲ್ಲದೆ ಎಲ್ಲಾ ಕೃಷಿ ಉತ್ಪನ್ನಗಳಿಗೆ ಕಾನೂನಾತ್ಮಕ ಬೆಲೆ ಖಾತ್ರಿ ಮತ್ತು ಎಲ್ಲಾ ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ ಕೂಡ ಆಗಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಪ್ರಧಾನಿಗಳಿಗೆ ನೆನಪಿಸಿದೆ. ರೈತರ ಈ ಮಹತ್ವದ ಬೇಡಿಕೆ ಇನ್ನೂ ಬಾಕಿ ಇದೆ. ಅದೇ ರೀತಿ ವಿದ್ಯುತ್ ತಿದ್ದುಪಡಿ ಮಸೂದೆಯನ್ನೂ ಹಿಂಪಡೆಯಬೇಕಿದೆ. ಸಂಯುಕ್ತ ಕಿಸಾನ್ ಮೋರ್ಚಾ ಶೀಘ್ರದಲ್ಲೇ ತನ್ನ ಸಭೆಯನ್ನು ನಡೆಸುತ್ತದೆ, ಎಲ್ಲಾ ಘಟನೆಗಳನ್ನು ಪರಿಗಣಿಸಿ ಯಾವುದಾದರೂ ಮುಂದಿನ ನಿರ್ಧಾರಗಳಿದ್ದಲ್ಲಿ ಅವನ್ನು ಪ್ರಕಟಿಸುತ್ತದೆ ಎಂದು ಸಂಯುಕ್ತ ಕಿಸಾ??? ಮೋರ್ಚಾದ ಮುಖಂಡರಾದ ಬಲ್ಬೀರ್ ಸಿಂಗ್ ರಾಜೇವಾಲ್, ಡಾ. ದರ್ಶನ್ ಪಾಲ್, ಗುರ್ನಾಮ್ ಸಿಂಗ್ ಚಧುನಿ, ಹನ್ನನ್ ಮೊಲ್ಲಾ, ಜಗಜಿತ್ ಸಿಂಗ್ ದಲ್ಲೆವಾಲ್, ಜೋಗಿಂದರ್ ಸಿಂಗ್ ಉಗ್ರಹಾನ್, ಶಿವಕುಮಾರ್ ಶರ್ಮಾ (ಕಾಕ್ಕಾ ಜಿ) ಮತ್ತು ಯುಧ್ವೀರ್ ಸಿಂಗ್ ಜಂಟಿಯಾಗಿ ನೀಡಿರುವ ಈ ಹೇಳಿಕೆ ತಿಳಿಸಿದೆ.

ಡಿಸೆಂಬರ್ 1: ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ದಾಳಿಗಳ ವಿರುದ್ಧ ಪ್ರತಿಭಟನಾ ದಿನಾಚರಣೆ

ಸಂಘ ಪರಿವಾರಕ್ಕೆ ಸಂಯೋಜಿತವಾಗಿರುವ ಸಂಸ್ಥೆಗಳಿಂದ ಅಲ್ಪಸಂಖ್ಯಾತ- ಕ್ರಿಶ್ಚಿಯನ್ ಮತ್ತು ಮುಸ್ಲಿಂ- ಸಮುದಾಯಗಳ ವಿರುದ್ಧ ಹೆಚ್ಚುತ್ತಿರುವ ದಾಳಿಗಳ ಬಗ್ಗೆ ತನ್ನ ಗಂಭೀರ ಕಳವಳವನ್ನು ವ್ಯಕ್ತಪಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಇವು ಭಾರತದ ಸಂವಿಧಾನದ ಮೇಲಿನ ದಾಳಿಗಳಾಗಿವೆ, ಡಿಸೆಂಬರ್ 1ನ್ನು ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಅವರ ಸಾಂವಿಧಾನಿಕ ಹಕ್ಕುಗಳ ಮೇಲಿನ ದಾಳಿಗಳ ವಿರುದ್ಧ ಪ್ರತಿಭಟನೆಯ ದಿನವಾಗಿ ಆಚರಿಸಲು ಕರೆ ನೀಡಿದೆ.

ಸಾಮಾಜಿಕ ಮಾಧ್ಯಮ ವೇದಿಕೆ ಫೇಸ್‌ಬುಕ್‌ನ ಆಂತರಿಕ ದಾಖಲೆಗಳಲ್ಲಿ ಇತ್ತೀಚಿಗೆ ಬಯಲಿಗೆ ಬಂದಿರುವ ಸಂಗತಿಗಳು ಕೂಡ, ಬಿಜೆಪಿ ನಾಯಕರು ಹೇಗೆ ಅತ್ಯಂತ ಕೋಮುವಾದಿ ಸಂದೇಶಗಳನ್ನು ಉತ್ತೇಜಿಸಿದ್ದಾರೆ, ಅನೇಕ ಸಂದರ್ಭಗಳಲ್ಲಿ ಹಿಂಸಾಚಾರವನ್ನು ಪ್ರಚೋದಿಸಿದ್ದಾರೆ ಎಂಬುದನ್ನು ಒತ್ತಿಹೇಳುತ್ತವೆ. ಇಂತಹ ಕೋಮುವಾದಿ ಕೃತ್ಯಗಳನ್ನು ಎಸಗಿದವರು ಕಾನೂನಿನಿಂದ ವಿನಾಯಿತಿಯನ್ನು ಪಡೆಯುತ್ತಾರೆ ಮಾತ್ರವಲ್ಲ, ಸಂತ್ರಸ್ತರನ್ನು ರಕ್ಷಿಸುವ ಬದಲು, ಬಿಜೆಪಿ ಆಳ್ವಿಕೆಯ ಅನೇಕ ರಾಜ್ಯಗಳಲ್ಲಿನ ಆಡಳಿತವು ಸಂತ್ರಸ್ತರನ್ನು ಮತ್ತು ಅವರನ್ನು ಬೆಂಬಲಿಸುವವರನ್ನು ಸುಳ್ಳು ಪ್ರಕರಣಗಳ ಮೂಲಕ ಶಿಕ್ಷಿಸುತ್ತದೆ ಮತ್ತು ಕರಾಳ ಕಾನೂನುಗಳ ಅಂಶಗಳ ಅಡಿಯಲ್ಲಿ ಬಂಧಿಸುತ್ತದೆ.

ಮಾನವ ಹಕ್ಕುಗಳ ಗುಂಪುಗಳ ಇತ್ತೀಚಿನ ವರದಿಗಳು 2021 ರಲ್ಲಿ ಮೊದಲ ಒಂಬತ್ತು ತಿಂಗಳೊಳಗೆ ಕ್ರಿಶ್ಚಿಯನ್ ಸಮುದಾಯಗಳು ಮತ್ತು ಅವರ ಧಾರ್ಮಿಕ ಆರಾಧನಾ ಸ್ಥಳಗಳ ಮೇಲೆ 300 ದಾಳಿಗಳನ್ನು ದಾಖಲಿಸಿವೆ. ಇವುಗಳಿಗೆ ಗುರಿಯಾದವರು ಹೆಚ್ಚಿನವರು ಆದಿವಾಸಿ ಮತ್ತು ದಲಿತ ಸಮುದಾಯಗಳಿಗೆ ಸೇರಿದವರು. ಪ್ರಾರ್ಥನಾ ಸಭೆಗಳನ್ನು ನಿಯಮಿತವಾಗಿ ತಡೆಯಲಾಗುತ್ತಿದೆ ಮತ್ತು ಮತಾಂತರವನ್ನು ತಡೆಯುವ ಹೆಸರಿನಲ್ಲಿ ಭಾಗವಹಿಸುವವರನ್ನು ಥಳಿಸಲಾಗುತ್ತಿದೆ.

ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದ ಸದಸ್ಯರನ್ನು ಗುರಿಯಾಗಿಸಿಕೊಂಡು ದೊಂಬಿ ಹತ್ಯೆ, ಪೊಲೀಸ್ ಹತ್ಯೆಗಳು, ಸುಳ್ಳು ಬಂಧನಗಳು ಮತ್ತು ಅವರ ವಿರುದ್ಧ 'ಗೋ ರಕ್ಷಣೆ' ಮತ್ತು 'ಲವ್ ಜಿಹಾದ್' ಹೆಸರಿನಲ್ಲಿ ದೊಂಬಿ ಹಿಂಸಾಚಾರದ ಪ್ರಕರಣಗಳು ಮುಂದುವರಿದಿವೆ. ತೀರಾ ಇತ್ತೀಚಿನ ಉದಾಹರಣೆಯೆಂದರೆ ತ್ರಿಪುರಾದಲ್ಲಿ, ವಿಎಚ್‌ಪಿ ಗಲಭೆಕೋರರು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ದಾಳಿ ಮಾಡಿದ್ದಾರೆ, ಕೆಲವು ಮಸೀದಿಗಳನ್ನು ಹಾಳುಗೆಡವಿದ್ದಾರೆ. ಈ ದಾಳಿಗಳನ್ನು ವರದಿ ಮಾಡಿದವರ ವಿರುದ್ಧ ಯು.ಎ.ಪಿ.ಎ. ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಮತ್ತೊಂದು ಉದಾಹರಣೆಯೆಂದರೆ, ರಾಷ್ಟ್ರೀಯ ರಾಜಧಾನಿ ಪ್ರದೇಶದ ಭಾಗವಾದ ಗುರ್‌ಗಾಂವ್‌ನಲ್ಲಿ ಪ್ರಾರ್ಥನೆಗಳನ್ನು ಸಲ್ಲಿಸುವ ಹಕ್ಕನ್ನು ತಡೆಗಟ್ಟುತ್ತಿರುವುದು. ಮಧ್ಯಪ್ರದೇಶದ ಕೆಲವು ಭಾಗಗಳಲ್ಲಿ ಮುಸ್ಲಿಂ ಬೀದಿಬದಿ ವ್ಯಾಪಾರಿಗಳಿಗೆ ಬೆದರಿಕೆ ಹಾಕಲಾಗಿದೆ ಮತ್ತು ಅವರ ಜೀವನೋಪಾಯವನ್ನು ಮುಂದುವರಿಸದಂತೆ ತಡೆಯಲಾಗುತ್ತಿದೆ. ಅಸ್ಸಾಂನಲ್ಲಿ, ದಶಕಗಳಿಂದ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದ ಬಡ ರೈತ ಕುಟುಂಬಗಳನ್ನು ಅವರು ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ಎಂಬ ಕಾರಣಕ್ಕೇ ಅವರನ್ನು ಅಮಾನುಷವಾಗಿ ಹೊರಹಾಕಲಾಗಿದೆ. ಉತ್ತರ ಪ್ರದೇಶದಲ್ಲಿ ಮುಸ್ಲಿಮರ ವಿರುದ್ಧ ಎನ್‌ಎಸ್‌ಎ ಬಳಕೆ ಸಾಮಾನ್ಯವಾಗಿದೆ.

ಅಲ್ಪಸಂಖ್ಯಾತರ ಮೇಲಿನ ಈ ದಾಳಿಗಳು ಭಾರತದ ಸಂವಿಧಾನದ ಮೇಲಿನ ಒಂದು ದಾಳಿಯಾಗಿದೆ. ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಅವರ ಸಾಂವಿಧಾನಿಕ ಹಕ್ಕುಗಳ ಮೇಲಿನ ದಾಳಿಗಳ ವಿರುದ್ಧ ಡಿಸೆಂಬರ್ 1 ನ್ನು ಪ್ರತಿಭಟನೆಯ ದಿನವಾಗಿ ಆಚರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಸಿಬಿಐ ಮತ್ತು ಇಡಿ ನಿರ್ದೇಶಕರ ಕಾರ್ಯಾವಧಿ ಕುರಿತ ಸುಗ್ರೀವಾಜ್ಞೆಗಳು ಆಳುವ ಪಕ್ಷದ ಅಜೆಂಡಾದ ಜಾರಿಗಾಗಿ

ಸಿ.ಬಿ.ಐ. ಮತ್ತು ಇ.ಡಿ. ನಿರ್ದೇಶಕರ ಅಧಿಕಾರಾವಧಿಯನ್ನು ಎರಡರಿಂದ ಐದು ವರ್ಷಗಳವರೆಗೆ ವಿಸ್ತರಿಸಲು ಕೇಂದ್ರ ಸರ್ಕಾರಕ್ಕೆ ಅವಕಾಶ ನೀಡುವ ಎರಡು ಸುಗ್ರೀವಾಜ್ಞೆಗಳನ್ನು ಹೊರಡಿಸಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ.

ಸಿ.ಬಿ.ಐ. ಮತ್ತು ಇ.ಡಿ ಎರಡೂ ಆಡಳಿತ ಪಕ್ಷದ ಕಾರ್ಯಸೂಚಿಯನ್ನು ಮುನ್ನಡೆಸಲು ಅದರ ರಾಜಕೀಯ ಅಂಗವಾಗಿ ಕಾರ್ಯನಿರ್ವಹಿಸುತ್ತಿವೆ. ಪ್ರತಿಪಕ್ಷಗಳ ನಾಯಕರನ್ನು ನಿರಂತರವಾಗಿ ಗುರಿಯಾಗಿಸಲಾಗುತ್ತಿದೆ. ಈ ಏಜೆನ್ಸಿಗಳ ಸ್ವಾಯತ್ತತೆಯನ್ನು ಮತ್ತಷ್ಟು ಬುಡಮೇಲು ಮಾಡಲು ಮತ್ತು ಪ್ರಮುಖ ಅಧಿಕಾರಿಗಳನ್ನು ಆಳುವವರಿಗೆ ಹೆಚ್ಚು ವಿಧೇಯರನ್ನಾಗಿ ಮಾಡಲು ಈ ಕ್ರಮವನ್ನು ಕೈಗೊಳ್ಳಲಾಗಿದೆ ಎಂದಿರುವ ಸಿಪಿಐ(ಎಂ), ನವೆಂಬರ್ 29 ರಿಂದ ಆರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದ ಕೆಲವೇ ದಿನಗಳ ಮೊದಲು ಈ ಸುಗ್ರೀವಾಜ್ಞೆಗಳನ್ನು ಪ್ರಕಟಿಸಿರುವುದು ದೂಷಣೀಯ, ಬಿಜೆಪಿ ಮತ್ತೆ-ಮತ್ತೆ "ಸುಗ್ರೀವಾಜ್ಞೆ ರಾಜ್ಯಭಾರ'ಕೆ ಇಳಿಯುತ್ತಿರುವುದು ಪ್ರಜಾಪ್ರಭುತ್ವ-ವಿರೋಧಿಯಾಗಿದೆ ಎಂದು ಟೀಕಿಸಿದೆ.

ಈ ಸುಗ್ರೀವಾಜ್ಞೆಗಳು, ಯಾವುದೇ ಅಧಿಕಾರಾವಧಿಯ ವಿಸ್ತರಣೆಯು ಚಾಲ್ತಿಯಲ್ಲಿರುವ ತನಿಖೆಗೆ ಅನುಕೂಲವಾಗುವಂತೆ ಅಲ್ಪಾವಧಿಗೆ ಮತ್ತು "ಅಪರೂಪದ ಮತ್ತು ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ" ಇರಬೇಕು ಎಂದು ವಿಧಿಸಿರುವ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಬದಿಗೊತ್ತುವ ಗುರಿಯನ್ನು ಸಹ ಹೊಂದಿವೆ.. ಈ ಸುಗ್ರೀವಾಜ್ಞೆಗಳೊಂದಿಗೆ ಕೇಂದ್ರ ಸರ್ಕಾರವು ಈಗ ಮೂರು ಒಂದು-ವರ್ಷದ ವಿಸ್ತರಣೆಯನ್ನು ನೀಡಬಹುದು.

ಈ ಸುಗ್ರೀವಾಜ್ಞೆಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗ್ರಹಿಸಿದೆ. ಸಂಸತ್ತಿನಲ್ಲಿ ಈ ಸುಗ್ರೀವಾಜ್ಞೆಗಳನ್ನು ಕಾನೂನಾಗಿ ಪರಿವರ್ತಿಸುವ ಕ್ರಮವನ್ನು ಸಿಪಿಐ(ಎಂ) ಸಂಸದರು ವಿರೋಧಿಸುತ್ತಾರೆ ಎಂದು ಅದು ಹೇಳಿದೆ.

ಸರಕಾರದ ಇಲಾಖೆಗಳ ಹಾಗೂ ಸಂಸ್ಥೆಗಳ ಸರ್ವರ್ ಗಳ ಹ್ಯಾಕಿಂಗ್ ಹಗರಣವನ್ನು ಉನ್ನತ ಮಟ್ಟದ ಸ್ವತಂತ್ರ ನ್ಯಾಯಾಂಗ ತನಿಖೆಗೆ ವಹಿಸಿ – ಸಿಪಿಐಎಂ

ಸಾವಿರಾರು ಕೋಟಿ ರೂ ಮೌಲ್ಯದ ಬಿಟ್ ಕಾಯಿನ್ ಹಣಕಾಸು ಸಂಸ್ಥೆಗಳ ಸರ್ವರ್ ಗಳ ಹ್ಯಾಕಿಂಗ್ ಹಗರಣದಲ್ಲಿ ಪಾಲ್ಗೊಂಡ ಶ್ರೀಕಿ ಎಂಬ ಆರೋಪಿಯು, ರಾಜ್ಯ ಸರಕಾರದ ಇಲಾಖೆಗಳು ಮತ್ತು ಸಂಸ್ಥೆಗಳ ಸರ್ವರ್ ಗಳಿಗೆ ಕನ್ನ ಹಾಕಿ ಅಪಾರ ಪ್ರಮಾಣದ ಹಣವನ್ನು ಲಪಟಾಯಿಸಿರುವುದು ಮತ್ತು ಈತನ ಜೊತೆ ರಾಜ್ಯದ ಕೆಲ ಪ್ರಭಾವಿ ರಾಜಕಾರಣಿಗಳು, ಹಿರಿಯ ಅಧಿಕಾರಿಗಳು ಕೈ ಜೋಡಿಸಿ ಪಾಲು ಪಡೆದಿದ್ದಾರೆಂಬುದು ಬಹಳ ಗಂಭೀರವಾದ ವಿಚಾರವಾಗಿದೆ.

ಇದು, ಸರಕಾರದ ಬೊಕ್ಕಸವನ್ನು ವ್ಯವಸ್ಥಿತವಾಗಿ ಲೂಟಿ ಮಾಡಿದ ಸಂಚಿನ ಪ್ರಕರಣವಾಗಿದೆ. ಜನಧನ ಖಾತೆಯೊಂದರಿಂದಲೇ ಸುಮಾರು 6,000 ಕೋಟಿ ರೂ ಲಪಟಾಯಿಸಲಾಗಿದೆಯೆನ್ನಲಾಗಿದೆ. ಇದರಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳ ಪ್ರಭಾವಿ ರಾಜಕಾರಣಿಗಳು ಮತ್ತು ಮಂತ್ರಿಗಳು ಸೇರಿದ್ದಾರೆನ್ನಲಾಗಿದೆ.

ಸಾರ್ವಜನಿಕ ಬೊಕ್ಕಸದ ಹಣದ ಲೂಟಿಯ ಹಗರಣವನ್ನು ಪರಸ್ಪರ ಆರೋಪ, ಪ್ರತ್ಯಾರೋಪಗಳ ಮೂಲಕ ಮುಚ್ಚಿ ಹಾಕುವ ಆಡಳಿತ ಮತ್ತು ವಿರೋಧ ಪಕ್ಷಗಳ ಕ್ರಮವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ರಾಜ್ಯದ ನಾಗರೀಕರು ಮತ್ತು ಜನತೆ ಇದರಿಂದ ಆತಂಕಿತರಾಗಿದ್ದು ಸದರಿ ಲೂಟಿಕೋರ ಹಗರಣದ ಸತ್ಯಾಸತ್ಯತೆಯನ್ನು ತಿಳಿಯಲು ಬಯಸಿದ್ದಾರೆ. ಆದ್ದರಿಂದ ಈ ಲೂಟಿಕೋರ ಪ್ರಕರಣದಲ್ಲಿ ಹಿರಿಯ ಅಧಿಕಾರಿಗಳು, ಮಂತ್ರಿಗಳು, ಆಡಳಿತ ಮತ್ತು ವಿರೋಧ ಪಕ್ಷಗಳ ಪ್ರಭಾವಿಗಳು ಶಾಮೀಲಾಗಿರುವುದರಿಂದ, ಇದನ್ನು ಕೇವಲ ಸರಕಾರಿ ಇಲಾಖೆಗಳ ತನಿಖೆಯ ಕ್ರಮಗಳ ಮೂಲಕ ನಿಜವನ್ನು ಬಯಲಿಗೆಳೆಯಲಾಗುವುದೆಂಬುದು ಅಸಾಧ್ಯದ ವಿಚಾರವಾಗಿದೆ. ಬದಲಿಗೆ ಈ ಪ್ರಭಾವಿಗಳು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಈ ಹಗರಣವನ್ನು ಮುಚ್ಚಿ ಹಾಕಲು ಈ ಕ್ರಮ ನೆರವಾಗಬಹುದಾದ ಅಪಾಯವಿದೆ. ಈ ಪ್ರಕರಣದ ಆರೋಪಿಗೆ, ಈಗಾಗಲೇ ಆತನಿಗೆ ತಿಳಿಯದಂತೆ ಜಾಮೀನು ನೀಡಲಾಗಿದೆಯೆಂಬುದು ಇದನ್ನು ಮತ್ತಷ್ಟು ಪುಷ್ಟೀಕರಿಸುತ್ತದೆ.

ಆದ್ದರಿಂದ, ಸದರಿ ಪ್ರಕರಣವನ್ನು ಸರಕಾರದ ಇಲಾಖಾ ತನಿಖೆಯ ಬದಲಿಗೆ, ನ್ಯಾಯಾಂಗದ ಸುಪರ್ಧಿಯಲ್ಲಿ, ಉನ್ನತ ನ್ಯಾಯಾಂಗ ತನಿಖೆಗೊಳಪಡಿಸಲು ಅಗತ್ಯ ಕ್ರಮವಹಿಸುವಂತೆ ಮುಖ್ಯಮಂತ್ರಿಗಳನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ರಾಜ್ಯ ಘಟಕ ಬಲವಾಗಿ ಒತ್ತಾಯಿಸುತ್ತದೆ.

ಡಿಜಿಟಲ್ ಕರೆನ್ಸಿ ವಹಿವಾಟಿನ ಮೇಲೆ ನಿಯಂತ್ರಣ ವಿರಲಿ

ಅದೇ ರೀತಿ, ಅಧಿಕೃತ ಕರೆನ್ಸಿಗೆ ಸಮಾನಾಂತರವಾಗಿ ನಡೆಯುತ್ತಿರುವ ಡಿಜಿಟಲ್ ಕರೆನ್ಸಿಯ ಮುಕ್ತ ವಹಿವಾಟಿನ ಮೇಲೆ ಸರಕಾರಗಳ ಯಾವುದೇ ನಿಯಂತ್ರಣವಿಲ್ಲದೇ ಇರುವುದರಿಂದ, ಲಕ್ಷಾಂತರ ಕೋಟಿ ರೂಗಳ ಭಾರೀ ಮೊತ್ತದ ಇಂತಹ ವಹಿವಾಟುಗಳಲ್ಲಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ಸಿಗಬೇಕಾದ ಸಾವಿರಾರು ಕೋಟಿ ತೆರಿಗೆಯು ದೊರೆಯದಂತೆ ವಂಚಿಸಲ್ಪಡುತ್ತಿದೆ. ಇದರಿಂದಲೂ ಸರಕಾರಗಳ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿದೆ.

ಇಂತಹ ಕ್ರಮಗಳ ಮೂಲಕ ಸರಕಾರ ಬೊಕ್ಕಸವನ್ನು ತುಂಬಿಕೊಳ್ಳುವ ಬದಲು ಬಡವರು ಮತ್ತು ಸಾಮಾನ್ಯ ನಾಗರೀಕರನ್ನು ಸುಲಿಯುವ ಬೆಲೆ ಏರಿಕೆಯಂತಹ ಕ್ರಮಗಳಿಗೆ ಮುಂದಾಗುತ್ತಿರುವುದು ನಾಚಿಕೇಗೇಡಿನ ವಿಚಾರವಾಗಿದೆ.

ಈ ಕುರಿತು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅಗತ್ಯ ನಿಯಂತ್ರಣದ ಕ್ರಮಗಳನ್ನು ಕೈಗೊಳ್ಳುವಂತೆ ಮತ್ತು ಸಾರ್ವಜನಿಕ ಬೊಕ್ಕಸಕ್ಕೆ ನೆರವು ಪಡೆಯುವಂತೆ ಸಿಪಿಐ(ಎಂ) ಒತ್ತಾಯಿಸಿದೆ.

ರೈತರ ಐತಿಹಾಸಿಕ ಪ್ರತಿರೋಧಕ್ಕೆ ಮಣಿದ ಮೋದಿ ಸರಕಾರ – ಕೆಪಿಆರ್ಎಸ್

ದೇಶದ ಕೃಷಿಯನ್ನು ಕಾರ್ಪೋರೇಟ್ ಕಂಪನಿಗಳಿಗೆ ವಹಿಸಿಕೊಡುವ ನರೇಂದ್ರ ಮೋದಿಯವರ ಒಕ್ಕೂಟ ಸರಕಾರದ ದೇಶ ಹಾಗೂ ರೈತ ವಿರೋಧಿ ಕಾಯ್ದೆಗಳನ್ನು ಪ್ರತಿರೋಧಿಸಿ, ಕಳೆದೆರಡು ವರ್ಷಗಳಿಂದ ದೇಶವ್ಯಾಪ್ತಿಯಾಗಿ ಕೋಟ್ಯಾಂತರ ಜನ ಮತ್ತು ಮುಖ್ಯವಾಗಿ ದೆಹಲಿ ಸುತ್ತಲಿನ ಐದು ಪ್ರಮುಖ ಹೆದ್ದಾರಿಗಳನ್ನು ಬಂದ್ ಮಾಡಿ ಲಕ್ಷಾಂತರ ಜನ ಕಳೆದ 360 ದಿನಗಳಿಂದ ನಿರಂತರವಾಗಿ ನಡೆಸುತ್ತಿದ್ದ ಐತಿಹಾಸಿಕ ಮತ್ತು ಜಾಗತಿಕ ಗಮನ ಸೆಳೆದ ಸಮರ ಶೀಲ ಪ್ರತಿರೋಧಕ್ಕೆ ಮಣಿದ ಒಕ್ಕೂಟ ಸರಕಾರ, ಕಾರ್ಪೋರೇಟ್ ಕಂಪನಿಗಳ ಪರವಾದ ಕೃಷಿ ಕಾಯ್ದೆಗಳನ್ನು ವಾಪಾಸು ಪಡೆದಿರುವುದಾಗಿ ಪ್ರಕಟಿಸಿದೆ. ಇದು ದೇಶದ ರೈತರು, ಕಾರ್ಮಿಕರು ಹಾಗೂ ನಾಗರೀಕರ ಸಮರ ಶೀಲ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ಬಣ್ಣಿಸಿದೆ.

ಇದರಿಂದ ದೇಶದ ಕೃಷಿಯನ್ನು ಹಾಗೂ ಸ್ವಾವಲಂಬನೆಯನ್ನು ಕಬಳಿಸುವ ಕಾರ್ಪೋರೇಟ್ ಕಂಪನಿಗಳ ಹುನ್ನಾರಕ್ಕೆ ತೀವ್ರ ಹಿನ್ನಡೆಯಾದಂತಾಗಿದೆಯೆಂದು ಕರ್ನಾಟಕ ಪ್ರಾಂತ ರೈತ ಸಂಘ ಹರ್ಷ ವ್ಯಕ್ತ ಪಡಿಸುತ್ತದೆ. ಅದೇ ರೀತಿ, ಹೋರಾಟದಲ್ಲಿ ತೊಡಗಿದ ಎಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದೆ.

ಆದರೇ, ಇದು, ಶ್ರೀ ನರೇಂದ್ರ ಮೋದಿಯವರ ಈ ಪ್ರಕಟಣೆ ಸಂಸತ್ತಿನಲ್ಲಿ ಕ್ರಮವಹಿಸಿ ಖಾತರಿ ಪಡಿಸುವ ಮೂಲಕ ಮಾತ್ರವೇ ನಿಜವಾಗಲಿದೆ. ಆದ್ದರಿಂದ ನರೇಂದ್ರ ಮೋದಿಯವರು ಈ ಕುರಿತು ತ್ವರಿತ ಕ್ರಮಬಹಿಸುವಂತೆ ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸಿದೆ.

ಒಕ್ಕೂಟ ಸರಕಾರ ಈ ಕಾರ್ಪೋರೇಟ್ ಕೃಷಿಯನ್ನು ದೇಶದ ಮೇಲೆ ಬಲವಂತವಾಗಿ ಹೇರಲು ಹಟಮಾರಿ ನಿಲುವನ್ನು ತಾಳಿದ್ದರಿಂದ, ಹೋರಾಟ ನಿರತ ಸಾವಿರಾರು ರೈತರು ಹೋರಾಟದ ಕಣದಲ್ಲಿಯೇ ಸಾವಿಗೀಡಾಗುವಂತಾಯಿತು. ಲಾಠಿ ಚಾರ್ಜ, ಟಿಯರ್ ಗ್ಯಾಸ್ ಹಾಗೂ ವಾಟರ್ ಕೆನಾನ್, ಲಖಿಂಪುರದಲ್ಲಿ ವಾಹನಗಳನ್ನು ಹಾಯಿಸಿ ಕೊಲ್ಲುವ ದಾಳಿಗಳನ್ನು, ಗುಂಡಾ ದಾಳಿಗಳನ್ನು ಪೋಲೀಸರ ಹಿಂಸೆಗಳು, ಕೇಸುಗಳನ್ನು ಎದುರಿಸುವಂತಾಯಿತು. ಹೋರಾಟ ನಿರತರನ್ನು ನಕಲಿ ರೈತರೆಂದು ಅವಾಚ್ಯವಾಗಿ ನಿಂದಿಸಲಾಯಿತು. ಇದಕ್ಕೆಲ್ಲಾ ಬಿಜೆಪಿ ನೇತೃತ್ವದ ಒಕ್ಕೂಟ ಸರಕಾರವೇ ನೇರ ಹೊಣೆಗಾರನಾಗಿದೆಯೆಂದು ಕರ್ನಾಟಕ ಪ್ರಾಂತ ರೈತ ಸಂಘ ಖಂಡಿಸಿದೆ.

ಕರ್ನಾಟಕ ಸರಕಾರ ಒಕ್ಕೂಟ ಸರಕಾರದ ಈ ನೀತಿಗಳನ್ನು ಜಾರಿಗೊಳಿಸುವಲ್ಲಿ ತಾನೇ ಮೊದಲಿಗನೆಂದು ಬೀಗಿ, ಕಾರ್ಪೋರೇಟ್ ಕಂಪನಿಗಳಿಗೆ ರಾಜ್ಯದ ಕೃಷಿಯನ್ನು ವಹಿಸುವ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ ಮತ್ತು ಜಾನುವಾರು ಹತ್ಯಾ ನಮಾಡಿ ತಿದ್ದುಪಡಿ ಕಾಯ್ದೆಗಳನ್ನು ಜಾರಿಗೊಳಿಸಿದೆ. ಇವುಗಳನ್ನು ವಾಪಾಸು ಪಡೆಯುವ ಕುರಿತು ರಾಜ್ಯ ಸರಕಾರ ಮಾತನಾಡದೇ ಈಗಲೂ ಮೌನವಾಗಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘ ಬಲವಾಗಿ ಖಂಡಿಸುತ್ತದೆ. ರಾಜ್ಯ ಸರಕಾರವೂ ಒಕ್ಕೂಟ ಸರಕಾರದಂತೆ ಕ್ರಮವಹಿಸಿ, ಈ ಕೃಷಿ ವಿರೋಧಿ ಕಾಯ್ದೆಗಳನ್ನು ತಕ್ಷಣವೇ ವಾಪಾಸು ಪಡೆಯುವಂತೆ ಬಲವಾಗಿ ಒತ್ತಾಯಿಸಿದೆ.

ರಾಜ್ಯ ಸರಕಾರ ಈ ಕಾಯ್ದೆಗಳನ್ನು ವಾಪಾಸು ಪಡೆಯದೇ, ಒಕ್ಕೂಟ ಸರಕಾರ ವಾಪಾಸು ಪಡೆದುದರ ಪ್ರಯೋಜನ ನಮಗಿಲ್ಲವೆಂದು ರಾಜ್ಯದ ಜನತೆಗೆ ಸ್ಪಷ್ಟಪಡಿಸಿದೆ. ಹೀಗಾಗಿ, ರಾಜ್ಯದ ರೈತರು – ನಾಗರೀಕರು ಹೋರಾಟವನ್ನು ತೀವ್ರ ಗೊಳಿಸಲು ಕರೆ ನೀಡಿದೆ.

ಒಕ್ಕೂಟವಾದಿ ಸರಕಾರವೂ, ನಮ್ಮ ಹಕ್ಕೊತ್ತಾಯ ಗಳ ಹಲವು ಅಂಶಗಳನ್ನು ಪರಿಗಣಿಸಿಲ್ಲ. ಮುಖ್ಯವಾಗಿ, ರೈತರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಖಾತರಿ ಪಡಿಸುವ ಕಾಯ್ದೆ ಹಾಗೂ ರೈತರ – ಕೃಷಿಕೂಲಿಕಾರರ ಸಾಲ ಮನ್ನಾ ಮಾಡುವ ಋಣ ಮುಕ್ತ ಕಾಯ್ದೆ ರಚನೆ ಕುರಿತು ಮತ್ತು ವಿದ್ಯುತ್ ತಿದ್ದುಪಡಿ ಮಸೂದೆ ವಾಪಾಸು ಪಡೆಯುವ ಕುರಿತು ಮೌನ ವಹಿಸಿದೆ ಮಾತ್ರವಲ್ಲಾ, ದೇಶದ ಕಾರ್ಮಿಕ ವರ್ಗವನ್ನು ಕಾರ್ಪೋರೇಟ್ ಸುಲಿಗೆಗೊಳಪಡಿಸಿದ ಕಾರ್ಮಿಕ ಸಂಹಿತೆಗಳ ಕುರಿತು ಏನನ್ನು ಮಾತನಾಡಿಲ್ಲ. ಹೀಗಾಗಿ ಈ ಪ್ರಶ್ನೆಗಳಿಗಾಗಿ ಹೋರಾಟ ಮುಂದುವರೆಯಲಿದೆಯೆಂದು ಸ್ಪಷ್ಟ ಪಡಿಸಿದೆ. ಈ ಎಲ್ಲಾ ಜನಪರ ಹಾಗೂ ದೇಶದ ಸ್ವಾವಲಂಬಿ ಹೋರಾಟವನ್ನು ತೀವ್ರಗೊಳಿಸುವಂತೆ ಜನತೆಗೆ ಕರೆ ನೀಡಿದೆ. ತೀವ್ರ ತೆರನಾದ ಮತ್ತು ದೀರ್ಘಕಾಲದ ನಿರಂತರ ಹೋರಾಟಗಳು ಜನತೆಗೆ ಜಯವನ್ನು ತಂದುಕೊಡಲಿವೆಯೆಂಬುದಕ್ಕೆ ಈ ಚಳುವಳಿ ಸಾಕ್ಷಿಯಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ವಿವರಿಸಿದೆ.

ದೇಶದ ರೈತರ ಚಾರಿತ್ರಿಕ ಹೋರಾಟಕ್ಕೆ ಸಂದ ಬಾರಿ ದೊಡ್ಡ ವಿಜಯ

ಕರಾಳ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ಸು ಪಡೆಯುವುದಾಗಿ ಪ್ರಧಾನಿ ಮೋದಿಯವರು ಮಾಡಿರುವ ಘೋಷಣೆ ದೇಶದ ರೈತರ ಚಾರಿತ್ರಿಕ ಹೋರಾಟಕ್ಕೆ ಸಂದ ಬಾರಿ ದೊಡ್ಡ ವಿಜಯವಾಗಿದೆ. ಈ ಹೋರಾಟಕ್ಕೆ ಕಾರಣೀಭೂತರಾದ ಮಳೆ, ಚಳಿ, ಬಿಸಿಲು, ಬೆದರಿಕೆಗಳನ್ನು ಲೆಕ್ಕಿಸದೇ ದೆಹಲಿಯ ಗಡಿಗಳಲ್ಲಿ ಸತತ ಒಂದು ವರ್ಷದಿಂದ ಹೋರಾಟ ನಡೆಸಿದ ಲಕ್ಷಾಂತರ ರೈತರು ಹಾಗು ಇದರ ಭಾಗವಾಗಿ ದೇಶಾದ್ಯಂತ ವ್ಯಾಪಕ ಹೋರಾಟ ನಡೆಸಿದ ರೈತರು, ದಲಿತರು, ಕಾರ್ಮಿಕರನ್ನು ಸಂಯುಕ್ತ ಹೋರಾಟ–ಕರ್ನಾಟಕ ಅಭಿನಂದಿಸಿದೆ.

ಕರಾಳ ಮೂರು ಕೃಷಿ ಕಾಯ್ದೆಗಳ ವಾಪಸ್ಸಾತಿಯ ಘೋಷಣೆ ಮಾಡಿದ ಪ್ರಧಾನಿ ಮೋದಿಯವರು ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡುವ ಕಾನೂನು ರಚನೆಯ ಬಗ್ಗೆ ಹಾಗು ವಿದ್ಯುತ್ ಕ್ಷೇತ್ರದ ಸಂಪೂರ್ಣ ಖಾಸಗಿಕರಣಕ್ಕೆ ಅವಕಾಶ ಮಾಡಿಕೊಡುವ ವಿದ್ಯುತ್ ಮಸೂದೆ–2020 ರ ವಾಪಸಾತಿಯ ಬಗ್ಗೆ ಮೌನ ವಹಿಸಿದ್ದಾರೆ. ಈ ಬೇಡಿಕೆಗಳನ್ನು ಸಹ ಈಡೇರಿಸಬೇಕೆಂದು ಸಂಯುಕ್ತ ಹೋರಾಟ–ಕರ್ನಾಟಕ ಆಗ್ರಹಿಸಿದೆ.

ಬಿಜೆಪಿ ರಾಜ್ಯ ಸರ್ಕಾರವೂ ಮೋದಿಯವರ ದಾರಿಯಲ್ಲಿ ಹೆಜ್ಜೆ ಹಾಕಬೇಕು:

ಇನ್ನೂ ಮುಖ್ಯವಾಗಿ ರೈತರ ಒಂದು ವರ್ಷದ ಸತತ ಹೋರಾಟದ ಕಾರಣದಿಂದ ತಮ್ಮ ತಪ್ಪಿನ ಅರಿವು ಆಗಿ ಕರಾಳ ಕೃಷಿ ಕಾಯ್ದೆ ವಾಪಸ್ಸು ಪಡೆಯುವುದಾಗಿ ಮೋದಿಯವರು ಘೋಷಣೆ ಮಾಡಿದ್ದಾರೆ. ಆದರೆ ಅದೇ ಬಿಜೆಪಿಯ ರಾಜ್ಯ ಸರ್ಕಾರ ಈ ಕಾಯ್ದೆಯ ಮುಖ್ಯ ಅಂಶಗಳಾದ ಭೂಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ ತಿದ್ದುಪಡಿಗಳನ್ನು ತಂದು ಬಾರಿ ವೇಗವಾಗಿ ಜಾರಿ ಮಾಡುತ್ತಿದೆ.

ಮೋದಿಯವರು ಕೃಷಿ ಕಾಯ್ದೆಗಳ ವಾಪಸಾತಿಯ ಬಗ್ಗೆ ಮಾಡಿರುವ ಘೋಷಣೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರು ಪ್ರಧಾನಿ ಮೋದಿಯವರ ಹಾದಿಯಲ್ಲಿ ಹೆಜ್ಜೆ ಹಾಕಿ, ಭೂ ಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆಗಳ ತಿದ್ದುಪಡಿಗಳನ್ನು ಕೂಡಲೇ ರದ್ದು ಮಾಡಬೇಕೆಂದು ಸಂಯುಕ್ತ ಹೋರಾಟ–ಕರ್ನಾಟಕ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ. ಇಲ್ಲವಾದಲ್ಲಿ ರಾಜ್ಯದಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದೆಂದು ಸಂಯುಕ್ತ ಹೋರಾಟ–ಕರ್ನಾಟಕ ಎಚ್ಚರಿಕೆ ನೀಡಿದೆ.

ಹೋರಾಟ ಮುಂದುವರಿಯುತ್ತದೆ:

ಕೇಂದ್ರದಲ್ಲಿ ಕನಿಷ್ಠ ಬೆಂಬಲ ಬೆಲೆ ಖಾತರಿಯ ಕಾನೂನು, ವಿದ್ಯುತ್ ಮಸೂದೆ–2020 ರ ವಾಪಸಾತಿ ಹಾಗು ರಾಜ್ಯ ಸರ್ಕಾರ ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ, ಗೋಹತ್ಯೆ ನಿಷೇಧ ಕಾಯ್ದೆ ತಿದ್ದುಪಡಿಗಳ ವಾಪಸಾತಿ, ಕಾರ್ಮಿಕ ಸಂಹಿತೆ ರದ್ದತಿ, ಸಾರ್ವಜನಿಕ ಉದ್ಯಮಗಳ ಖಾಸಗೀಕರಣಕ್ಕೆ ತಡೆ, ಅಗತ್ಯ ವಸ್ತುಗಳ ಬೆಲೆ ಏರಿಕೆಯ ನಿಯಂತ್ರಣ, ಸತತ ಮಳೆಯಿಂದ ಬೆಳೆ ನಷ್ಟಕ್ಕೆ ಪರಿಹಾರ, ಹಾಲಿನ ದರ ಇಳಿಕೆಯ ವಿರುದ್ಧ ಮತ್ತಿತರೆ ಬೇಡಿಕೆಗಳನ್ನು ಈಡೇರಿಸುವ ತನಕ ರಾಜ್ಯದಲ್ಲಿ ಹೋರಾಟವನ್ನು ಮುಂದುವರಿಸಲು ಸಂಯುಕ್ತ ಹೋರಾಟ–ಕರ್ನಾಟಕ ನಿರ್ಧರಿಸಿದೆ.



'ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಸುರಕ್ಷತೆ: ಕಾನೂನು-ಸರ್ಕಾರದ ಧೋರಣೆ-ರಾಜಕೀಯ ಪರಿಹಾರ'

ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ 23 ನೇ ಸಮ್ಮೇಳನ 27–28, ನವೆಂಬರ್ 2021 ರಂದು ಯಲಹಂಕದಲ್ಲಿ ನಡೆಯಲಿದ್ದು, ಈ ಸಮ್ಮೇಳನದ ಅಂಗವಾಗಿ ನವೆಂಬರ್ 19, ಬೆಂಗಳೂರಿನ ಆರ್. ಟಿ. ನಗರ ದಲ್ಲಿ "ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಸುರಕ್ಷತೆ: ಕಾನೂನು– ಸರ್ಕಾರದ ಧೋರಣೆ– ರಾಜಕೀಯ ಪರಿಹಾರ" ವಿಷಯದ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಮಹಾಂತೇಶ್ ರವರು ವಿಷಯ ಮಂಡಿಸಿದರು.

ಮುಖ್ಯ ಅತಿಥಿಗಳಾದ ಸಿಪಿಐಎಂ ಉತ್ತರ ವಲಯ ಸಮಿತಿ ಕಾರ್ಯದರ್ಶಿ ಹುಳ್ಳಿ ಉಮೇಶ್, ಸಿಪಿಐಎಂ ಆರ್.ಟಿ. ನಗರ ಶಾಖೆಯ ಮುಖಂಡರಾದ ಕಾಮ್ರೇಡ್ ಖಾಸಿಂ ಸಾಬ್, ಶಿವರಾಜ್ ಭಾಗವಹಿಸಿ ಮಾತನಾಡಿದರು. ಎಸ್. ಕುಮಾರ್, ಹಿರಿಯ ಮುಖಂಡರಾದ ಕಾಮ್ರೇಡ್ ಟಿ.ಕೆ. ಎಸ್.ಕುಟ್ಟಿ, ಕಾಮ್ರೇಡ್ ಶಾಮಿನಾಥನ್, ಸಿಪಿಐಎಂ ವಲಯ ಸಮಿತಿ ಸದಸ್ಯರಾದ ಹನುಮಂತರಾವ್ ಹವಲ್ದಾರ್, ಮನೆಕೆಲಸಗಾರರ ಸಂಘದ ಮುಖಂಡರಾದ ಮೇರಿ, ಸುಜಾತಾ, ಮಹಿಳಾ ಮುಖಂಡರಾದ ಸೆಲ್ವಿ ಯವರು ಭಾಗವಹಿಸಿದ್ದರು. ಕಾಮ್ರೇಡ್ ಟಿ.ಕೆ.ಎಸ್ ಕುಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ವಿಚಾರ ಸಂಕಿರಣದಲ್ಲಿ ಕಟ್ಟಡ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಆಟೋ ಚಾಲಕರು, ಮನೆ ಕೆಲಸಗಾರರು ಭಾಗವಹಿಸಿದ್ದರು.



ಕಾರ್ಪೋರೇಟ್ ಮಾಧ್ಯಮಗಳಿಗೆ ಬದಲಿಯಾಗಿ ಜನತಾ ಮಾಧ್ಯಮ ಕಟ್ಟಲು ಪಣ

ಜನಶಕ್ತಿ ಶಾಖಾ ಸಮ್ಮೇಳನವು ನವೆಂಬರ್ 1, 2021ರಂದು ಬೆಂಗಳೂರಿನ ಸೂರಿ ಭವನದಲ್ಲಿ ನಡೆಯಿತು. ಕಾ. ಕೆ.ಎಸ್.ವಿಮಲ ಸಮ್ಮೇಳನದ ಉದ್ಘಾಟನಾ ಭಾಷಣ ಮಾಡಿ ರಾಷ್ಟ್ರೀಯ ಹಾಗೂ ರಾಜ್ಯದ ವಿದ್ಯಮಾನಗಳು, ಇಂದಿನ ಪರಿಸ್ಥಿತಿಗಳ ಬಗ್ಗೆ ಮಾತನಾಡಿ ಮುಂದಿನ ಕರ್ತವ್ಯಗಳ ಬಗ್ಗೆ ಮಾತನಾಡಿದರು. ಕಾ. ವಸಂತರಾಜ ಎನ್.ಕೆ ಉದ್ಘಾಟನಾ ಸಭೆಯಲ್ಲಿ ಮಾತನಾಡುತ್ತಾ ದೇಶ/ರಾಜ್ಯದಲ್ಲಿ ಮಾಧ್ಯಮ ಪರಿಸ್ಥಿತಿ, ಜನತಾ ಮಾಧ್ಯಮದ ಪರಿಕಲ್ಪನೆ, ಈ ಅವಧಿಯಲ್ಲಿ ವಿವಿಧ ಮಾಧ್ಯಮ ಕ್ಷೇತ್ರಗಳಲ್ಲಿ ಪ್ರಮುಖ ಚಟುವಟಿಕೆಗಳು, ಮುಂದಿನ ಯೋಜನೆಗಳ ಬಗ್ಗೆ ವಿವರಿಸಿದರು. ಕಾರ್ಪೋರೇಟ್ ಮಾಧ್ಯಮಗಳಿಗೆ ಜನತಾ ಮಾಧ್ಯಮ ಕಟ್ಟಲು ಪಣ ತೊಡಬೇಕು ಎಂದು ಕರೆ ನೀಡಿದರು.

ಇದಕ್ಕಿಂತ ಮೊದಲು ಅಂದೇ ಬೆಳಿಗ್ಗೆ 11 ಗಂಟೆಗೆ **"ಕಾರ್ಪೋರೇಟ್ ಮಾಧ್ಯಮಗಳಿಗೆ ಬದಲಿಯಾಗಿ 'ಜನತಾ ಮಾಧ್ಯಮ' ಕಟ್ಟುವ ಅನುಭವಗಳು ಮತ್ತು ಸವಾಲುಗಳು"** ಎಂಬ ವಿಷಯವಾಗಿ ಭೌತಿಕ + ಆನ್ ಲೈನ್ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಪ್ರಸಿದ್ಧ ಇಂಗ್ಲಿಷ್ ವೆಬ್ ಪತ್ರಿಕೆ ನ್ಯೂಸ್ ಕ್ಲಿಕ್ ಪ್ರಧಾನ ಸಂಪಾದಕ ಹಾಗೂ ಮಾರ್ಕ್ಸ್‌ವಾದಿ ಚಿಂತಕ **ಕಾ. ಪ್ರಬೀರ್ ಪುರಕಾಯಸ್ಥ** ವಿಷಯ ಮಂಡನೆ ಮಾಡಿದರು. ಆ ನಂತರದ ನಡೆದ ಸಂವಾದದಲ್ಲಿ ಹಲವು ವರ್ಷಗಳಿಂದ ನಡೆಯುತ್ತಿರುವ ಕನ್ನಡ ವೆಬ್ ಪತ್ರಿಕೆಗಳ ಸಂಪಾದಕರುಗಳಾದ **ಶಶಿ ಸಂಪಳ್ಳಿ** (ಪ್ರತಿಧ್ವನಿ ನ್ಯೂಸ್), **ಸಿರಾಜ್ ಬಿಸರಳ್ಳಿ** (ಕನ್ನಡನೆಟ್.ಕಾಂ) ಭಾಗವಹಿಸಿದ್ದರು. **ಕಾ.ವಸಂತರಾಜ ಎನ್.ಕೆ** ಪ್ರಸ್ತಾವನೆ ಮತ್ತು ಸಮಾರೋಪದ ಮಾತುಗಳನ್ನಾಡಿದರು. ಕಾ. ಗುರುರಾಜ ದೇಸಾಯಿ ಕಾರ್ಯಕ್ರಮ ನಡೆಸಿಕೊಟ್ಟರು.



ಜನಶಕ್ತಿ ಶಾಖಾ ಸಮ್ಮೇಳನವು ಮಧ್ಯಾಹ್ನ 2.30 ರಿಂದ ನಡೆಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾ. ವೇದರಾಜ ಎನ್.ಕೆ. ವಹಿಸಿದ್ದರು. ರಾಜ್ಯ ಸಮಿತಿಯಿಂದ ವೀಕ್ಷಕರಾಗಿ ಕಾ.ಕೆ.ಎಸ್.ವಿಮಲ ಹಾಜರಿದ್ದು ಸಮ್ಮೇಳನಕ್ಕೆ ಮಾರ್ಗದರ್ಶನ ನೀಡಿದರು. ಮೊದಲಿಗೆ ಈ ಅವಧಿಯಲ್ಲಿ ನಿಧನ ಹೊಂದಿದ ದುಡಿಯುವ ವರ್ಗದ ಅಂತರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯದ ನಾಯಕರು, ನಾಡಿಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರು – ಇವರುಗಳಿಗೆ 1 ನಿಮಿಷ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶ್ರದ್ಧಾಂಜಲಿ ನಿರ್ಣಯವನ್ನು ಕಾ. ಗುರುರಾಜ ದೇಸಾಯಿ ಅವರು ಓದಿದರು.

ಶಾಖಾ ಕಾರ್ಯದರ್ಶಿ ಕಾ. ವಸಂತರಾಜ ಎನ್.ಕೆ. ವರದಿಯನ್ನು ಮಂಡಿಸಿದರು. ವರದಿಯಲ್ಲಿ ದೇಶದ ರಾಜ್ಯದ ಮಾಧ್ಯಮ ಪರಿಸ್ಥಿತಿ; ಜನಶಕ್ತಿ ವಾರಪತ್ರಿಕೆಯ ಸಂಪಾದಕೀಯ, ಪ್ರಸಾರ, ವಾರ್ಷಿಕ ಉತ್ಸವ ಮತ್ತು ವಿತರಣೆಗಳ ನಿರ್ವಹಣೆಯಲ್ಲಿ ಸಾಧನೆಗಳು, ನ್ಯೂನತೆಗಳು ಮತ್ತು ಮುಂದಿನ ಯೋಜನೆ; ವೆಬ್ ಮಾಧ್ಯಮ ಬೆಳೆಸುವ ಕೆಲಸದಲ್ಲಿ ಪ್ರಗತಿ, ಸವಾಲುಗಳು, ಮುಂದಿನ ಯೋಜನೆಗಳು; ಪುಸ್ತಕ ಪ್ರಕಟಣೆಯಲ್ಲಿ ಪ್ರಗತಿ, ನ್ಯೂನತೆಗಳು, ಮುಂದಿನ ಯೋಜನೆಗಳು; ಮುದ್ರಣ ಘಟಕದಲ್ಲಿ ಪ್ರಗತಿ, ನ್ಯೂನತೆಗಳು, ಮುಂದಿನ ಯೋಜನೆಗಳು; ಪಕ್ಷದ ಸಾಮಾಜಿಕ ಮಾಧ್ಯಮದ ಕೆಲಸದಲ್ಲಿ ಪ್ರಗತಿ, ಸವಾಲುಗಳು, ಮುಂದಿನ ಯೋಜನೆಗಳು – ಇವುಗಳನ್ನು ಕರಡು ವರದಿಯಲ್ಲಿ ವಿವರವಾಗಿ ಕೊಡಲಾಗಿದೆ. ಶಾಖೆಯ ವರದಿಯನ್ನು ಸಾಗ್ವತಿಸುತ್ತಾ ಕರಡು ವರದಿಯ ಮೇಲಿನ ಚರ್ಚೆಗಳಲ್ಲಿ ಎಲ್ಲಾ ಶಾಖಾ ಸದಸ್ಯರು ಭಾಗವಹಿಸಿ, ವರದಿಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು ಹಾಗೂ ವರದಿಯಲ್ಲಿ ಸೇರ್ಪಡೆಯಾಗಬೇಕಾದ ಅಂಶಗಳನ್ನು ಸೂಚಿಸಿದರು. ಶಾಖಾ ಕಾರ್ಯದರ್ಶಿ ಚರ್ಚೆಗೆ ಉತ್ತರಿಸಿ ವರದಿಯಲ್ಲಿ ಸೂಚಿಸಿದ ಅಂಶಗಳನ್ನು ಸೇರ್ಪಡೆ ಮಾಡುವುದಾಗಿ ಹೇಳಿದರು.

ಕಾ. ಗುರುರಾಜ ದೇಸಾಯಿ ಅವರನ್ನು ನೂತನ ಶಾಖಾ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಮೂವರು ಸಂಗಾತಿಗಳನ್ನು ಸರ್ವಾನುಮತದಿಂದ ಗಂಗಾವತಿ, ಕೊಪ್ಪಳದಲ್ಲಿ ಜನವರಿ 2022ರಲ್ಲಿ ನಡೆಯಲಿರುವ 23ನೇ ರಾಜ್ಯ ಸಮ್ಮೇಳನದ ಪ್ರತಿನಿಧಿಗಳಾಗಿ ಮತ್ತು ಒಬ್ಬ ಸಂಗಾತಿಯನ್ನು ವೀಕ್ಷಕರಾಗಿ ಆಯ್ಕೆ ಮಾಡಲಾಯಿತು. ಶಾಖಾ ಸಮ್ಮೇಳನವು **"ಜನಶಕ್ತಿ ಪ್ರಸಾರವನ್ನು 10 ಸಾವಿರಕ್ಕೆ ಹೆಚ್ಚಿಸಿ"** ಮತ್ತು **"ಮಾಧ್ಯಮಗಳ ಮತ್ತು ಪತ್ರಕರ್ತರ ಮೇಲೆ ದಾಳಿ ನಿಲ್ಲಿಸಿ ! ಮಾಧ್ಯಮ ಸ್ವಾತಂತ್ರ್ಯ ರಕ್ಷಿಸಿ !!"** ಎಂಬ ನಿರ್ಣಯಗಳನ್ನು ಅಂಗೀಕರಿಸಿ 23ನೆಯ ರಾಜ್ಯ ಸಮ್ಮೇಳನದಲ್ಲಿ ಸಹ ಈ ಎರಡು ನಿರ್ಣಯಗಳನ್ನು ಮಂಡಿಸಬೇಕೆಂದು ರಾಜ್ಯ ಸಮಿತಿಯನ್ನು ಒತ್ತಾಯಿಸಿತು. ನೂತನ ಕಾರ್ಯದರ್ಶಿ ಕಾ. ಗುರುರಾಜ ದೇಸಾಯಿ ಮಾತನಾಡಿ ಕಾರ್ಪೋರೇಟ್ ಮಾಧ್ಯಮಗಳಿಗೆ ಜನತಾ ಮಾಧ್ಯಮ ಕಟ್ಟುವ ಸವಾಲಿನ ಕೆಲಸದಲ್ಲಿ ನಾಯಕತ್ವ ನೀಡುವ ಜವಾಬ್ದಾರಿ ನಿರ್ವಹಿಸುವುದಾಗಿ ಭರವಸೆ ನೀಡಿದರು.

ಭಾರತದ ಶ್ರಮಜೀವಿಗಳ ವಿಜಯ ಎಸ್‌ಕೆಎಂ ನೇತೃತ್ವದಲ್ಲಿ ಐತಿಹಾಸಿಕ ರೈತರ ಹೋರಾಟ

ಕೃಷಿ ಕಾಯಿದೆಗಳನ್ನು ಹಿಂತೆಗೆದುಕೊಳ್ಳುವುದಾಗಿ ಘೋಷಿಸಲು ಮತ್ತು ದೇಶದ ಜನತೆಯಲ್ಲಿ ಕ್ಷಮೆಯಾಚಿಸಲು ಪ್ರಧಾನಿಗೆ ಅನಿವಾರ್ಯತೆ ಸೃಷ್ಟಿಸಿದ ಚಳುವಳಿ ಕಳೆದ ವರ್ಷ ತಮ್ಮ ಸರ್ಕಾರ ಜಾರಿಗೆ ತಂದ ಮೂರು ಕೃಷಿ ಕಾಯ್ದೆಗಳನ್ನು ತಮ್ಮ ಸರ್ಕಾರ ಹಿಂಪಡೆಯಲಿದೆ ಎಂದು ಭಾರತದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಮಾಧ್ಯಮಗಳ ಮೂಲಕ ನೀಡಿದ ಹೇಳಿಕೆಯನ್ನು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಗಮನಿಸುತ್ತದೆ. ಇದಕ್ಕೆ ಸಂಸತ್ತಿನ ಕಾರ್ಯವಿಧಾನಗಳ ಅನ್ವಯ ಶಾಸನವನ್ನು ತರಬೇಕಾಗಿದೆ. ಟ್ರೇಡ್ ಯೂನಿಯನ್ ಚಳವಳಿಯ, ಕಾರ್ಮಿಕ ವರ್ಗದ, ಜನತೆಯ, ಎಲ್ಲಾ ವರ್ಗಗಳ ಜನರ ಬೆಂಬಲದೊಂದಿಗೆ ಸಕ್ರಿಯ ಬೆಂಬಲದೊಂದಿಗೆ ದೃಢತಡೆಯಿಂದ ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ರೈತರು ನಡೆಸಿದ ನಿರಂತರ ಹೋರಾಟವು ಆಳರಸರು ಒಂದು ಹೆಜ್ಜೆ ಹಿಂದೆ ಇಡುವಂತೆ ಮಾಡಿದೆ. ಇದಲ್ಲದೆ ಪ್ರಧಾನಿ ರಾಷ್ಟ್ರದ ಕ್ಷಮೆಯಾಚಿಸುವಂತೆ ಮಾಡಿದೆ. ಸಂಪತ್ತು ಉತ್ಪಾದಿಸುವ ವರ್ಗ, ಕಾರ್ಮಿಕರು ಮತ್ತು ರೈತರು ಆಡಳಿತದ ಜನವಿರೋಧಿ ನೀತಿಗಳನ್ನು ಎಂದಿಗೂ ಒಪ್ಪಿಕೊಳ್ಳುವುದಿಲ್ಲ ಎಂಬ ಸ್ಪಷ್ಟಸಂದೇಶ ಇದು ನೀಡಿದೆ. ಅದೇ ಸಮಯದಲ್ಲಿ ಉದ್ದೇಶಿತ ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಹಿಂತೆಗೆದುಕೊಳ್ಳುವ ವಿಷಯದ ಬಗ್ಗೆ ಮತ್ತು ಎಲ್ಲಾ ಬೆಳೆಗಳಿಗೆ ಖಾತರಿಪಡಿಸಿದ ಉತ್ಪಾದಕ ವೆಚ್ಚ + 50% ದರದಲ್ಲಿ ಕನಿಷ್ಠ ಬೆಂಬಲ ಬೆಲೆಯನ್ನು ಶಾಸನಬದ್ಧವಾಗಿ ಜಾರಿಗೊಳಿಸುವ ವಿಷಯದ ಕುರಿತು ಪ್ರಧಾನಿಯವರು ಮೌನವಾಗಿದ್ದಾರೆ. ರೈತರ ಹೋರಾಟದ ಪ್ರಮುಖ ಬೇಡಿಕೆಗಳನ್ನು ಹಾಗು ಸಮಸ್ಯೆಗಳ ಬಗ್ಗೆ ಹರಿಸಲು ಸರ್ಕಾರ ಒಪ್ಪಿಕೊಳ್ಳಬೇಕು ಎಂದು ಸಿಐಟಿಯು ಅಗ್ರಹಿಸಿದೆ. ಈ ಹೋರಾಟದಲ್ಲಿ ಸುಮಾರು 700 ರೈತರು ಪ್ರಾಣ ತ್ಯಾಗ ಮಾಡಿದ್ದಾರೆ. ಲಖಿಂಪುರ ಖೇರಿಯಲ್ಲಿ ನಾಲ್ವರು ರೈತರ ಮತ್ತು ಪತ್ರಕರ್ತನ ಭೀಕರ ಹತ್ಯೆಯ ಆರೋಪಿ ಪ್ರಮುಖ ಆರೋಪಿಯಾಗಿರುವ ಶ್ರೀ ಅಜಯ್ ಮಿಶ್ರಾ ತೇನಿ ಇನ್ನೂ ಮೋದಿ ಸಂಪುಟದಲ್ಲಿ ಸಚಿವರಾಗಿ ಮುಂದುವರಿದಿದ್ದಾರೆ. ಕೊಲೆ ಆರೋಪಿಗಳನ್ನು ಕೂಡಲೇ ಬಂಧನಕ್ಕೆ ಒಳಪಡಿಸಬೇಕು.

ಸರ್ಕಾರದ ರೈತ ವಿರೋಧಿ, ಜನ ವಿರೋಧಿ ನೀತಿಗಳನ್ನು ಹಿಮ್ಮೆಟ್ಟುವಿಕೆಯನ್ನು ಸಾಧಿಸಿದ ರೈತರ ಐತಿಹಾಸಿಕ ಐಕ್ಯ ಹೋರಾಟಕ್ಕಾಗಿ ಹೋರಾಟಕ್ಕಾಗಿ ಸಿಐಟಿಯು ರೈತರನ್ನು ಅಭಿನಂದಿಸುತ್ತಾ, ಸರ್ಕಾರದ ಕಾರ್ಮಿಕ–ವಿರೋಧಿ ರೈತ–ಜನವಿರೋಧಿ ನೀತಿಗಳನ್ನು ಬದಲಾಯಿಸಲು ಕಾರ್ಮಿಕ– ರೈತ ಜಂಟಿ ಕ್ರಮಗಳು ಮತ್ತು ಹೋರಾಟಗಳನ್ನು ಬಲಪಡಿಸುವ ಸಂಕಲ್ಪವನ್ನು ಸಿಐಟಿಯು ಪುನರುಚ್ಚರಿಸುತ್ತೇವೆ. ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಎರಡು ದಿನಗಳ ಮುಷ್ಕರ ಸೇರಿದಂತೆ ಈ ದಿಶೆಯಲ್ಲಿ SKM ನೇತೃತ್ವದ ಬೆಂಬಲದೊಂದಿಗೆ 11 ನವೆಂಬರ್ 2021 ರಂದು ಕಾರ್ಮಿಕರ ರಾಷ್ಟ್ರೀಯ ಸಮಾವೇಶದಲ್ಲಿ ತೆಗೆದುಕೊಂಡ ನಿರ್ಣಯದಂತೆ ಐಕ್ಯತೆಯೊಂದಿಗೆ ಮುಂದು ಸಾಗುವಲ್ಲಿ ಸಿಐಟಿಯು ಕಟ್ಟಿ ಬದ್ಧವಾಗಿದೆ ಎಂದು ತಿಳಿಸಿದೆ. ದುಃಖ, ವ್ಯಾಪಕವಾದ ನಿರ್ಗತಿಕತೆ, ಹಸಿವು, ನಿರುದ್ಯೋಗ, ಕಾರ್ಮಿಕ ಹಕ್ಕುಗಳು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನಿರ್ನಾಮ ಮಾಡಿ ದುಡಿಯುವ ಜನರ ಮೇಲೆ ಗುಲಾಮಗಿರಿ ಹೇರುವ ರಾಷ್ಟ್ರವಿರೋಧಿ ನೀತಿಗಳನ್ನು ಬದಲಾಯಿಸುವಲ್ಲಿ ಜನರ ಹೋರಾಟಗಳು ಮತ್ತು ಆಕ್ರಮಣಕಾರಿ ಖಾಸಗೀಕರಣಕ್ಕೆ ಚಾಲನೆ ನೀಡಿರುವ ಇತ್ತೀಚಿನ ಕುಖ್ಯಾತ ರಾಷ್ಟ್ರೀಯ ನಗದೀಕರಣದ ಮೂಲಕ ರಾಷ್ಟ್ರೀಯ ಮೂಲಸೌಕರ್ಯಗಳು ಮತ್ತು ಆಸ್ತಿಗಳನ್ನು ಸುಲಿಗೆ ಮಾಡಲು ರೂಪಿಸಿರುವ ಪೈಪ್ಲೈನ್ ಯೋಜನೆ ಕೈ ಬಿಡುವಂತೆ ಸಿಐಟಿಯು ಅಗ್ರಹಿಸಿದೆ ಈ ನಿಟ್ಟಿನಲ್ಲಿ ಭವಿಷ್ಯದ ಹೋರಾಟದ ಹಾದಿಯಲ್ಲಿ ಎಸ್‌ಕೆಎಂ ಯಾವುದೇ ಜನ ಹಿತದ ನಿರ್ಧಾರಗಳನ್ನು ತೆಗೆದುಕೊಂಡರೂ ಸಿಐಟಿಯು ತನ್ನ ಬೆಂಬಲವನ್ನು ಮುಂದುವರಿಸುತ್ತದೆ ಎಂದು ಪತ್ರಿಕ ಹೇಳಿಕೆಯ ಮೂಲಕ ತಿಳಿಸಿದೆ. ಬಿಜೆಪಿ/ಎನ್‌ಡಿಎ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಲು ಮತ್ತು ಏಕತೆಯನ್ನು ಬಲಪಡಿಸಲು ಸಿಐಟಿಯು ಕಾರ್ಮಿಕ ವರ್ಗ ಮತ್ತು ರೈತರಿಗೆ ಕರೆ ನೀಡುತ್ತೇವೆ.

ರಾಜ್ಯ ಸರ್ಕಾರ ರೈತ, ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ಹಿಂದಕ್ಕೆ ಪಡೆಯುವಂತೆ ಸಿಐಟಿಯು ರಾಜ್ಯ ಸಮಿತಿ ಸರ್ಕಾರವನ್ನು ಅಗ್ರಹಿಸಿದೆ. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಏಪಿಎಂಸಿ ಕಾಯಿದೆ, ಭೂಸುಧಾರಣಾ ಕಾಯಿದೆ, ಮತ್ತು ಜಾನುವಾರು ಹತ್ಯೆ ನಿಷೇದ ಕಾಯಿದೆಗಳಿಗೆ ತಂದಿರುವ ತಿದ್ದುಪಡಿಗಳನ್ನು ಹಿಂಪಡೆಯದೆ ಕರ್ನಾಟಕ ರಾಜ್ಯದ ರೈತರ ಸಂಕಟಗಳು ಬಗೆಹರಿಯಲಾರವು ಎಂದಿರುವ ಸಿಐಟಿಯು ಈ ಎಲ್ಲಾ ರೈತ ವಿರೋಧಿ ಕಾಯಿದೆಗಳನ್ನು ಹಿಂಪಡಯುವಂತೆ ರಾಜ್ಯ ಸರ್ಕಾರವನ್ನು ಅಗ್ರಹಪಡಿಸಿದೆ.

ಹಂಸಲೇಖ ಹೇಳಿದ್ದು ಸರಿ
ಸತ್ಯ ಹೇಳಿದವರು ಕ್ಷಮೆ ಕೇಳುವ, ಹಸಿ ಸುಳ್ಳು ಹೇಳಿದವರು ಪದ್ಮಪ್ರಶಸ್ತಿ ಪಡೆಯುವ ದುಸ್ಥಿತಿ ಸರಿಯಲ್ಲ

ಪೇಜಾವರ ಸ್ವಾಮಿಗಳ ದಲಿತರ ಮನೆಗಳ ಭೇಟಿಯನ್ನೂ, ಕರ್ನಾಟಕದ ವಿವಿಧ ಮಂತ್ರಿಗಳ ಗ್ರಾಮ ವಾಸ್ತವ್ಯಗಳನ್ನು 'ಬೂಟಾಟಿಕೆ' ಎಂದು ಕರೆದು ಮೈಸೂರಿನ ಸಭೆಯೊಂದರಲ್ಲಿ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ವ್ಯಂಗ್ಯದ ಮಾತುಗಳನ್ನು ಆಡಿದ್ದಾರೆ ಎಂದು ವರದಿಯಾಗಿದೆ. ಅವರ ಹೇಳಿಕೆ ಸಾಮಾಜಿಕ ಮಾಧ್ಯಮಗಳಲ್ಲಿ ತೀವ್ರ ಪರ–ವಿರೋಧ ಚರ್ಚೆಗೆ ಕಾರಣವಾಗಿದ್ದು ಪೇಜಾವರ ಸ್ವಾಮಿಗಳನ್ನು ಟೀಕಿಸಿದ್ದಕ್ಕಾಗಿ ಅವರು ತೀವ್ರ ನಿಂದನೆಗೆ ಒಳಗಾಗಿದ್ದಾರೆ. ಪ್ರಮುಖ ಬಿಜೆಪಿ ಮತ್ತು ಸಂಘಪರಿವಾರದ ನಾಯಕರು ಬೆಂಬಲಿಗರು ಅವರ ವಿರುದ್ಧ ಹರಿಹಾಯ್ದಿದ್ದಾರೆ. ಸಂಸದ ಪ್ರತಾಪ ಸಿಂಹ ಅದಕ್ಕೆ ಅವರ ಮೆಚ್ಚಿನ ಹವ್ಯಾಸವಾದ 'ಆಹಾರ ರಾಜಕಾರಣ'ದ 'ದಲಿತ–ಮುಸ್ಲಿಂ ದ್ವೇಷ ಪ್ರಚಾರ'ದ ತಿರುವು ಕೊಡುವ ಪ್ರಯತ್ನ ಮಾಡಿದ್ದಾರೆ. ಈ ಟೀಕೆಗಳಿಂದ ನೊಂದ ಹಂಸಲೇಖ ಕ್ಷಮೆಯಾಚಿಸಿದ್ದಾರೆ. ಈ ಕ್ಷಮೆಯಾಚನೆಯ ಪರ–ವಿರೋಧ ಚರ್ಚೆಗಳು ತೀವ್ರವಾಗಿ ಮುಂದುವರೆದಿವೆ. ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಗಳನ್ನು ತೊಡೆದು ಹಾಕುವಲ್ಲಿ 'ದಲಿತರ ಕೇರಿಗೆ ಭೇಟಿ'ಯಂತಹ ನಮ್ಮ ಧಾರ್ಮಿಕ ರಾಜಕೀಯ ನಾಯಕರ ತೋರಿಕೆಯ ಕ್ರಮಗಳು ವಿಡಂಬನೆಗೆ ಟೀಕೆಗೆ ಅರ್ಹವಾದವುಗಳೇ. ಅದರಲ್ಲೂ ಮಡೆಸ್ನಾನ ಪಂಕ್ತಿಬೇಧ ದಂತಹ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಗಳ ಸಿದ್ಧಾಂತ–ಆಚರಣೆಗಳನ್ನು ಈಗಲೂ ಎತ್ತಿ ಹಿಡಿಯುವ, ಕನಕದಾಸರಂತಹ ಭಕ್ತರನ್ನೇ ಹೊರಗಿಟ್ಟ, ಮತಧರ್ಮವನ್ನು ರಾಜಕಾರಣಕ್ಕೆ ದುರ್ಬಳಕೆ ಮಾಡುವುದರಲ್ಲಿ ಅಗ್ರ ಪಂಕ್ತಿಯಲ್ಲಿದ್ದ ಉಡುಪಿಯ ಪೇಜಾವರ ಸ್ವಾಮಿಗಳ ಇಂತಹ ತೋರಿಕೆಯ ಕ್ರಮಗಳು ಬರಿಯ 'ಬೂಟಾಟಿಕೆ'ಯಲ್ಲ. ಜನರ ಕಣ್ಣಿಗೆ ಮಣ್ಣೆರಚುವ ವಂಚನೆ ಸಹ. ಅಪ್ರಾಮಾಣಿಕವಾದ ನಿಜವಾದ ಬದಲಾವಣೆಯತ್ತ ಯಾವುದೇ ಕೊಡುಗೆ ನೀಡದ ಜನಮರುಳು ಕ್ರಮಗಳು. ಸತತವಾಗಿ ಮುಂದುವರೆಯುತ್ತಿರುವ ದುರ್ಭರ ಗ್ರಾಮೀಣ ಪರಿಸ್ಥಿತಿಯ ಸನ್ನಿವೇಶದಲ್ಲಿ ಅದರ ಕುರಿತು ಯಾವುದೇ ಕ್ರಮಗಳನ್ನು ಕೈಗೊಳ್ಳದೆ 'ಗ್ರಾಮವಾಸ್ತವ್ಯ' ಮಾಡುವ ಸಚಿವರುಗಳ ಕ್ರಮಗಳಷ್ಟೇ ವಂಚನೆಯ ಜನಮರುಳು ಕ್ರಮಗಳು. ಇವನ್ನು ಹಂಸಲೇಖ ಅವರು ಟೀಕಿಸಿದ್ದು ಸರಿಯಾಗಿಯೇ ಇದೆ.

ಹಂಸಲೇಖ ಅವರಿಗೆ ಅಥವಾ ಯಾರಿಗಾದರೂ ಇಂತಹ ಅಭಿಪ್ರಾಯಗಳನ್ನು ಹೊಂದುವ ಅದನ್ನು ಹೇಳುವ ಹಕ್ಕು, ಸ್ವಾತಂತ್ರ್ಯ ಇದೆ. ಹಂಸಲೇಖ ಅವರು ಸಂಗೀತದ ಜಗತ್ತಿನ ಸಾಧಕರು ಮಾತ್ರವಲ್ಲ, ಹಲವಾರು ದಲಿತ ವಿದ್ಯಾರ್ಥಿಗಳ ಶಿಕ್ಷಣಕ್ಕೆ, ಅವರು ಆತ್ಮವಿಶ್ವಾಸದಿಂದ ಬದುಕು ಕಟ್ಟಿಕೊಳ್ಳಲು ಸಹಾಯ ಮಾಡಿದವರು ಎಂದು ತಿಳಿದು ಬಂದಿದೆ. ಈ ಕ್ರಮಗಳು ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಗಳಲ್ಲಿ ತೊಡೆಯುವ ನಿಟ್ಟಿನಲ್ಲಿ ಸ್ವಲ್ಪವಾದರೂ ಬದಲಾವಣೆ ತರುವ ಪ್ರಾಯೋಗಿಕ ಕ್ರಮಗಳಾಗಿದ್ದು, ಹಂಸಲೇಖ ಅವರಿಗೆ ಇಂತಹ ಹೇಳಿಕೆ ಕೊಡುವ ಪೂರ್ಣ ನೈತಿಕ ಹಕ್ಕು ಸಹ ಇದೆ.

ಹಾಗಾಗಿ, 'ಹಂಸಲೇಖ ಪೇಜಾವರ ಸ್ವಾಮಿಗಳನ್ನು ಟೀಕಿಸಿದ್ದು ಸರಿಯಾಗಿದೆ. ಅವರು ಕ್ಷಮೆ ಕೇಳುವ ಅಗತ್ಯವಿರಲಿಲ್ಲ. ಅವರು ಹಾಗೆ ಮಾಡುವ ಸ್ಥಿತಿ ನಮ್ಮ ದೇಶ ಮತ್ತು ರಾಜ್ಯದಲ್ಲಿ ಇರುವುದು ನಮ್ಮ ದುರಂತ' ಎಂದು ಸಮುದಾಯ ಕರ್ನಾಟಕ ಅಭಿಪ್ರಾಯ ಪಡುತ್ತದೆ. ನಾಡಿನ ದೊಡ್ಡ ಸಾಧಕರಾಗಿರುವ ಹಂಸಲೇಖ ಅವರ ತಮ್ಮದೇ ಅಭಿಪ್ರಾಯ ಹೊಂದುವ ಮತ್ತು ಅದನ್ನು ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನು ಹರಣ ಮಾಡುವ ನಿಂದನೆಗಳನ್ನು ಖಂಡಿಸುತ್ತದೆ. ಹಂಸಲೇಖ ಅವರ ಬೆಂಬಲಕ್ಕೆ ನಿಲ್ಲುವಂತೆ, ಸತ್ಯವನ್ನು ಹೇಳಿದವರು ಕ್ಷಮೆ ಕೇಳುವ ಸ್ಥಿತಿ ಬಾರದಂತೆ, ಅಭಿಪ್ರಾಯ ಮತ್ತು ಅದರ ಅಭಿವ್ಯಕ್ತಿಯ ಸ್ವಾತಂತ್ರ್ಯದ ಮೇಲೆ ಇಂತಹ ಸತತ ಹಲ್ಲೆಗಳ ವಿರುದ್ಧ ತೀವ್ರವಾಗಿ ಪ್ರತಿಭಟಿಸಬೇಕು ಎಂದು ಸಮುದಾಯ ಕರ್ನಾಟಕ ಕರೆ ನೀಡಿದೆ.

ಅದೇ ಸಮಯದಲ್ಲಿ ನಟಿ ಕಂಗನಾ ರಾವುತ್ "1947ರಲ್ಲಿ ದೇಶಕ್ಕೆ ಸಿಕ್ಕಿದ್ದು ಭಿಕ್ಷೆ, 2014ರಲ್ಲಿ ಮಾತ್ರ ನಮಗೆ ಸ್ವಾತಂತ್ರ್ಯ ಸಿಕ್ಕಿದ್ದು' ಎಂಬ ಹೇಳಿಕೆ ನೀಡಿದ್ದು ಅಚಾರಿತ್ರಿಕ ಹಸಿಸುಳ್ಳು ಮಾತ್ರವಲ್ಲ, ಅಭಿವ್ಯಕ್ತಿ ಸ್ವಾತಂತ್ರ್ಯದ ಅತ್ಯಂತ ಹೇಸಿಗೆ ಹುಟ್ಟಿಸುವ ದುರ್ಬಳಕೆ. ಕೂಡಾ. ಹಿಂದೆನೂ ಇಂತಹ ಹಸಿಸುಳ್ಳು ಹೇಳಿಕೆಗಳನ್ನು ನೀಡಿರುವ ಇಂತಹ ವ್ಯಕ್ತಿಗೆ ಕೊಟ್ಟಿರುವ ಪದ್ಮಶ್ರೀ ಪ್ರಶಸ್ತಿ ಇಂತಹ ಹೇಳಿಕೆಗಳನ್ನು ಕೊಡಲು ಪ್ರೋತ್ಸಾಹವೇ ಅಥವಾ ಲೈಸೆನ್ಸೇ ಎಂದು ಕೇಂದ್ರ ಸರಕಾರ ಸ್ಪಷ್ಟಪಡಿಸಬೇಕು. ಪದ್ಮಶ್ರೀ ಪ್ರಶಸ್ತಿ ವಾಪಸು ಪಡೆದು, ಕೇಸು ದಾಖಲಿಸಬೇಕು ಎಂದು ಸಮುದಾಯ ಕರ್ನಾಟಕ ಒತ್ತಾಯಿಸಿದೆ.

ಸತ್ಯ ಹೇಳಿದವರು ಕ್ಷಮೆ ಕೇಳುವ, ಹಸಿ ಸುಳ್ಳು ಹೇಳಿದವರು ಪದ್ಮಪ್ರಶಸ್ತಿ ಪಡೆಯುವ ದುಸ್ಥಿತಿಯ ವಿರುದ ದೀರ್ಘಕಾಲೀನ ನಿರಂತರ ಸಾಮಾಜಿಕ ಸಾಂಸ್ಕೃತಿಕ ಕ್ರಮಗಳನ್ನು ಕೈಗೊಳ್ಳುವಲ್ಲಿ ಕೈಜೋಡಿಸಬೇಕೆಂದು ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಸಮುದಾಯ ಕರ್ನಾಟಕ ಕರೆ ನೀಡಿದೆ.

ಕ.ಸಾ.ಪ. ಚುನಾವಣೆ – ರಾಜಕೀಯ ಪಕ್ಷಗಳ ನೇರ ಭಾಗವಹಿಸುವಿಕೆಯನ್ನು ವಿರೋಧಿಸೋಣ:

ನವೆಂಬರ್ 21 ರಂದು ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ಪದಾಧಿಕಾರಿಗಳನ್ನು ಆಯ್ಕೆ ಮಾಡಲು ಬಹಿರಂಗ ಚುನಾವಣೆ ನಡೆಯಲಿದೆ. ಈ ಚುನಾವಣೆಗಳಲ್ಲಿ ಕಂಡುಬರುತ್ತಿರುವ ಕೆಲವು ಹೊಸ ಬೆಳವಣಿಗೆಗಳನ್ನು ಕುರಿತು ಕನ್ನಡಿಗರಾದ ನಾವು, ಸಾಹಿತ್ಯ ವಲಯದಲ್ಲಿ ಮತ್ತು ಸಾರ್ವಜನಿಕ ವಲಯದಲ್ಲಿ ಆತ್ಮಾವಲೋಕನ ಮಾಡಿಕೊಳ್ಳುವ ಸಂದರ್ಭ ಎದುರಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಒಂದು ಸ್ವಾಯತ್ತ ಸಂಸ್ಥೆ. ನೂರು ವರ್ಷಕ್ಕೂ ಹೆಚ್ಚು ಇತಿಹಾಸವುಳ್ಳ ಈ ಸಂಸ್ಥೆ ಕನ್ನಡ ಸಾಹಿತ್ಯದ ಪರಿಚಾರಕ ಸಂಸ್ಥೆಯಾಗಿಯೇ ಕಾರ್ಯನಿರ್ವಹಿಸುತ್ತಾ ಬಂದಿದೆ.

ಕನ್ನಡ ಭಾಷೆಯ ಬೆಳವಣಿಗೆ ಮತ್ತು ಕನ್ನಡ ಜನತೆ ಎದುರಿಸುವ ಭಾಷಿಕ, ಪ್ರಾದೇಶಿಕ ಮತ್ತು ಇತರ ಸಾಂಸ್ಕೃತಿಕ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತ ಬಂದಿದೆ.

ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳೂ ಸಮಾನ ಅವಕಾಶದೊಂದಿಗೆ ಸಮಸ್ತ ಜನಸಮುದಾಯಗಳ ನ್ನೊಳಗೊಂಡಂತೆ ಪ್ರಗತಿ ಸಾಧಿಸುತ್ತಾ ಬಂದಿದೆ.

ಒಂದು ಸಮಾಜಮುಖಿ ಸಂವೇದನಾಶೀಲ ಕನ್ನಡ ಸಾಹಿತ್ಯ ಪರಂಪರೆಯನ್ನು ಪೋಷಿಸುವ ಸಲುವಾಗಿ, ಕನ್ನಡ ಸಾಹಿತ್ಯ ಪರಿಷತ್ತು ಕಾರ್ಯನಿರ್ವಹಿಸುತ್ತ ಬಂದಿದೆ.

ದುರಾದೃಷ್ಟವಶಾತ್ ಇತ್ತೀಚಿನ ಕೆಲವು ವರ್ಷಗಳಲ್ಲಿ ಕ.ಸಾ.ಪ. ಚುನಾವಣೆಗಳಲ್ಲಿ ಜಾತಿ ಪ್ರಭಾವ, ಭ್ರಷ್ಟ ಹಣ ಹಂಚುವಿಕೆ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಇತ್ತೀಚಿನ ದಿನಗಳಲ್ಲಿ ಇದು ಸಾಂಸ್ಕೃತಿಕ ಲೋಕಕ್ಕೆ ದೊಡ್ಡ ಆಘಾತಕಾರಿ ಸಮಸ್ಯೆಯಾಗಿ ಎದುರಾಗಿತ್ತು.

ಇದರ ಜೊತೆಗೆ ಈ ವರ್ಷದ ಕ.ಸಾ.ಪ ಚುನಾವಣೆಯಲ್ಲಿ ಆಡಳಿತಾರೂಢ ರಾಜಕೀಯ ಪಕ್ಷದ ನೇರ ಪ್ರವೇಶ ದಿಗ್ಭ್ರಮೆ ಹುಟ್ಟಿಸಿದೆ ಅಷ್ಟೇ ಅಲ್ಲ, ಒಂದು ದುಷ್ಟ ಬೆಳವಣಿಗೆಯಾಗಿದೆ.

ಇದುವರೆಗೂ ನಡೆದ ಚುನಾವಣೆಗಳಲ್ಲಿ ಯಾವುದೇ ರಾಜಕೀಯ ಪಕ್ಷವು ಈ ರೀತಿಯಾಗಿ ನೇರ ಹಸ್ತಕ್ಷೇಪ ಮಾಡಿರಲಿಲ್ಲ. ಆದರೆ ಭಾ.ಜ.ಪ.ವು ಸಾಂಸ್ಕೃತಿಕ ಕ್ಷೇತ್ರಕ್ಕೂ ತನ್ನ ಹಸ್ತಕ್ಷೇಪ ವನ್ನು ಆಕ್ರಮಣಕಾರಿಯಾಗಿ ವಿಸ್ತರಿಸಿ ಎಲ್ಲವನ್ನೂ ಹಾಳುಗೆಡಹಲು ಹೊರಟಿದೆ.

ಮಹೇಶ್ ಜೋಶಿಯವರು ಒಬ್ಬ ಸಾಂಸ್ಕೃತಿಕ ಮನಸ್ಸಿನ ಅಭ್ಯರ್ಥಿಯಾಗಿ ಈ ಚುನಾವಣೆಯಲ್ಲಿ ಎಲ್ಲರಂತೆ ಭಾಗವಹಿಸಿದ್ದರೆ ನಾವು ಯಾರೂ ವಿರೋಧಿಸುತ್ತಿರಲಿಲ್ಲ. ಈ ಚುನಾವಣೆಯ ಪ್ರಾರಂಭದಲ್ಲಿ ಅವರು ಹಾಗೆಯೇ ನಡೆದುಕೊಂಡಿದ್ದರಿಂದ ನಾವು ಯಾರೂ ಚಕಾರವೆತ್ತಿರಲಿಲ್ಲ.

ಆದರೆ ಸಾಂಸ್ಕೃತಿಕ ಸ್ವಾಯತ್ತ ಸಂಸ್ಥೆಯಾದ ಕ.ಸಾ.ಪ.ಕ್ಕೆ ಆಳುವ ಪಕ್ಷದ ಬೆಂಬಲವನ್ನು ನೇರವಾಗಿ ಪೋಷಿಸಿಕೊಂಡು ಚುನಾವಣೆ ಗೆ ಹೊರಟಿರುವುದು ಖಂಡನೀಯ.

ಕ.ಸಾ.ಪ.ದ ಮೂಲ ಆಶಯಕ್ಕೆ ವಿರುದ್ಧವಾದ ನಡೆ ಇದಾಗಿರುವುದರಿಂದ ಅವರು ಅಧ್ಯಕ್ಷ ಪದವಿಗೆ ಸ್ಪರ್ಧಿಸುವ ನೈತಿಕ ಅಧಿಕಾರವನ್ನು ಕಳೆದುಕೊಂಡಿದ್ದಾರೆ. ಪಕ್ಷ ವೊಂದರ ಈ ಪರಿಯ ಬೆಂಬಲವನ್ನು ಸಾಂಸ್ಕೃತಿಕ ಮನಸ್ಸಿನ ವ್ಯಕ್ತಿಯಾಗಿ ಅವರು ನಿರಾಕರಿಸಬೇಕಿತ್ತು. ಇದುವರೆಗೆ ತಾವು ಮಾಡಿದ ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳೇ ತಮ್ಮ ಚುನಾವಣೆಯ ನೈತಿಕ ಬಲಗಳಾಗಿ ಘೋಷಿಸಿಕೊಳ್ಳಬೇಕಿತ್ತು. ಅದು ಬಿಟ್ಟು ರಾಜಕೀಯ ಪುಡಾರಿಯಂತೆ ಈ ಚುನಾವಣೆಯನ್ನು ಕಲುಷಿತಗೊಳಿಸುತ್ತಿರುವುದು ಖಂಡನೀಯ.

ಆಡಳಿತಾರೂಢ ಬಿ.ಜೆ.ಪಿ ಮತ್ತು ಆರ್.ಎಸ್.ಎಸ್ ಮತ್ತದರ ಅಂಗ ಸಂಸ್ಥೆಗಳ ಕಾರ್ಯಕರ್ತರಿಗೆ ತಮ್ಮನ್ನು ಆಯ್ಕೆ ಮಾಡುವಂತೆ ವಿನಂತಿಸುತ್ತಿರುವುದು ಖಂಡನೀಯ. ಇದು ಕ ಸಾ ಪದ ಇತಿಹಾಸದಲ್ಲೇ ಮೊದಲ ಬಾರಿ ಹೀಗಾಗುತ್ತಿದ್ದು, ರಾಜಕೀಯ ಪಕ್ಷಗಳ ಅಥವಾ ಗುಂಪುಗಳ ನೇರ ಪ್ರವೇಶಕ್ಕೆ ಯಾವುದೇ ರೀತಿಯಲ್ಲೂ ಕ ಸಾ ಪ ದಲ್ಲಿ ಅವಕಾಶ ನೀಡುವುದು ತರವಲ್ಲ.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯಕ ಮನಸುಗಳು ಮಹೇಶ್ ಜೋಷಿ ಅವರು ಕೋಮುವಾದಿ ಪಕ್ಷ ಸಂಘಟನೆಗಳ ನೇರ ಬೆಂಬಲ ಪಡೆಯಲು ಮುಂದಾಗಿರುವುದನ್ನು ಖಂಡಿಸುವುದೇ ಅಲ್ಲದೆ, ಅವರಿಗೆ ಚುನಾವಣೆಯಲ್ಲಿ ಮತ ನೀಡದಿರುವಂತೆ ಎಲ್ಲ ಸಾಹಿತ್ಯಕ ಮನಸುಗಳಲ್ಲಿ ವಿನಂತಿಸಿಕೊಳ್ಳುತ್ತೇವೆ.

ಈ ರೀತಿಯ ಧೋರಣೆಯನ್ನು ಅನುಸರಿಸುವ ಯಾವುದೇ ಇತರ ಅಭ್ಯರ್ಥಿಯನ್ನೂ ತಿರಸ್ಕರಿಸುವಂತೆ ಮತದಾರರಲ್ಲಿ ವಿನಂತಿಸುತ್ತೇವೆ.

ಪ್ರೊ. ಎಸ್.ಜಿ. ಸಿದ್ದರಾಮಯ್ಯ ಡಾ. ವಿಜಯಾ, ಡಾ. ವಸುಂಧರಾ ಭೂಪತಿ, ಡಾ. ಕೆ. ಷರೀಫಾ, ನಾ. ದಿವಾಕರ, ಡಾ. ಬಂಜಗೆರೆ ಜಯಪ್ರಕಾಶ್, ಅಚ್ಯುತ ವಿಮಲಾ ಕೆ.ಎಸ್., ನೀಲಾ ಕೆ., ಎಲ್. ಜಗನ್ನಾಥ್, ಟಿ. ಸುರೇಂದ್ರ ರಾವ್, ಎಸ್. ದೇವೇಂದ್ರ ಗೌಡ, ಪಿ.ಆರ್. ವೆಂಕಟೇಶ್ ಬಳ್ಳಾರಿ, ವೀರಹನುಮಾನ್ ರಾಯಚೂರು, ಡಾ.ವಿ.ಎನ್.ಲಕ್ಷ್ಮಿ ನಾರಾಯಣ್, ಡಾ.ಲೀಲಾ ಸಂಪಿಗೆ ಬಿ.ಶ್ರೀಪಾದ ಭಟ್, ಎನ್.ಕೆ. ವಸಂತ ರಾಜ್, ಬಿ.ಐ.ಇಳಿಗೇರ್, ಜೆ.ಸಿ. ಶಶಿಧರ್.

ಸಿಪಿಐ(ಎಂ)ನ ಮುಳಬಾಗಿಲು ಪ್ರಥಮ ತಾಲ್ಲೂಕು ಸಮ್ಮೇಳನ



ಮುಳಬಾಗಿಲು ತಾಲ್ಲೂಕಿನ ಪ್ರಥಮ ಸಮ್ಮೇಳನವನ್ನು 13 ನವೆಂಬರ್ 2021 ರಂದು ಮುಳಬಾಗಿಲುನಲ್ಲಿ ಯಶಸ್ವಿಯಾಗಿ ನಡೆಯಿತು. ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಕಾಂ. ಗೌರಮ್ಮ ಅವರು ಬಹಿರಂಗ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದರು.





ಜಿಲ್ಲಾ ಕಾರ್ಯದರ್ಶಿ ಕಾಂ. ಪಿ. ಶ್ರೀನಿವಾಸ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ವಿ. ಗೀತಾ ಮತ್ತು ಕಾಂ. ಪಿ.ಆರ್. ಸೂರ್ಯನಾರಾಯಣ ರವರು ಉಪಸ್ಥಿತರಿದ್ದರು. ಕಾಂ. ಪಿ.ಆರ್. ಶಂಕರ್ ತಾಲ್ಲೂಕು ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಯಾದರು.

ನಾವು ಮತ್ತೆ ಗೋಕಾಕ್ ಚಳುವಳಿಯ ಸಂದರ್ಭಕ್ಕೆ ಮರುಳುತ್ತಿದ್ದೇವೆಯೆ?

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ



ನಾವು ಮತ್ತೆ ಗೋಕಾಕ್ ಚಳುವಳಿಯ ಸಂದರ್ಭಕ್ಕೆ ಮರುಳುತ್ತಿದ್ದೇವೆಯೆ? ಈ ಪ್ರಶ್ನೆ ಉದ್ಭವಿಸಲು ಕಾರಣವೆಂದರೆ ನೂತನ ಶಿಕ್ಷಣ ಪದ್ಧತಿ ಎನ್.ಇ.ಪಿ.ಯ ಅನುಷ್ಠಾನದಲ್ಲಿ ಪದವಿ ತರಗತಿಗಳಲ್ಲಿ ಕನ್ನಡವನ್ನು ಕಡ್ಡಾಯಗೊಳಿಸುವ ಬಗ್ಗೆ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಾದ ವಿವಾದಗಳನ್ನು ಸ್ವಲ್ಪ ನೆನಪು ಮಾಡಿಕೊಳ್ಳೋಣ. ಗೋಕಾಕ್ ಚಳುವಳಿಗೆ ಮೂಲ ಕಾರಣವೆಂದರೆ ಶಾಲೆಗಳಲ್ಲಿ ವಿಶೇಷವಾಗಿ ಹೈಸ್ಕೂಲುಗಳಲ್ಲಿ ವಿದ್ಯಾರ್ಥಿಯು ಯಾವುದೇ ಎರಡು ಭಾಷೆಗಳನ್ನು ಕಲಿಯಬಹುದು ಎನ್ನುವ ನಿಯಮವನ್ನು ಬಳಸಿಕೊಂಡು ಅನೇಕ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಷ್ ಹಾಗೂ ಸಂಸ್ಕೃತವನ್ನು ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿತ್ತು. ಹೀಗಾಗಿ ಕನ್ನಡವನ್ನು ಓದದೇ ಕನ್ನಡದ ಮಕ್ಕಳು ಶಾಲೆ ವಿದ್ಯಾಭ್ಯಾಸ ಮುಗಿಸುತ್ತಿದ್ದರು. ಇದು ಯಾವುದೇ ದೃಷ್ಟಿಯಿಂದಲೂ ಅಸಂಗತವಾದ ವಿದ್ಯಮಾನವಾಗಿತ್ತು. ಈ ಸಂದರ್ಭದಲ್ಲಿ ಕೂಡ ಕನ್ನಡದ ಪ್ರತಿಸ್ಪರ್ಧಿ ಸಂಸ್ಕೃತವಾಗಿತ್ತು. ಪರೀಕ್ಷೆಯಲ್ಲಿ ಕನ್ನಡದಲ್ಲಿ ಬರೆಯುವ ಸವಲತ್ತು, ತುಂಬಾ ಸರಳವಾದ ಪ್ರಾಥಮಿಕ ಬಗೆಯ ಪಠ್ಯಗಳು, ಗರಿಷ್ಠ ಅಂಕಗಳ ಸಂಪಾದನೆ ಇವುಗಳು ಸಂಸ್ಕೃತ ಓದುವುದರ ಲಾಭಗಳಾಗಿದ್ದವು. ತಮ್ಮ ಮಕ್ಕಳು ಕನ್ನಡ ಓದುತ್ತಿಲ್ಲವೆಂದು ಪಾಲಕರು ಯಾರೂ ದೂರಲಿಲ್ಲ. ಏಕೆಂದರೆ ಆಗ ರ್‍ಯಾಂಕ್ ಕೊಡುವಾಗ ಭಾಷೆಯ ಪೇಪರ್‌ಗಳ ಅಂಕವನ್ನು ಪರಿಗಣಿಸಲಾಗುತ್ತಿತ್ತು. ಕರ್ನಾಟಕ ಸರಕಾರವು (ದೇವರಾಜ ಅರಸರು) ಈ ಅಸಂಗತ ವಿದ್ಯಮಾನವನ್ನು ಸರಿಪಡಿಸಲು ಕನ್ನಡವನ್ನು ಕಡ್ಡಾಯ ಮಾಡಿದಾಗ ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಈ ಹಿನ್ನೆಲೆಯಲ್ಲಿ ಗೋಕಾಕ್ ಚಳುವಳಿಯು ಹುಟ್ಟಿಕೊಂಡಿತು. ವಿಶೇಷವಾಗಿ ರಾಜ್‌ಕುಮಾರ್ ಅವರ ಭಾಗವಹಿಸುವಿಕೆಯಿಂದಾಗಿ ಅದು ಯಶಸ್ವಿಯಾಯಿತು. ಆದರೆ ಕೊನೆಗೂ ನ್ಯಾಯಾಲಯಗಳು ಕನ್ನಡವನ್ನು ಕಡ್ಡಾಯ ಮಾಡುವುದರ ವಿರುದ್ಧವೇ ತೀರ್ಪು ನೀಡಿದವು. ಮಾಧ್ಯಮ ಮತ್ತು ಭಾಷೆಯ ಆಯ್ಕೆಯನ್ನು ಪಾಲಕರಿಗೆ ನೀಡಲಾಯಿತು! ಹೇಗಿದ್ದರೂ ಅವರು ಸಂವಿಧಾನವು ನೀಡಿದ ಹಲವು ಮೂಲಭೂತ ಹಕ್ಕುಗಳಲ್ಲಿ, ಸ್ವಾತಂತ್ರ್ಯಗಳಲ್ಲಿ ಇದೊಂದನ್ನೇ ಬಳಸಿಕೊಂಡಿದ್ದಾರಲ್ಲವೆ?

ಈಗ ಅದೇ ದೃಶ್ಯವು ಮತ್ತೆ ಅಭಿನಯವಾಗುತ್ತಿದೆ. ಸಂಸ್ಕೃತ ಬೋಧಕರ ಸಂಘಗಳು ಮತ್ತು ಸಂಸ್ಕೃತಪರ ಸಂಘಗಳು ಎನ್.ಇ.ಪಿ.ಯಲ್ಲಿ ಕನ್ನಡ ಕಡ್ಡಾಯವನ್ನು

ವಿಚಿತ್ರವಾದ ರೀತಿಯಲ್ಲಿ ಮನುಸ್ಮೃತಿಯ ಸಂಸ್ಕೃತದ ಕಲಿಕೆಯ ಮೇಲೆ ಹೇರಿದ ನಿಬಂಧನೆಗಳು 21ನೇ ಶತಮಾನದಲ್ಲಿ ಮುಂದುವರೆಯುತ್ತಿವೆ. ಹೇಗಿದ್ದರೂ ಕನ್ನಡವು ಶೂದ್ರ, ದಲಿತರು ಮತ್ತು ಮಹಿಳೆಯರ ಭಾಷೆಯಲ್ಲವೆ? ಸಂಸ್ಕೃತ ಮತ್ತು ಆರ್ಯಕುಲ ಸಂಭೂತ ಇಂಗ್ಲಿಷ್‌ಗಳು ನವ ಬ್ರಾಹ್ಮಣ್ಯದ ಭಾಷೆಗಳಾಗಿ ಬೆಳಗುತ್ತಿವೆ. ನಾವೆಲ್ಲಿದ್ದೇವೆ ಅಲ್ಲೇ ಇದ್ದೇವೆ. ಗೋಕಾಕ ಚಳುವಳಿಯ ಸಂದರ್ಭಕ್ಕೆ ಮರಳಿದ್ದೇವೆ. .. .. ಕಡ್ಡಾಯ ಕನ್ನಡದ ವಿರುದ್ಧ ಕೋರ್ಟಿಗೆ ಹೋಗುವ ದುಸ್ಥಿತಿಯಲ್ಲಿ ಪ್ರಭುತ್ವ ಪೋಷಿತ ಸಂಸ್ಕೃತ ಭಾಷೆ ಇದೆಯೆ? ಅದು ನ್ಯಾಯಾಲದಯಲ್ಲಿ ಕನ್ನಡದ ಪ್ರತಿವಾದಿಯಾಗಿ ನಿಲ್ಲಬೇಕೆ? ಅಥವಾ ಇದರ ಹಿಂದೆ ಕೆಲಸ ಮಾಡುತ್ತಿರುವ ಸಿದ್ಧಾಂತವು ಸಂಸ್ಕೃತಕ್ಕಾಗಿ ಎಲ್ಲಾ ನಾಡಭಾಷೆಗಳನ್ನು ತುಳಿಯುವ ಹುನ್ನಾರವನ್ನು ಹೊಂದಿದೆಯೆ?

ಪ್ರಶ್ನಿಸಿವೆ. ಕನ್ನಡವು ಮಾತೃಭಾಷೆಯಲ್ಲದ ಅನೇಕ ವಿದ್ಯಾರ್ಥಿಗಳಿದ್ದಾರೆ ಎಂದು ಅವರ ವಾದ. ಅಂದ ಹಾಗೆ ಸಂಸ್ಕೃತವು ಯಾರ ಮಾತೃಭಾಷೆಯೂ ಅಲ್ಲವೆಂದು ಭಾಷಾತಜ್ಞರು ಹೇಳುತ್ತಾರೆ. ಅದು ಮಹಾನ್ ಭಾಷೆ ಆದರೆ ಯಾರ ಮಾತೃಭಾಷೆಯೂ ಅಲ್ಲ. ಅಲ್ಲದೆ ಒಂದು ವೇಳೆ ನ್ಯಾಯಾಲಯ ಸಂಸ್ಕೃತ ಪರವಾಗಿ ತೀರ್ಪು ನೀಡಿದರೆ ಅದನ್ನು ಓದುವವರಲ್ಲಿ ಬಹುಸಂಖ್ಯಾತರು ಕನ್ನಡ ಮಕ್ಕಳೇ ಆಗಿರುತ್ತಾರೆ. ಮತ್ತೆ ಕನ್ನಡ ಓದದ ಕನ್ನಡ ಮಕ್ಕಳು ನಮ್ಮ ಕಾಲೇಜುಗಳಿಂದ ಹೊರಬರುತ್ತಾರೆ. ಎಲ್ಲರೂ ಅಲ್ಲ, ಸರಕಾರಿ ಕಾಲೇಜುಗಳ, ಬಡ ಕುಟುಂಬಗಳ ಮಕ್ಕಳು ಇಂಗ್ಲಿಷ್ (ಹೊಟ್ಟೆಪಾಡಿಗಾಗಿ) ಕನ್ನಡ ಭಾಷೆಗಳನ್ನು ಓದುತ್ತಾರೆ. ವಿಚಿತ್ರವಾದ ರೀತಿಯಲ್ಲಿ ಮನುಸ್ಮೃತಿಯ ಸಂಸ್ಕೃತದ ಕಲಿಕೆಯ ಮೇಲೆ ಹೇರಿದ ನಿಬಂಧನೆಗಳು 21ನೇ ಶತಮಾನದಲ್ಲಿ ಮುಂದುವರೆಯುತ್ತವೆ. ಹೇಗಿದ್ದರೂ ಕನ್ನಡವು ಶೂದ್ರ, ದಲಿತರು ಮತ್ತು ಮಹಿಳೆಯರ ಭಾಷೆಯಲ್ಲವೆ? ಸಂಸ್ಕೃತ ಮತ್ತು ಆರ್ಯಕುಲ ಸಂಭೂತ ಇಂಗ್ಲಿಷ್‌ಗಳು ನವ ಬ್ರಾಹ್ಮಣ್ಯದ ಭಾಷೆಗಳಾಗಿ ಬೆಳಗುತ್ತಿವೆ. ನಾವೆಲ್ಲಿದ್ದೇವೆ ಅಲ್ಲೇ ಇದ್ದೇವೆ. ಗೋಕಾಕ ಚಳುವಳಿಯ ಸಂದರ್ಭಕ್ಕೆ ಮರಳಿದ್ದೇವೆ. ಕನ್ನಡ ಕಡ್ಡಾಯ ಮಾಡಿದರೆ ವಿದ್ಯಾರ್ಥಿಗಳು ಇಂಗ್ಲಿಷ್ ಮತ್ತು ಕನ್ನಡವನ್ನು ಓದುತ್ತಾರೆ; ಹೀಗಾಗಿ ಸಂಸ್ಕೃತ, ಹಿಂದಿ, ಉರ್ದು ಇವುಗಳನ್ನು ಓದುವವರು ಯಾರು? ಎನ್ನುವ ಚರ್ಚೆ ನಡೆದಿದೆ. ಆ ಭಾಷೆಗಳನ್ನು ಬೋಧನೆ ಮಾಡುವ ಶಿಕ್ಷಕರ ಉದ್ಯೋಗಗಳ ಮೇಲೆ ಪರಿಣಾಮವಾಗುವುದಿಲ್ಲವೆ ಎನ್ನುವ ವಾದ ಮಂಡಿಸಲಾಗುತ್ತಿದೆ.

ವಾಸ್ತವವೆಂದರೆ ಅಪಾರ ಸಂಖ್ಯೆಯ ಸಂಸ್ಕೃತ ಶಾಲೆಗಳಿಗೆ ಅನುಮತಿ ನೀಡಿ ಆರಂಭಿಸಲಾಗಿದ್ದು ಅಲ್ಲಿಯ ಸ್ಥಿತಿಗತಿಗಳ ಬಗ್ಗೆ ಚರ್ಚೆ ನಡೆದಿಲ್ಲ. ಪ್ರಸಕ್ತ ಅಧಿಕಾರದಲ್ಲಿರುವ ರಾಜಕೀಯ ಪಕ್ಷದ ಮಾತೃಸಂಸ್ಥೆಯು ಸಂಸ್ಕೃತವನ್ನು ಜಗತ್ತಿನ ಅತಿ ಶ್ರೇಷ್ಠ ಭಾಷೆಯೆಂದು ಪರಿಗಣಿಸುತ್ತದೆ. ಒಟ್ಟಾರೆ ಸಂಸ್ಕೃತ ಭಾಷೆಗೆ ಇಂದಿನ ಪ್ರಭುತ್ವದಿಂದ ದೊರೆಯುತ್ತಿರುವ ಆರ್ಥಿಕ ಬೆಂಬಲದ ವಿವರಗಳನ್ನು ಪರೀಕ್ಷಿಸಬೇಕಿದೆ. ಕಡ್ಡಾಯ ಕನ್ನಡದ ವಿರುದ್ಧ ಕೋರ್ಟಿಗೆ ಹೋಗುವ ದುಸ್ಥಿತಿಯಲ್ಲಿ ಪ್ರಭುತ್ವ ಪೋಷಿತ ಸಂಸ್ಕೃತ ಭಾಷೆ ಇದೆಯೆ? ಅದು ನ್ಯಾಯಾಲದಯಲ್ಲಿ ಕನ್ನಡದ ಪ್ರತಿವಾದಿಯಾಗಿ ನಿಲ್ಲಬೇಕೆ? ಅಥವಾ ಇದರ ಹಿಂದೆ ಕೆಲಸ ಮಾಡುತ್ತಿರುವ ಸಿದ್ಧಾಂತವು ಸಂಸ್ಕೃತಕ್ಕಾಗಿ ಎಲ್ಲಾ ನಾಡಭಾಷೆಗಳನ್ನು ತುಳಿಯುವ ಹುನ್ನಾರವನ್ನು ಹೊಂದಿದೆಯೆ?

ಇರಲಿ. ಈಗ ಬಹುಮುಖ್ಯ ಪ್ರಶ್ನೆಯೆಂದರೆ ನ್ಯಾಯಾಲಯದ ಒಲವು. ನಾನು ಅನೇಕ ವರ್ಷಗಳಿಂದ ನ್ಯಾಯಾಲಯದ ತೀರ್ಪುಗಳಿಗಿಂತ ಅಲ್ಲಿ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಾಧೀಶರ ಟೀಕೆ ಟಿಪ್ಪಣಿಗಳನ್ನು ಗಮನಿಸುತ್ತಾ ಬಂದಿದ್ದೇನೆ. ಒಂದಿಬ್ಬರನ್ನು ಬಿಟ್ಟರೆ ಇಲ್ಲಿಯವರೆಗೆ ಅವರು ಇಂಗ್ಲಿಷ್ ಪರವಾಗಿದ್ದಾರೆ. ಕನ್ನಡ ಅವರಿಗೆ ಆಧುನಿಕತೆ ಹಾಗೂ ಅಭಿವೃದ್ಧಿಯ ಭಾಷೆ ಆಗಿಲ್ಲ. ಅಲ್ಲದೆ ಅವರು ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯವನ್ನು ಬಿಡಿಯಾಗಿ, ಸಂಬಂಧವೇ ಇಲ್ಲದಂತೆ ನೋಡುತ್ತಾರೆ. ಹೀಗಾಗಿ ಅವರಿಗೆ ಆಯ್ಕೆಯ ಸ್ವಾತಂತ್ರ್ಯವು ಪವಿತ್ರವಾಗಿ ಕಾಣುತ್ತದೆಯೆ ಹೊರತು, ಭಾಷೆಯ ಆಯ್ಕೆಯ ಹಿಂದಿರುವ ಚರಿತ್ರೆ, ಸಾಂಸ್ಕೃತಿಕ ರಾಜಕೀಯ ಹಾಗೂ ಆರ್ಥಿಕ ಒತ್ತಡಗಳನ್ನು ಗಮನಿಸುವುದೇ ಇಲ್ಲ. ಹೇಗಿದ್ದರೂ ಈಗಾಗಲೇ ಈ ಹಿಂದಿನ ತೀರ್ಪುಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಖಚಿತವಾಗಿ ತೀರ್ಮಾನಿಸಿದಂತೆ ಅದು ಮಾತೃಭಾಷೆ ಕಡ್ಡಾಯ ಮಾಡುವುದರ ಪರವಾಗಿಲ್ಲ. ಎನ್.ಇ.ಪಿ. ವಿದ್ಯಮಾನದ ತಾರ್ಕಿಕ ಅಂತ್ಯವು ಹಾಗೇ ಆಗುತ್ತದೆ. ಬಹಳ ವರ್ಷಗಳಿಂದ ಎಲ್ಲಾ ತಜ್ಞರು ಹೇಳಿದಂತೆ ಸಂಸತ್ತಿನಲ್ಲಿ ಒಮ್ಮತದಿಂದ ಭಾಷಾ ನೀತಿಯಲ್ಲಿ ಮಾತೃಭಾಷೆಯ ಪರವಾಗಿ ಶಾಸನಗಳನ್ನು ಮಾಡಬೇಕಿದೆ; ತಿದ್ದಬೇಕಿದೆ. ಅಲ್ಲಿಯವರೆಗೆ ಮಾತೃಭಾಷೆಯ ಬಗ್ಗೆ ವೀರಾವೇಶದಿಂದ ಮಾತನಾಡಿ ಮತ್ತೆ ಸುಮ್ಮನಾಗುವ ನಾಟಕ ನಡೆಯುತ್ತಲೇ ಇರುತ್ತದೆ. ಪ್ರಾಮಾಣಿಕವಾದ ಭಾಷಾ ಹೋರಾಟಗಳು ಬುಡಕಟ್ಟು ಭಾಷೆಗಳ ಪರವಾಗಿ, ನಶಿಸಿ ಹೋಗುತ್ತಿರುವ ಮಾತೃಭಾಷೆಗಳ ಪರವಾಗಿ ಇರಬೇಕು. ಆದರೆ ಅವುಗಳ ಬಗ್ಗೆ ಮಾತನಾಡುವವರು ಯಾರು? ಕ್ರಮೇಣವಾಗಿ ಆ ಭಾಷೆಯ ಯುವ ಜನಾಂಗಗಳು ಆಡಳಿತ ಭಾಷೆ, ಇಂಗ್ಲಿಷ್ ಆ ಕಡೆಗೆ ವಾಲುತ್ತಿದ್ದಾರೆ... ಆ ಭಾಷೆಗಳು ವಾರಸುದಾರರಿಲ್ಲದೆ ಅನಾಥವಾಗುತ್ತವೆ.



ಕೃಪೆ: ಸತೀಶ್ ಆಚಾರ್ಯ

ಹೋಟೆಲ್ ದರ ಏರಿಕೆ ಪರಿಹಾರವಲ್ಲ – ಸಿಪಿಐ(ಎಂ)

ಕೇಂದ್ರ ಹಾಗು ರಾಜ್ಯ ಬಿಜೆಪಿ ಸರ್ಕಾರಗಳು ಪೆಟ್ರೋಲ್ ಡೀಸೆಲ್ ಅಡುಗೆ ಅನಿಲ ಗ್ಯಾಸ್ ದರವನ್ನು ನಿಯಂತ್ರಣ ಮಾಡದೆ ನಿರಂತರವಾಗಿ ಅದರ ಮೇಲಿನ ತೆರಿಗೆಗಳನ್ನು ಹೆಚ್ಚಿಸಿ ಇದೀಗ ಅಲ್ಪ ಪ್ರಮಾಣದ ಇಳಿಕೆಗೆ ಕ್ರಮವಹಿಸಿರುವ ಬೆನ್ನಲ್ಲೆ ರಾಜ್ಯ ಹೋಟೆಲ್ ಮಾಲೀಕರ ಸಂಘ ಹಾಗು ಬೆಂಗಳೂರು ಹೋಟೆಲ್ ಮಾಲೀಕರ ಸಂಘಗಳು ಅಧಿಕೃತವಾಗಿ ದರ ಏರಿಕೆ ಪ್ರಕಟಿಸಿ ಜಾರಿ ಮಾಡಿವೆ. ಬೆಲೆ ಏರಿಕೆಯ ಕಾರಣ ದರ ಏರಿಕೆಯನ್ನು 10 ಶೇಕಡ ಹೆಚ್ಚಿಸಲಾಗಿದೆ ಎಂದು ಪ್ರಕಟಿಸಿವೆ. ಆದರೆ ಕೋವಿಡ್ ಲಾಕ್ಡೌನ್ ನಿಂದಾಗಿ ರಾಜ್ಯ ಮತ್ತು ಬೆಂಗಳೂರಿನ ಜನತೆ ಉದ್ಯೋಗ ಮತ್ತು ಆದಾಯದಲ್ಲಿ ತೀವ್ರ ಸಂಕಷ್ಟ ಎದುರಿಸುತ್ತಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಧರ ಏರಿಕೆಯು ಸಮಸ್ಯೆಗೆ ಪರಿಹಾರ ಆಗುವುದಿಲ್ಲ ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ದರ ಏರಿಕೆಯನ್ನು ಖಂಡಿಸಿವೆ. ಬಿಜೆಪಿ ಸರ್ಕಾರಗಳು ಬೆಲೆ ಏರಿಕೆಯ ಕ್ರಮಗಳಿಂದ ಜನತೆಯ ಜೀವನಕ್ಕೆ ಉಂಟು ಮಾಡಿರುವ ಗಾಯದ ಮೇಲೆ ಹೋಟೆಲ್ ಮಾಲೀಕರ ಸಂಘದ ದರ ಏರಿಕೆಯು ಬರೆ ಎಳೆದಿದೆ ಎಂದು ಸಿಪಿಐ(ಎಂ) ಟೀಕಿಸಿದೆ. ಹೋಟೆಲ್ ಮಾಲೀಕರ ಸಂಘದ ನಾಯಕತ್ವದಲ್ಲಿನ ಸಂಘ ಪರಿವಾರ ಮತ್ತು ಬಿಜೆಪಿ ಪರ ನಿಷ್ಠೆಯ ಕಾರಣ ಬೆಲೆ ಏರಿಕೆಯ ವಿರುದ್ಧ ಕಾರ್ಮಿಕ ಸಂಘಟನೆಗಳು ಮತ್ತು ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆಯ ವಿರುದ್ಧ ರೈತರು ನಡೆಸುತ್ತಿರುವ ಹೋರಾಟಗಳಿಗೆ ಬೆಂಬಲಿಸಲಿಲ್ಲ. ಮಾತ್ರವಲ್ಲದೆ ಮುಷ್ಕರ ಬಂದ್ ವೇಳೆ ಬಂದ್ ಮಾಡದೆ ಬಿಜೆಪಿ ಸರ್ಕಾರಗಳ ಬೆಲೆ ಏರಿಕೆಯನ್ನು ಬೆಂಬಲಿಸಿವೆ. ಇದೀಗ ಹೋಟೆಲ್ ಧರ ಏರಿಕೆಗೆ ಮುಂದಾಗಿವೆ ಎಂದಿದೆ ಸಿಪಿಐ(ಎಂ).

ಇದಕ್ಕೂ ಮುನ್ನ ಈಗಾಗಲೆ ಹಲವು ಹೋಟೆಲ್ ಗಳು ಧರ ಏರಿಸಿವೆ. ಇದೀಗ ಅದನ್ನು ಅಧಿಕೃತಗೊಳಿಸುವ ಕ್ರಮಕ್ಕೆ ಮಾಲೀಕರ ಸಂಘ ಮುಂದಾಗಿದೆ. ಆದರೆ ಜನರ ಕೊಳ್ಳುವ ಶಕ್ತಿಯು ಕುಂಟಿತವಾಗಿರುವ ಪ್ರಸಕ್ತ ಪರಿಸ್ಥಿತಿಯಲ್ಲಿ ಈ ಧರ ಏರಿಕೆಯಿಂದ ಜನತೆಯು ಹೋಟೆಲ್‌ಗಳಿಗೆ ಬರುವುದು ಸೀಮಿತವಾಗಿ ವ್ಯಾಪಾರವು ಕುಂಟಿತವಾಗಿ ದೀರ್ಘಾವಧಿಯಲ್ಲಿ ಹೋಟೆಲ್ ಉದ್ಯಮವೇ ಸಂಕಷ್ಟಕ್ಕೆ ಸಿಲುಕಲಿದೆ ಎಂದಿದೆ ಸಿಪಿಐ(ಎಂ). ಆದಕಾರಣ ಬೆಲೆ ಏರಿಕೆಯ ಕಾರಣ ದರ ಏರಿಸುವ ಬದಲು ಬೆಲೆ ಏರಿಕೆಯ ನಿಯಂತ್ರಣಕ್ಕೆ ಆಗ್ರಹಿಸಿ ಕೇಂದ್ರ ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರುವ ಹೋರಾಟಗಳಿಗೆ ಮುಂದಾಗಬೇಕೆಂದು ಹಾಗು ಬೆಲೆ ಏರಿಕೆಯ ವಿರುದ್ಧ ನಡೆದಿರುವ ಹೋರಾಟಗಳಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಲು ಮುಂದಾಗಬೇಕೆಂದು ಸಿಪಿಐ(ಎಂ) ಹೋಟೆಲ್ ಮಾಲೀಕರ ಸಂಘಗಳನ್ನು ಕೋರಿದೆ.





* ಪ್ರಕಾಶ್ ಕಾರಟ್

ಆದಿವಾಸಿಗಳ ಹಕ್ಕುಗಳನ್ನು ಕಸಿಯುವ ಬಲಪಂಥೀಯ ಅಸ್ಮಿತೆಯ ರಾಜಕಾರಣ

ಬುಡಕಟ್ಟು ಜನಗಳ ಹೆಮ್ಮೆಯ ವ್ಯಕ್ತಿಗಳನ್ನು ಶ್ಲಾಘಿಸುವುದು, ರೈಲು ನಿಲ್ದಾಣಗಳಿಗೆ ಅವರ ಹೆಸರನ್ನಿಡುವುದು, ಅವರ ಪ್ರತಿಮೆಗಳನ್ನು ನಿರ್ಮಿಸುವುದು ಇವೇ ಮುಂತಾದವುಗಳ ಮೂಲಕ ಬುಡಕಟ್ಟು ಅಸ್ಮಿತೆಯನ್ನು ತುಷ್ಟೀಕರಿಸುವುದು; ಅದೇ ಹೊತ್ತಿಗೆ, ಆದಿವಾಸಿಗಳ ಭೂಮಿ ಹಾಗೂ ಅರಣ್ಯ ಹಕ್ಕನ್ನು ಇಲ್ಲವಾಗಿಸಿ. ಅವರ ಪ್ರಜಾಸತ್ತಾತ್ಮಕ ಮತ್ತು ಸಾಂವಿಧಾನಕ ಹಕ್ಕುಗಳನ್ನು ತುಳಿದು ಹಾಕುವುದು.–ಇದು ಆದಿವಾಸಿಗಳನ್ನು ಕುರಿತಂತೆ ಮೋದಿ ಸರ್ಕಾರದ ಬಲಪಂಥೀಯ ಅಸ್ಮಿತೆಯ ರಾಜಕೀಯದ ಹಿಂದುತ್ವ ಮಾದರಿ. ಆದಿವಾಸಿಗಳೇ ಹಿಂದುತ್ವ–ಕಾರ್ಪೋರೇಟ್ ಆಳ್ವಿಕೆಯ ಪ್ರಮುಖ ಬಲಿಪಶುಗಳಾಗಿದ್ದಾರೆ.



ದಂತಕಥೆಯಾಗಿರುವ ಬುಡಕಟ್ಟು ನಾಯಕ ಬಿರ್ಸಾ ಮುಂಡಾ ಅವರ ಜನ್ಮ ದಿನಾಚರಣೆ ಪ್ರಯುಕ್ತ ನವೆಂಬರ್ 15ರಂದು ಮಧ್ಯ ಪ್ರದೇಶದ ಭೋಪಾಲ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಸ್ವಾತಂತ್ರ್ಯಾನಂತರ ಹಲವು ದಶಕಗಳ ಕಾಲ ಆದಿವಾಸಿಗಳನ್ನು ನಿರ್ಲಕ್ಷಿಸಲಾಗಿದೆ ಎಂದು ಹೇಳಿದ್ದಾರೆ. ತನ್ನ ಸರ್ಕಾರ ಮಾತ್ರವೇ ಆದಿವಾಸಿಗಳನ್ನು ದೇಶದ ಅಭಿವೃದ್ಧಿಯಲ್ಲಿ ಪಾಲುದಾರರನ್ನಾಗಿ ಹಾಗೂ ವಿವಿಧ ಯೋಜನೆಗಳ ಫಲಾನುಭವಿಗಳನ್ನಾಗಿ ಮಾಡಿದೆ ಎಂದಿದ್ದಾರೆ.

ಬಿರ್ಸಾ ಮುಂಡಾ ಜನ್ಮ ವರ್ಷಾಚರಣೆಯಂದು ಮೋದಿ ಸರ್ಕಾರ ತಾನು ಬುಡಕಟ್ಟು ಜನರ ಪರ ಎಂದು ಬಿಂಬಿಸಿಕೊಳ್ಳುವ ಭಾರಿ ಯತ್ನದಲ್ಲಿ ತೊಡಗಿರುವುದು ಕಾಣ ಬಂತು. ಇನ್ನು ಮುಂದೆ ಬಿರ್ಸಾ ಮುಂಡಾ ಜನ್ಮದಿನವನ್ನು 'ಬುಡಕಟ್ಟು ಗೌರವ ದಿನ'ವೆಂದು ಆಚರಿಸಲಾಗುವುದೆಂದು ಪ್ರಕಟಿಸಲಾಗಿದೆ. ಭೋಪಾಲ್‌ನಲ್ಲಿನ ಹಬೀಬ್‌ಗಂಜ್ ರೈಲ್ವೆ ನಿಲ್ದಾಣಕ್ಕೆ ಗೊಂಡ ರಾಣಿ ಕಮಲಾಪತಿ ಹೆಸರಿಡುವ ಮರುನಾಮಕರಣ ಸಮಾರಂಭದಲ್ಲಿ ಮೋದಿ ಪಾಲ್ಗೊಂಡಿದ್ದರು. ಅದೇ ದಿನ, ರಾಂಚಿಯಲ್ಲಿರುವ ಬಿರ್ಸಾ ಮುಂಡಾ ಹಾಗೂ ಆದಿವಾಸಿ ಇತಿಹಾಸ ಕುರಿತ ವಸ್ತುಸಂಗ್ರಹಾಲಯವನ್ನು ಮೋದಿ ಆನ್‌ಲೈನ್‌ನಲ್ಲಿ ಉದ್ಘಾಟಿಸಿದರು.

ಬಿರ್ಸಾ ಮುಂಡಾ ಜನ್ಮ ದಿನಾಚರಣೆ ಹಾಗೂ ಆದಿವಾಸಿಗಳ ಹಿತಾಸಕ್ತಿಯ ಸಂರಕ್ಷಕ ಎಂಬ ಮೋದಿಯ ಹೇಳಿಕೆಗಳು ವಾಸ್ತವದಲ್ಲಿ ಆದಿವಾಸಿ ಹಕ್ಕುಗಳನ್ನು ದಮನ ಮಾಡಲು ಹಾಗೂ ಅವರ ಜೀವನೋಪಾಯ ಮತ್ತು ಜೀವನ ವಿಧಾನವನ್ನು ನಾಶ ಮಾಡಲು ನಡೆಸುತ್ತಿರುವ ಆಟಾಟೋಪಗಳಿಗೆ ತೀರಾ ವ್ಯತಿರಿಕ್ತವಾಗಿದೆ. ದೇಶದ ಅರಣ್ಯ ಮತ್ತು ಅರಣ್ಯ ಭೂಮಿಯೊಂದಿಗೆ ಈ ಜನರ ಜೀವನ ಅವಿನಾಭಾವ ಸಂಬಂಧ ಹೊಂದಿದೆ. ಅದನ್ನೇ ನಾಶ ಮಾಡಲು ಮೋದಿ ಸರ್ಕಾರ ಪ್ರಯತ್ನಿಸುತ್ತಿದೆ.

ವಂಚನೆ 2014ರಲ್ಲಿ ನಿಲ್ಲಲಿಲ್ಲ, ವೇಗ ಪಡೆಯಿತು

ಸ್ವತಂತ್ರ ಭಾರತದಲ್ಲಿ ಬುಡಕಟ್ಟು ಜನಸಮುದಾಯದ ಚಿಂತಾಜನಕ ಪರಿಸ್ಥಿತಿಗೆ ಅಭಿವೃದ್ಧಿಯ ಬಂಡವಾಳಶಾಹಿ ಪಥವೇ ಕಾರಣವಾಗಿದೆ. ಸರ್ಕಾರಿ ಪ್ರಾಯೋಜಿತ ಮೂಲಸೌಕರ್ಯ ಯೋಜನೆಗಳು ಮತ್ತು ಖಾಸಗಿ ಕಾರ್ಪೊರೇಟ್ ಸಂಸ್ಥೆಗಳು ಆದಿವಾಸಿಗಳನ್ನು ಅವರ ಪಾರಂಪರಿಕ ನೆಲೆಗಳಿಂದ ಒಕ್ಕಲೆಬ್ಬಿಸುತ್ತಿವೆ. ಬಹಳಷ್ಟು ಜನರು ದರೋಡೆಕೋರ ಗುತ್ತಿಗೆದಾರರ ಗುಲಾಮರಾಗುವಂತೆ ಬಲವಂತ ಮಾಡಲಾಗುತ್ತಿದೆ ಹಾಗೂ ಅವರ ಮೂಲಭೂತ ಪ್ರಜಾಸತ್ತಾತ್ಮಕ ಮತ್ತು ಸಾಂವಿಧಾನಿಕ ಹಕ್ಕುಗಳನ್ನು ಉಲ್ಲಂಘಿಸಲಾಗುತ್ತಿದೆ. ಆದರೆ, ಈ ಸ್ಥಳಾಂತರ ಹಾಗೂ ವಂಚನೆ 2014ರಲ್ಲಿ ಮೋದಿ ಅಧಿಕಾರಕ್ಕೆ ಬಂದಾಗ ನಿಲ್ಲಲಿಲ್ಲ. ಅದಕ್ಕೆ ಬದಲು, ಖಾಸಗಿ ಬಂಡವಾಳವು ನೈಸರ್ಗಿಕ ಸಂಪನ್ಮೂಲ ಮತ್ತು ಅರಣ್ಯ ಸಂಪತ್ತನ್ನು ಶೋಷಿಸುವ ಪ್ರಕ್ರಿಯೆ ಇನ್ನಷ್ಟು ವೇಗ ಪಡೆದಿದೆ. ಗಣಿಗಾರಿಕೆ, ಖನಿಜಗಳನ್ನು ತೆಗೆಯಲು ಕ್ರಮ ಮತ್ತು ಕೈಗಾರಿಕೆಗಳ ಮೂಲಕ ಇದನ್ನು ಮಾಡಲಾಗುತ್ತಿದೆ.

ಗಣಿಗಾರಿಕೆಯನ್ನು ಗುತ್ತಿಗೆ ಕೊಡಲು ಗ್ರಾಮ ಸಭೆಗಳ ಅನುಮತಿ ಬೇಕೆಂಬ ಕ್ರಮ ಹಾಗೂ ಐದು ಹಾಗೂ ಆರನೇ ಶೆಡ್ಯೂಲ್‌ನಲ್ಲಿರುವ ಇತರ ನಿಯಮಗಳನ್ನು ಒಕ್ಕೂಟ ಸರ್ಕಾರ ದುರ್ಬಲಗೊಳಿಸಿದೆ. 2015ರ ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಹಾಗೂ ನಿಯಂತ್ರಣ) ಕಾನೂನಿಗೆ ತಿದ್ದುಡಿ ತರಲಾಗಿದ್ದು ಅದು ಮೋದಿ ಸರ್ಕಾರ ಪಾಸ್ ಮಾಡಿದ ಮೊದಲ ಕಾನೂನಾಗಿದೆ. ಈ ಮೂಲಕ, 2011ರಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲಿ ಕಾನೂನು ತಿದ್ದುಪಡಿ ಮಾಡಿ ಸೇರಿಸಲಾದ ಅನೇಕ ಉತ್ತಮ ನಿಯಮಗಳನ್ನು ಕೈಬಿಡಲಾಗಿದೆ. ಐದು ಹಾಗೂ ಆರನೇ ಶೆಡ್ಯೂಲ್ ಪ್ರದೇಶಗಳಲ್ಲಿ ಗಣಿ ಗುತ್ತಿಗೆಗೆ ಅನುಮತಿ ಕೊಡುವ ಮುಂಚೆ ಗ್ರಾಮ ಸಭೆಗಳೊಂದಿಗೆ ಸಮಾಲೋಚಿಸುವ, ಈ ಶೆಡ್ಯೂಲ್‌ಗಳನ್ವಯ ಕಿರು ಖನಿಜಗಳನ್ನು ಬುಡಕಟ್ಟು ಸಹಕಾರಿಗಳಿಗೆ ನೀಡುವ ಅರ್ಹತೆ, ಕಲ್ಲಿದ್ದಲು ಕಂಪೆನಿಗಳು ತಮ್ಮ ಲಾಭದಲ್ಲಿ ಶೇಕಡ 26ರಷ್ಟನ್ನು ಜಿಲ್ಲಾ ಖನಿಜ ಪ್ರತಿಷ್ಠಾನಕ್ಕೆ (ಡಿಎಂಎಫ್) ಕಡ್ಡಾಯವಾಗಿ ನೀಡಬೇಕು ಇತ್ಯಾದಿ ನಿಯಮಗಳನ್ನು ಮೋದಿ ಸರ್ಕಾರ ತೆಗೆದು ಹಾಕಿದೆ.

ಹೀಗೆ, ಮೋದಿ ಸರ್ಕಾರ ಒಂದುಕಡೆ ಬುಡಕಟ್ಟು ಜನವಸತಿಯ ಪ್ರದೇಶಗಳಲ್ಲಿ ಗಣಿ ಮತ್ತು ಖನಿಜ ಉದ್ದಿಮೆಗಳ ಸ್ಥಾಪನೆಗೆ ಪರವಾನಿಗೆ ನೀಡಿದೆ. ಅದೇ ವೇಳೆಯಲ್ಲಿ, ಐದು ಹಾಗೂ ಆರನೇ ಶೆಡ್ಯೂಲ್ ಪ್ರದೇಶಗಳಲ್ಲಿನ ಬುಡಕಟ್ಟು ಜನರ ಸಾಂವಿಧಾನಿಕ ಹಕ್ಕನ್ನು ಕಿತ್ತುಕೊಂಡಿದೆ.

1927ರ ಭಾರತೀಯ ಅರಣ್ಯ ಕಾನೂನಿಗೆ ಪ್ರಸ್ತಾಪಿಸಲಾಗಿರುವ ತಿದ್ದುಪಡಿಯು ಗ್ರಾಮ ಸಭೆಗಳ ಪಾತ್ರವನ್ನೇ ಅಳಿಸಿ ಹಾಕಲಿದೆ. ಹಾಗೂ ಅರಣ್ಯಗಳ ಮೇಲೆ ಅವರ ಹಕ್ಕುಗಳಿಗೆ ಸಂಬಂಧಪಟ್ಟಂತೆ ಬುಡಕಟ್ಟು ಜನರನ್ನು ಕೂಡ ಇತರ ಸಮುದಾಯಗಳಂತೆ ಪರಿಗಣಿಸಿ ಅವರ ಸಾಗುವಳಿ, ಮೀನುಗಾರಿಕೆ, ಅರಣ್ಯ ಉತ್ಪನ್ನಗಳು ಮತ್ತು ಹುಲ್ಲುಗಾವಲಿನ ಮೇಲಿನ ಹಕ್ಕುಗಳು ಮೊದಲಾದ ಬುಡಕಟ್ಟು ಬದುಕಿನ ಎಲ್ಲ ಆಯಾಮಗಳನ್ನು ಅಪರಾಧವೆಂದು ಪರಿಗಣಿಸುವತ್ತ ದಾರಿ ಮಾಡಿಕೊಡಲಿದೆ.

ಅರಣ್ಯ ಕಾಯ್ದೆಯ ಉಲ್ಲಂಘನೆ

ಅರಣ್ಯ ಕಾನೂನು ತಿದ್ದುಪಡಿ ಮಸೂದೆಗೆ ವ್ಯಾಪಕ ವಿರೋಧ ವ್ಯಕ್ತವಾಗಿದ್ದು ಸಂಸತ್ತಿನಲ್ಲಿ ಇನ್ನೂ ಅಂಗೀಕಾರವಾಗಿಲ್ಲ. 2018–19ರ ಪ್ರಸ್ತಾಪಿತ ಅರಣ್ಯ ನೀತಿಯೇ ಆಗಿರಲಿ ಅಥವಾ 1980ರ ಅರಣ್ಯ ಸಂರಕ್ಷಣಾ ಕಾಯ್ದೆಯ ಪ್ರಸ್ತಾಪಿತ ಇತರ ತಿದ್ದುಪಡಿಗಳೇ ಇರಲಿ, ಅವೆಲ್ಲದರ ಒಟ್ಟಾರೆ ಪರಿಣಾಮ ಒಂದೇ ಆಗಿರುತ್ತದೆ. ಅದೆಂದರೆ, ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗೆ ತಿರುಗಿಸುವುದನ್ನು ಸುಲಭಗೊಳಿಸುವುದು; ಅರಣ್ಯಗಳ ಖಾಸಗೀಕರಣ ಹಾಗೂ ವಾಣಿಜ್ಯೀಕರಣಕ್ಕೆ ಉತ್ತೇಜನೆ ಹಾಗೂ ಗ್ರಾಮಸಭೆಗಳ ಸಮ್ಮತಿಯ ಅಧಿಕಾರವನ್ನು ತೆಗೆದು ಹಾಕುವುದು.

ಈ ಎಲ್ಲ ಉದ್ದೇಶಿತ ನೀತಿ ಬದಲಾವಣೆಗಳು, ಕೃಷಿ ಮಾಡುವ ಹಾಗೂ ಕಿರು ಅರಣ್ಯ ಉತ್ಪನ್ನಗಳನ್ನು ಹೊಂದುವ ಬುಡಕಟ್ಟು ಸಮುದಾಯಗಳ ಹಾಗೂ ದೀರ್ಘ ಕಾಲದಿಂದ ಅರಣ್ಯ ಜಮೀನಿನಲ್ಲಿ ವಾಸವಿರುವವರ ಹಕ್ಕುಗಳನ್ನು ಮಾನ್ಯ ಮಾಡಿರುವ ಅರಣ್ಯ ಹಕ್ಕುಗಳ ಕಾಯ್ದೆಯ ಅಂಶಗಳನ್ನು ದುರ್ಬಲಗೊಳಿಸುತ್ತವೆ.

ಬುಡಕಟ್ಟು ಜನಗಳ ಹಕ್ಕುಗಳನ್ನು ಕಿತ್ತುಕೊಳ್ಳುವ ಕೆಲಸ ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿದೆ. ಕೇಂದ್ರದ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಬಿಡುಗಡೆ ಮಾಡಿರುವ ಅಂಕಿಅಂಶಗಳ ಪ್ರಕಾರ, 2020 ಆಗಸ್ಟ್ 31ರವರೆಗೆ ಹಕ್ಕುಪತ್ರಕ್ಕಾಗಿ ಸಲ್ಲಿಸಲಾಗಿರುವ ಅರ್ಜಿಗಳಲ್ಲಿ ಶೇಕಡ 46.69ರಷ್ಟನ್ನು ಮಾತ್ರವೇ, ಅಂದರೆ ಅರ್ಧಕ್ಕಿಂತಲೂ ಕಡಿಮೆ ದಾವೆಗಳನ್ನು ಅಂಗೀಕರಿಸಲಾಗಿದೆ. ಬುಡಕಟ್ಟು ಜನರ ಕಲ್ಯಾಣದ ಬಗ್ಗೆ ತನ್ನ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಮೋದಿ ಬಡಾಯಿ ಕೊಚ್ಚಿಕೊಂಡಿರುವ ಮಧ್ಯ ಪ್ರದೇಶ ರಾಜ್ಯದಲ್ಲೇ ಅರಣ್ಯ ಹಕ್ಕುಗಳ ಕಾನೂನಿನಡಿ ಸಲ್ಲಿಸಲಾಗಿರುವ ಸುಮಾರಾಗಿ ಪ್ರತಿ ಐದರಲ್ಲಿ ಮೂರು ಬುಡಕಟ್ಟು ಕುಟುಂಬಗಳ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಬುಡಕಟ್ಟು ಜನಗಳಿಗೆ ಅರಣ್ಯ ಜಮೀನುಗಳ ಹಕ್ಕು ಮತ್ತು ಸಾಗುವಳಿಯ ಹಕ್ಕನ್ನು ಕೊಟ್ಟಿರುವ ಅರಣ್ಯ ಹಕ್ಕುಗಳ ಕಾಯ್ದೆ, 2006ರ ಉಲ್ಲಂಘನೆಯಾಗುತ್ತಿದೆ.

ಮೋದಿ ಆಡಳಿತದಲ್ಲಿ ಆದಿವಾಸಿಗಳ "ಸಮಾಜ ಕಲ್ಯಾಣ' ಹೇಗಿದೆ ಎನ್ನುವುದಕ್ಕೆ ಆದಿವಾಸಿ ಮಕ್ಕಳ ದುಸ್ಥಿತಿಯೇ ಕನ್ನಡಿ ಹಿಡಿಯುತ್ತದೆ. ಕೋವಿಡ್ ನಿಯಂತ್ರಣಕ್ಕೆಂದು ಹೇರಲಾದ ಮೊದಲ ಲಾಕ್‌ಡೌನ್ 2020 ಮಾರ್ಚ್‌ನಲ್ಲಿ ಆರಂಭವಾಗಿ ಶಾಲೆಗಳನ್ನು ಮುಚ್ಚಿದಾಗ, ಶೇಕಡ 90ರಿಂದ 95ರಷ್ಟು ಗ್ರಾಮೀಣ ಆದಿವಾಸಿ ವಿದ್ಯಾರ್ಥಿಗಳು ಶಿಕ್ಷಣದ ಇದ್ದಬದ್ದ ಅಲ್ಪ ಅವಕಾಶಗಳಿಂದಲೂ ವಂಚಿತರಾದರು. ಆನ್‌ಲೈನ್ ಶಿಕ್ಷಣ ಜಗತ್ತು ಆದಿವಾಸಿ ವಿದ್ಯಾರ್ಥಿಗಳಿಗೆ ಗಗನ ಕುಸುಮವೇ ಸರಿ. ಬಹುತೇಕ ಆದಿವಾಸಿ ಮಕ್ಕಳಿಗೆ ಶಿಕ್ಷಣದ ಹಕ್ಕು ಬರೀ ಪುಸ್ತಕದ ಬದನೆಕಾಯಿಯಾಯಿತು.



ಜಲ್–ಜಂಗಲ್–ಜಮೀನ್ ಹೋರಾಟ

ಆಹಾರ ಭದ್ರತೆ ವಿಚಾರಕ್ಕೆ ಬಂದರೆ ಅತಿ ಹೆಚ್ಚು ತೊಂದರೆಗೆ ಒಳಗಾದವರು ಗ್ರಾಮೀಣ ಆದಿವಾಸಿ ಕುಟುಂಬಗಳು. ಹಸಿವಿನ ಅತಿ ಹೆಚ್ಚಿನ ಪ್ರಕರಣ ಅವರಲ್ಲೇ ಇದೆ. ಮನ್‌ರೇಗಾದಡಿ ಉದ್ಯೋಗ ಸಿಗುವಲ್ಲಿಯೂ ಇವರೇ ಅತಿ ಹೆಚ್ಚು ವಂಚಿತರು.

ವಂಚಕ ಹಿಂದುತ್ವ ನಿಲುವು

ಆದಿವಾಸಿಗಳನ್ನು ಕುರಿತಂತೆ ಮೋದಿ ಸರ್ಕಾರದ ಹಿಂದುತ್ವ ನಿಲುವು ಬಲಪಂಥೀಯ ಅಸ್ಮಿತೆಯ ರಾಜಕೀಯದ ರೀತಿಯದ್ದೇ ಆಗಿದೆ. ಮೋದಿ ತನ್ನ ಭಾಷಣದಲ್ಲಿ ಶ್ರೀರಾಮನ ಆದರ್ಶ ವ್ಯಕ್ತಿತ್ವವು ಬುಡಕಟ್ಟು ಸಮಾಜದೊಂದಿಗೆ ಬೆಸೆದುಕೊಂಡಿದೆ ಎಂದು ಹೇಳಿದರು. ಇದು ಆದಿವಾಸಿಗಳನ್ನು ಹಿಂದೂ ವ್ಯವಸ್ಥೆಯಲ್ಲಿ ವಿಲೀನಗೊಳಿಸಿಕೊಳ್ಳುವ ಹಿಂದುತ್ವ ಯೋಜನೆಗೆ ಅನುಗುಣವಾಗಿದೆ. ನಿಜ, ಈ ವಿಲೀನವನ್ನು ನಡೆಸುವುದು ಸಮಾಜದ ಅತೀ ಕೆಳಸ್ತರದಲ್ಲಿಯೇ ಎಂದು ಬೇರೆ ಹೇಳಬೇಕಾಗಿಲ್ಲ.

ಬುಡಕಟ್ಟು ಜನಗಳ ಹೆಮ್ಮೆಯ ವ್ಯಕ್ತಿಗಳನ್ನು ಶ್ಲಾಘಿಸುವುದು, ರೈಲು ನಿಲ್ದಾಣಗಳಿಗೆ ಅವರ ಹೆಸರನ್ನಿಡುವುದು, ಅವರ ಪ್ರತಿಮೆಗಳನ್ನು ನಿರ್ಮಿಸುವುದು ಇವೇ ಮುಂತಾದವುಗಳ ಮೂಲಕ ಬುಡಕಟ್ಟು ಅಸ್ಮಿತೆಯನ್ನು ತುಷ್ಟೀಕರಿಸುವುದು; ಅದೇ ಹೊತ್ತಿಗೆ, ಆದಿವಾಸಿಗಳ ಭೂಮಿ ಹಾಗೂ ಅರಣ್ಯ ಹಕ್ಕನ್ನು ಇಲ್ಲವಾಗಿಸಿ. ಅವರ ಪ್ರಜಾಸತ್ತಾತ್ಮಕ ಮತ್ತು ಸಾಂವಿಧಾನಕ ಹಕ್ಕುಗಳನ್ನು ತುಳಿದು ಹಾಕುವುದು. ಆದಿವಾಸಿಗಳೇ ಹಿಂದುತ್ವ–ಕಾರ್ಪೋರೇಟ್ ಆಳ್ವಿಕೆಯ ಪ್ರಮುಖ ಬಲಿಪಶುಗಳಾಗಿದ್ದಾರೆ.

* ಅನು: ವಿಶ್ವ



ಬಂಡವಾಳಶಾಹಿ ಸ್ನೇಹಿತರಿಗಾಗಿ ಪ್ಯಾಕೇಜ್‌ಗಳನ್ನು ಪ್ರಕಟಿಸಲಾಯಿತೇ ಹೊರತು ಜನರಿಗಾಗಿ ಸರ್ಕಾರ ಏನನ್ನೂ ಮಾಡಲಿಲ್ಲ

ಹಾಸನ ಸಿಪಿಐ(ಎಂ) 11ನೇ ಜಿಲ್ಲಾ ಸಮ್ಮೇಳನ



ಕೊರೊನಾದಿಂದಾಗಿ ಜನ ಸಂಕಷ್ಟದಲ್ಲಿರುವಾಗ ಜನರಿಂದ ವೋಟು ಪಡೆದು ಚುನಾಯಿತವಾದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಜನರ ನೆರವಿಗೆ ನಿಲ್ಲದೆ ಚುನಾವಣೆಗೆ ಹಣ ನೀಡಿದ ಕಾರ್ಪೋರೆಟ್ ಸ್ನೇಹಿತರ ಪರವಾಗಿ ನಿಂತಿದ್ದರ ಪರಿಣಾಮವಾಗಿ ದೇಶ ಇಂದು ಬಿಕ್ಕಟ್ಟಿಗೆ ಸಿಲುಕಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಎಸ್.ವರಲಕ್ಷ್ಮೀ ದೂರಿದರು.

ಹಾಸನದಲ್ಲಿ ಶನಿವಾರ ಆರಂಭವಾದ ಸಿಪಿಎಂ ಹಾಸನ ಜಿಲ್ಲಾ ಸಮಿತಿಯ 11ನೇ ಜಿಲ್ಲಾ ಸಮ್ಮೇಳನದ ಅಂಗವಾಗಿ ಕನ್ನಡ ಸಾಹಿತ್ಯ ಪರಿಷತ್ ಭವನದ ಆವರಣದಲ್ಲಿ ನಡೆದ ಬಹಿರಂಗ ಸಭೆ ಉದ್ಘಾಟಿಸಿ ಮಾತನಾಡುತ್ತಿದ್ದರು. ಕೊರೊನಾದಿಂದ ದುಡಿಯುವ ಜನರೂ ಸೇರಿದಂತೆ ಇಡೀ ದೇಶವೇ ಸಂಕಷ್ಟದಲ್ಲಿದೆ. ಕೊರೊನಾ ಸಾಂಕ್ರಾಮಿಕ ಪರಿಸ್ಥಿತಿಯನ್ನು ನಿರ್ವಹಿಸಲು ಕೇಂದ್ರ ಸರ್ಕಾರ ವಿಫಲವಾಯಿತು. ವಿವೇಚನೆ ಇಲ್ಲದ ಲಾಕ್‌ಡೌನ್, ಲಾಕ್‌ಡೌನ್ ವೇಳೆ ಜನರ ಪ್ರಾಥಮಿಕ ಅಗತ್ಯಗಳನ್ನು ಪೂರೈಸಲು ವಿಫಲವಾದ ಸರ್ಕಾರ ಜನರ ಸಂಕಷ್ಟಕ್ಕೆ ಕಾರಣವಾಯಿತು. ದುಡಿಯುವ ಜನರಿಗೆ ಪ್ಯಾಕೇಜ್ ನೀಡುವುದು, ಆರು ತಿಂಗಳ ಕಾಲ 20ಕೆಜಿ ಆಹಾರಧಾನ್ಯಗಳ ಉಚಿತ ಪೂರೈಕೆ, ಕನಿಷ್ಟ 10 ಸಾವಿರ ರೂ. ನಗದು ಪಾವತಿ ಮತ್ತಿತರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ನಿರಾಕರಿಸಿದ್ದರಿಂದ ಜನರ ಪರಿಸ್ಥಿತಿ ಕೊರೊನಾ ಕಾಲದಲ್ಲಿ ಇನ್ನಷ್ಟು ಸಂಕಷ್ಟಕ್ಕಿಳಿಯಿತು. ಆದರೆ ಬಂಡವಾಳಶಾಹಿ ಸ್ನೇಹಿತರಿಗಾಗಿ ಪ್ಯಾಕೇಜ್‌ಗಳನ್ನು ಪ್ರಕಟಿಸಲಾಯಿತೇ ಹೊರತು ಜನರಿಗಾಗಿ ಸರ್ಕಾರ ಏನನ್ನೂ ಮಾಡಲಿಲ್ಲ ಎಂದು ವರಲಕ್ಷ್ಮೀ ದೂರಿದರು.

ಕೊರೊನಾ ಮೊದಲ ಅಲೆಯಲ್ಲಿ ದಯನೀಯ ವೈಫಲ್ಯ ಅನುಭವಿಸಿದ ಸರ್ಕಾರಗಳು ಎರಡನೇ ಅಲೆ ವೇಳೆಯಲ್ಲೂ ತಮ್ಮ ಜನವಿರೋಧಿ ನೀತಿಯನ್ನು ಮುಂದುವರಿಸಿದ್ದರಿಂದ ಅಪಾರ ಪ್ರಾಣಹಾನಿ ಉಂಟಾಯಿತು. ಕೊನೆಗೆ ನ್ಯಾಯಾಲಯಗಳು ಮಧ್ಯಪ್ರವೇಶ ಮಾಡಿದ್ದರಿಂದ ಜನರಿಗೆ ಆಮ್ಲಜನಕ, ಲಸಿಕೆ ಮತ್ತಿತರ ಕೆಲ ಸೌಲಭ್ಯಗಳು ಸಿಕ್ಕುವಂತಾಯಿತು. ಕೊರೊನಾದಿಂದ ಅಸ್ತವ್ಯಸ್ತವಾಗಿದ್ದ ಜನಜೀವನ ಮತ್ತೆ ಸರಿದಾರಿಗೆ ಬರುತ್ತಿದೆ ಎನ್ನುವಾಗಲೇ ಅಗತ್ಯವಸ್ತುಗಳು, ತೈಲ ಬೆಲೆಗಳು ಅಸಹನೀಯವಾಗಿ ಹೆಚ್ಚಳವಾಯಿತು. ಬೆಲೆ ನಿಯಂತ್ರಣ ಮಾಡಬೇಕಿದ್ದ ಕೇಂದ್ರ ಸರ್ಕಾರ ದಿವ್ಯ ನಿರ್ಲಕ್ಷ್ಯ ತಾಳಿತು. ಮುಂದುವರಿದು ಬೆಲೆ ಏರಿಕೆಗೆಹಿಂದಿನ ಕಾಂಗ್ರೆಸ್ ಸರ್ಕಾರವನ್ನು ದೂರತೊಡಗಿತು. ಇದರಿಂದ ಜನರ ಸಂಕಷ್ಟಗಳಿಗೆ ಪರಿಹಾರ ನೀಡುವುದರಿಂದ ದೂರ ಉಳಿದ ಕೇಂದ್ರ ಸರ್ಕಾರ ಈ ವಿಫಲತೆಯನ್ನು ಮುಚ್ಚಿಕೊಳ್ಳಲು ತನ್ನ ಹಳೆಯ ಕೋಮುಧ್ರುವೀಕರಣ ನೀತಿಗಳಿಗೆ ಶರಣಾಯಿತು. ಇದೇ ವೇಳೆ ಕೊರೊನಾ ನಿರ್ವಹಣೆ ಮತ್ತು ಬೆಲೆ ಏರಿಕೆ ನಿಯಂತ್ರಣ ಸಂಬಂಧ ಸಿಪಿಎಂ ನೇತೃತ್ವದ ಕೇರಳ ಸರ್ಕಾರ ವಿಶ್ವಾದ್ಯಂತ ಜನರ ಮೆಚ್ಚುಗೆಗೆ ಪಾತ್ರವಾಯಿತು. ಕೇವಲ ತೈಲಗಳ ಮೇಲಿನ ತೆರಿಗೆಯಿಂದಲೇ ನಾಲ್ಕೂವರೆ ಲಕ್ಷ ಕೋಟಿ ವಸೂಲಿ ಮಾಡಿದೆ. ಇದನ್ನು ಜನರಿಗೆ ವಾಪಸ್ ನೀಡಿ ಜನರ ಸಮಸ್ಯೆಗಳನ್ನು ಪರಿಹರಿಸುವುದನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿತು ಎಂದು ವರಲಕ್ಷ್ಮೀ ಟೀಕಿಸಿದರು.

ದೆಹಲಿಯಲ್ಲಿ ಕಳೆದೊಂದು ವರ್ಷದಿಂದ ರೈತರು ಕೃಷಿ ಕಾನೂನುಗಳ ತಿದ್ದುಪಡಿ ವಿರುದ್ಧ ಹೋರಾಟ ಮಾಡುತ್ತಿದ್ದಾರೆ. ಭೂಮಿಯನ್ನು ಕಾರ್ಪೋರೆಟ್ ಧಣಿಗಳಿಗೆ ನೀಡುವುದನ್ನು ವಿರೋಧಿಸಿ ಈ ಹೋರಾಟ ನಡೆಯುತ್ತಿದೆ. ಕೃಷಿ ಭೂಮಿ ಕಾರ್ಪೋರೆಟ್ ಧಣಿಗಳ ಪಾಲಾದರೆ ಸಣ್ಣ ರೈತರ ಮೇಲಿನ ಪರಿಣಾಮಗಳ ಬಗ್ಗೆ ರೈತರ ಆತಂಕಗಳನ್ನು ಪರಿಹರಿಸಬೇಕಾದ ಸರ್ಕಾರ ರೈತರನ್ನು ದೂರುವುದರಲ್ಲಿ ನಿರತವಾಯಿತು. ಅದೇ ರೀತಿ ಕಾರ್ಮಿಕ ಕಾನೂನುಗಳನ್ನು ಬಂಡವಾಳಶಾಹಿಗಳ ಪರವಾಗಿ ತಿದ್ದುಪಡಿ ಮಾಡಲಾಗಿದೆ. ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳ ಭಾಗವಾಗಿದ್ದ ಕೆಲ ವಿದ್ಯುತ್ ಪೂರೈಕೆ ಯೋಜನೆಗಳನ್ನು ರದ್ದುಮಾಡುವ ವಿದ್ಯುತ್‌ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ವಿದ್ಯುತ್ ಕಾಯ್ದೆಗಳನ್ನು ರೂಪಿಸಿ ತಾನು ಜನವಿರೋಧಿ ಎಂದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನಿರೂಪಿಸಿದೆ ಎಂದು ವರಲಕ್ಷ್ಮೀ ಟೀಕಿಸಿದರು.



ಮುಖ್ಯ ಅತಿಥಿಯಾದ ಸಿಪಿಎಂ ರಾಜ್ಯ ಸಮಿತಿ ಸದಸ್ಯ ಕೆ.ಎನ್.ಉಮೇಶ್ ಮಾತನಾಡಿ, ಕಳೆದ 20 ತಿಂಗಳಲ್ಲಿ ಕೋವಿಡ್ ಸಂಕಷಟವನ್ನು ದೇಶ ಅನುಭವಿಸಿದೆ. ಕೊರೊನಾ ವೇಳೆ ಹಾಸಿಗೆ, ಔಷಧಿ ಪೂರೈಸಲು ಸರ್ಕಾರಗಳು ವಿಫಲವಾದವು. ಕೋರ್ಟ್ ಛೀಮಾರಿ ಹಾಕಿಸಿಕೊಂಡ ಸರ್ಕಾರಗಳು ನಂತರವೂ ಪಾಠ ಕಲಿಯಲಿಲ್ಲ ಆದರೆ ತಾವು ಕೋವಿಡ್ ಅನ್ನು ಗೆದ್ದಿದ್ದೇವೆಎಂದು ತಮ್ಮ ಬೆನ್ನುಗಳನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ. ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಲಸಿಕೆಯನ್ನು ಹಣ ನೀಡಿ ಖರೀದಿಸಬೇಕಾಯಿತು. ಲಸಿಕೆಗಾಗಿ 35 ಸಾವಿರ ಕೋಟಿ ಬಜೆಟ್‌ನಲ್ಲಿ ಅನುದಾನ ಇಟ್ಟಿದ್ದರೂ ಲಸಿಕೆಯನ್ನು ಜನರು ಖರೀದಿಸಬೇಕಾಯಿತು. ಕೋರ್ಟ್ ಮಧ್ಯಪ್ರವೇಶ ಮಾಡಿದ್ದರಿಂದ ಎಲ್ಲರಿಗೂ ಉಚಿತವಾಗಿ ನೀಡುವುದಾಗಿ ಘೋಷಣೆ ಮಾಡಲಾಯಿತು. ಕೋವಿಡ್ ವೇಳೆ ಬಿಜೆಪಿ ಸರ್ಕಾರ ನಡೆಸಿದ ಭ್ರಷ್ಟಾಚಾರವೂ ಬಯಲಾಯಿತು. ಸೀಲ್‌ಡೌನ್‌ಗೆ 7000 ರೂ, ಶವಸಂಸ್ಕಾರಕ್ಕೆ 25000 ರೂ. ಬಿಲ್ ಮಾಡಿಕೊಳ್ಳಲಾಯಿತು. ಕೋವಿಡ್ ಕೇರ್ ಸೆಂಟರ್‌ಗಳು ಎರಡನೇ ಅಲೆ ಆರಂಭವಾಗುತ್ತಿದ್ದಂತೆ ನಾಪತ್ತೆಯಾದವು. ಕೊರೊನಾದಿಂದ ಜನರ ಜೀವ ಉಳಿಸಲು ಆಸಕ್ತಿ ತೋರದ ಸರ್ಕಾರ ಮೃತರಾದವರ ತಿಥಿ ಮಾಡಲು ಕಂದಾಯ ಸಚಿವರು ಆಸಕ್ತಿ ತೋರಿದರು ಎಂದು ವ್ಯಂಗ್ಯವಾಡಿದ ಉಮೇಶ್, ತಮ್ಮ ವೈಫಲ್ಯ ಮರೆಮಾಚಲು ಹಿಂದುತ್ವವನ್ನು ಮುನ್ನೆಲೆಗೆ ತಂದು ಜನರಿಗೆ ದ್ರೋಹವೆಸಗಲಾಯಿತು. ಮತೀಯ ಗೂಂಡಗಿರಿಗೆ ಸಿಎಂ ಕ್ರಿಯೆಗೆ ಪ್ರತಿಕ್ರಿಯೆ ಎಂದು ಹೇಳುವ ಮೂಲಕ ಸಂವಿಧಾನವಿರೋಧ ಶಕ್ತಿಗಳಿಗೆ ಶರಣಾದರು. ಈ ಮೂಲಕ ಸಂವಿಧಾನಬುಡಮೇಲು ಮಾಡಲು ಬಿಜೆಪಿ ಸರ್ಕಾರವೇ ಮುಂದಾಗಿದೆ. ಇದಕ್ಕೆ ಬೃಹತ್ ಜನಾಂದೋಲನವನ್ನು ಕಟ್ಟುವುದೇ ಪರಿಹಾರ ಎಂದು ಉಮೇಶ್ ಹೇಳಿದರು.



ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ಮಾತನಾಡಿ, ಹಾಸನ ಜಿಲ್ಲೆಯು ವಿಶಿಷ್ಟ ಭೌಗೋಳಿಕ ರಚನೆಯನ್ನು ಹೊಂದಿದ್ದು, ಮಲೆನಾಡಿನಲ್ಲಿ ಕಾಫಿ, ಅರೆಮಲೆನಾಡಿನಲ್ಲಿ ಆಲೂಗೆಡ್ಡೆ, ಬಯಲುಸೀಮೆಯಲ್ಲಿ ತೆಂಗು ಕೃಷಿ ಪ್ರಧಾನವಾಗಿತ್ತು. ಸರ್ಕಾರದ ನೀತಿಗಳಿಂದ ಕಾಫಿ, ಆಲೂಗೆಡ್ಡೆ ಮತ್ತು ತೆಂಗು ಮೂರು ಬೆಳೆಗಳು ಇಂದು ಬೆಳೆಗಾರರ ಕಣ್ಣೀರಿಗೆ ಕಾರಣವಾಗಿವೆ. ಬೆಲೆ ಸಿಗದೆ ಬೆಳೆಗಾರರು ಕಂಗಾಲಾಗಿದ್ದಾರೆ. ಕಾಫಿ ಬೆಲೆ ಕುಸಿತದಿಂದ ಸಾವಿರಾರು ಕಾರ್ಮಿಕರೂ ಕೂಡ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸರ್ಕಾರ ಕೇವಲ ಮಾಲೀಕರಿಗೆ ಪ್ಯಾಕೇಝ್ ನೀಡದೆ ಕಾರ್ಮಿಕರಿಗೂ ಪ್ಯಾಕೇಜ್ ನೀಡಬೇಕು ಎಂದು ಆಗ್ರಹಿಸಿದರು.

ಬಹಿರಂಗ ಸಭೆ ಅಧ್ಯಕ್ಷತೆ ವಹಿಸಿದ್ದ ಸಿಪಿಎಂ ಜಿಲ್ಲಾ ಸಮಿತಿ ಸದಸ್ಯ ಎಚ್.ಆರ್.ನವೀನ್‌ಕುಮಾರ್ ಮಾತನಾಡಿ, ರೈತರು ಬೆಳೆದ ಬೆಳೆಗಳಿಗೆ ಬೆಲೆ ಇಲ್ಲ. ದುಡಿಯುವ ಜನರಲ್ಲಿ ಹಣವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಜನರ ನೆರವಿಗೆ ಬರಬೇಕು ಎಂದು ಒತ್ತಾಯಿಸಿದರು.

ಬಹಿರಂಗ ಸಭೆಗೂ ಮುನ್ನ ಸಾವಿರಾರು ಸಿಪಿಎಂ ಕಾರ್ಯಕರ್ತರು ಆಕರ್ಷಕ ಮೆರವಣಿಗೆ ನಡೆಸಿದರು. ಸಿಪಿಎಂ ಪಕ್ಷದ ಹಿರಿಯ ಸದಸ್ಯ ವಿ.ಸುಕಮಾರ್ ವೇದಿಕೆಯಲ್ಲಿದ್ದರು. ಸಿಪಿಎಂ ಸ್ಥಳೀಯ ಸಮಿತಿ ಕಾರ್ಯದರ್ಶಿ ಎಂ.ಜಿ.ಪೃಥ್ವಿ ಸ್ವಾಗತಿಸಿದರು. ಜಿಲ್ಲಾ ಸಮಿತಿ ಸದಸ್ಯೆ ಸೌಮ್ಯ ಕಾರ್ಯಕ್ರಮ ನಿರ್ವಹಿಸಿದರು. ಜಿಲ್ಲಾ ಸಮಿತಿ ಸದಸ್ಯ ಅರವಿಂದ ವಂದಿಸಿದರು.

ಗಂಗೂರು ಜೀತ ವಿಮುಕ್ತ, ಭೂಹೀನ ದಲಿತರಿಗೆ ಕೃಷಿ ಭೂಮಿ ಮುಂಜೂರು ಮಾಡಿ, ಪುನರ್ವಸತಿ ಕಲ್ಪಸುವವರೆಗೂ ದಲಿತ ಜನಪರ ಸಂಘಟನೆಗಳ ಐಕ್ಯತೆಯ ಹೋರಾಟವನ್ನು ತೀವ್ರಗೊಳಿಸಲು ಮತ್ತು ದಲಿತರ ಮೇಲಿನ ದೌರ್ಜನ್ಯ, ಜಾತಿ ಅಸ್ಪೃಶ್ಯತೆ ವಿರುದ್ಧದ ಹೋರಾಟವನ್ನು ತೀವ್ರಗೊಳಿಸಲು ನವೆಂಬರ್ 13 ಮತ್ತು 14 ರಂದು ಹಾಸನದಲ್ಲಿ ನಡೆದ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) 11 ನೇ ಜಿಲ್ಲಾ ಸಮ್ಮೇಳನದಲ್ಲಿ ನಿರ್ಣಯವನ್ನು ಅಂಗೀಕರಿಸಲಾಯಿತು.

ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಹೋಬಳಿಯ ಗಂಗೂರು 'ಜೀತ ವಿಮುಕ್ತ, ಭೂಮಿ ವಂಚಿತ ದಲಿತರು' ಕಳೆದ 45 ವರ್ಷಗಳಿಂದಲೂ ಉಳುಮೆ ಮಾಡುತ್ತಿದ್ದ ಭೂಮಿಯಿಂದ ಇತ್ತೀಚೆಗೆ ಅರಣ್ಯ ಇಲಾಖೆಯು ಅವರನ್ನು ಅಮಾನವೀಯವಾಗಿ ಒಕ್ಕಲೆಬ್ಬಿಸಿತ್ತು. ಅಲ್ಲಿಯೇ ಗುಡಿಸಲುಗಳಲ್ಲಿ ವಾಸವಿರುವ ದಲಿತ ಕುಟುಂಬಗಳು ನಮಗೆ ಭೂಮಿ ಹಕ್ಕು ನೀಡಬೇಕೆಂದು ಸರ್ಕಾರ ಮತ್ತು ಜಿಲ್ಲಾಡಳಿತವನ್ನು ಆಗ್ರಹಿಸುತ್ತಿದ್ದಾರೆ.

ಹಾಸನ ಜಿಲ್ಲಾಡಳಿತವೇ ಗಂಗೂರು ಜೀತ ವಿಮುಕ್ತರೆಂದು 97 ಕುಟುಂಬಗಳನ್ನು ಪಟ್ಟಿ ಮಾಡಿ, 27 ವರ್ಷಗಳಾದರೂ ಈ ಎಲ್ಲ ದಲಿತರಿಗೆ ಇದುವರೆಗೂ ಕೃಷಿ ಭೂಮಿ, ಶಾಶ್ವತ ಪರಿಹಾರ ನೀಡದಿರುವುದು ಹಾಸನ ಜಿಲ್ಲಾಡಳಿತ, ಸರ್ಕಾರಗಳು ಮತ್ತು ಪ್ರತಿನಿಧಿಗಳಿಗೆ ನಾಚಿಕೆ ಗೇಡಿನ ಸಂಗತಿ ಹಾಗೂ ಅತ್ಯಂತ ದಲಿತ ವಿರೋಧಿ ದೋರಣೆಯಾಗಿದೆ ಎಂದು ಸಿಪಿಐಎಂ ಆರೋಪಿಸಿದೆ.

ಸಮ್ಮೇಳನದಲ್ಲಿ ಜಿಲ್ಲೆಯಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಪಿಸಲು ಒತ್ತಾಯಿಸಿ, ಜಿಲ್ಲೆಯಲ್ಲಿ ಆನೆ ಹಾವಳಿ ತಡೆಗಟ್ಟಲು ಒತ್ತಾಯಿಸಿ, ಜಿಲ್ಲೆಯ ರಸ್ತೆಗಳನ್ನು ಉತ್ತಮ ಗುಣಮಟ್ಟದಲ್ಲಿ ನಿರ್ಮಸಲು ಒತ್ತಾಯಿಸಿ, ಶುದ್ಧ ಕುಡಿಯುವ ನೀರು ಹಾಗೂ ನೈರ್ಮಲ್ಯಕ್ಕಾಗಿ ಆಗ್ರಹಿಸಿ, ವಸತಿ, ಮನೆ ನಿವೇಶನಕ್ಕೆ ಆಗ್ರಹಿಸಿ, ಕೆರೆ ಸಂರಕ್ಷಿಸಿ ಪುನಶ್ಚೇತನಗೊಳಿಸು ಆಗ್ರಹಿಸಿ. ಕರಾಳ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಲು ಆಗ್ರಹಿಸಿ, ಕಾರ್ಮಿಕ ಕಾನೂನುಗಳ ಸಂಹಿತಿಕರಣ ವಿರೋಧಿಸಿ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ವಿರೋಧಿಸಿ ಮತ್ತಿತರೆ ಒಟ್ಟು 13 ನಿರ್ಣಯಗಳನ್ನು ಅಂಗೀಕರಿಸಲಾಯಿತು. ಈ ನಿರ್ಣಯಗಳ ಆಧಾರದಲ್ಲಿ ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಜನರನ್ನು ಸಂಘಟಿಸಿ ಚಳುವಳಿಯನ್ನು ರೂಪಿಸಲು ಸಮ್ಮೇಳನ ನಿರ್ಧರಿಸಿತು.

ಸಮ್ಮೇಳನದಲ್ಲಿ 9 ಜನರನ್ನೊಳಗೊಂಡ ಸಿಪಿಐಎಂನ ನೂತನ ಹಾಸನ ಜಿಲ್ಲಾ ಸಂಘಟನಾ ಸಮಿತಿಯನ್ನು ಆಯ್ಕೆಮಾಡಲಾಯಿತು. ನೂತನ ಸಮಿತಿಯ ಕಾರ್ಯದರ್ಶಿಯಾಗಿ ಧರ್ಮೇಶ್ ಪುನರ್ ಆಯ್ಕೆಯಾದರು.


ನೂತನ ಜಿಲ್ಲಾ ಸಂಘಟನಾ ಸಮಿತಿ



1. ಧರ್ಮೇಶ್ –ಕಾರ್ಯದರ್ಶಿ,

ಸದಸ್ಯರುಗಳು

2. ಜಿ.ಪಿ. ಸತ್ಯ ನಾರಾಯಣ, 3. ಶ್ರೀಧರ್, 4. ಎಚ್.ಆರ್. ನವೀನ್‌ಕುಮಾರ್, 5. ಪೃಥ್ವಿ ಎಂ.ಜಿ., 6. ಪುಟ್ಟಲಕ್ಷ್ಮಿ, 7. ಸೌಮ್ಯ, 8. ಅರವಿಂದ್, 9. ಮಂಜುನಾಥ್ ಖಾಯಂ ಆಹ್ವಾನಿತರಾಗಿ ವಿ. ಸುಕುಮಾರ್ ಮತ್ತು ವಿಶೇಷ ಆಹ್ವಾನಿತರಾಗಿ ಮಹಮದ್ ರವರುನ್ನು ಆಯ್ಕೆಮಾಡಲಾಯಿತು.



2021ರಲ್ಲಿ ಗಾಂಧೀಜಿ ಒಂದು ಹೊಸ ಅವತಾರದಲ್ಲಿ!

ಸಾವರ್ಕರ್‌ಗೆ ಕ್ಷಮಾಯಾಚನೆಯ ಅರ್ಜಿಗಳ ಸಲಹೆಗಾರರಾಗಿ!!



ಸಾವರ್ಕರ್ ಅವರ ರಾಷ್ಟ್ರೀಯವಾದಕ್ಕೆ ರುಜುವಾತುಗಳನ್ನು ಸೃಷ್ಟಿಸಲು ಮಹಾತ್ಮ ಗಾಂಧಿಯವರನ್ನು ಎಳೆದು ತರಲಾಗುತ್ತಿದೆ, ಅದೂ ಕೂಡ ಕ್ಷುಲ್ಲಕ ಆಧಾರದ ಮೇಲೆ! ಈಮೂಲಕ, ಗಾಂಧೀಜಿ ಮತ್ತು ಸಾವರ್ಕರ್ ನಿಕಟ ಸಂಬಂಧವನ್ನು ಹೊಂದಿದ್ದರು, ಎಷ್ಟು ನಿಕಟವೆಂದರೆ, ಕ್ಷಮಾಯಾಚನೆಯ ಅರ್ಜಿಯಂತಹ ಮಹತ್ವದ ವಿಷಯಗಳ ಬಗ್ಗೆ ಗಾಂಧೀಜಿಯವರ ಸಲಹೆಯನ್ನು ಪಡೆದರು ಮತ್ತು ಗಾಂಧೀಜಿ ಅವರ ಬಿಡುಗಡೆಗೆ ಮನವಿ ಮಾಡಿದರು ಎಂಬ ಒಂದು ಚಿತ್ರವನ್ನು ಸೃಷ್ಟಿಸುವ ಪ್ರಯತ್ನವಿದು. ಹಲವಾರು ಇತರ ರಾಷ್ಟ್ರೀಯವಾದಿಗಳು ಕ್ಷಮಾದಾನ ಕೇಳಲು ನಿರಾಕರಿಸುತ್ತಿದ್ದಾಗ ಮತ್ತು ಸ್ವತಃ ಗಾಂಧೀಜಿಯಂತೂ ತನಗೆ ತೀವ್ರತರವಾದ ಶಿಕ್ಷೆಯನ್ನು ನೀಡಬೇಕೆಂದು ಒತ್ತಾಯಿಸುತ್ತಿದ್ದಾಗ, ಸಾವರ್ಕರ್ ಕ್ಷಮೆಗಾಗಿ ಬೇಡುತ್ತಿದ್ದುದನ್ನು ಒಂದು ಸಾಮಾನ್ಯ ಸಂಗತಿ ಎಂದು ಬಿಂಬಿಸುವ ಸ್ಪಷ್ಟ ಪ್ರಯತ್ನ ಇದು ಎನ್ನುತ್ತಾರೆ ಈ ಮೂವರು ಇತಿಹಾಸಜ್ಞರು ಈ ಲೇಖನದಲ್ಲಿ.

ಮೃದುಲಾಮುಖರ್ಜಿ, ಆದಿತ್ಯ ಮುಖರ್ಜಿ ಮತ್ತು ಸುಚೇತಾ ಮಹಾಜನ್

ಅನುವಾದ: ಕೆ.ಆರ್.ಎಸ್.

ಭಾರತೀಯ ರಕ್ಷಣಾ ಸಚಿವ ಶ್ರೀ ರಾಜನಾಥ್ ಸಿಂಗ್ "ಸಾವರ್ಕರ್ ವಿರುದ್ಧ ಬಹಳಷ್ಟು ಸುಳ್ಳುಗಳನ್ನು ಹರಡಲಾಗಿದೆ "ಎಂದು ಹೇಳಿಕೊಂಡಿರುವುದಾಗಿ 13 ಅಕ್ಟೋಬರ್ 2021 ರ ಇಂಡಿಯನ್ ಎಕ್ಸ್‌ಪ್ರೆಸ್ ನಮಗೆ ಹೇಳುತ್ತದೆ, "ಅವರು ಬ್ರಿಟಿಷ್ ಸರ್ಕಾರದ ಮುಂದೆ ಅನೇಕ ಕ್ಷಮಾದಾನ ಅರ್ಜಿಗಳನ್ನು ಸಲ್ಲಿಸಿದರು ಎಂದು ಪದೇ ಪದೇ ಹೇಳಲಾಗಿದೆ. ಸತ್ಯವೆಂದರೆ ಆತ ತನ್ನ ಬಿಡುಗಡೆಗಾಗಿ ಈ ಅರ್ಜಿಗಳನ್ನು ಸಲ್ಲಿಸಲಿಲ್ಲ. ಸಾಮಾನ್ಯವಾಗಿ ಒಬ್ಬ ಖೈದಿಗೆ ಕ್ಷಮಾದಾನ ಅರ್ಜಿ ಸಲ್ಲಿಸುವ ಹಕ್ಕಿದೆ. ನೀವು ಕ್ಷಮಾದಾನ ಅರ್ಜಿ ಸಲ್ಲಿಸಿ ಎಂದು ಮಹಾತ್ಮ ಗಾಂಧಿ ಕೇಳಿದ್ದರು. ಗಾಂಧಿಯವರ ಸಲಹೆಯ ಮೇರೆಗೆ ಅವರು ಕ್ಷಮಾದಾನ ಅರ್ಜಿಯನ್ನು ಸಲ್ಲಿಸಿದರು. ಮತ್ತು ಸಾವರ್ಕರ್ ಜೀಯವರನ್ನು ಬಿಡುಗಡೆ ಮಾಡಬೇಕು ಎಂದು ಮಹಾತ್ಮ ಗಾಂಧಿ ಮನವಿ ಮಾಡಿದ್ದರು. ನಾವು ಸ್ವಾತಂತ್ರ್ಯಕ್ಕಾಗಿ ಚಳುವಳಿಯನ್ನು ಶಾಂತಿಯುತವಾಗಿ ನಡೆಸುತ್ತಿದ್ದೇವೆ ಹಾಗೆಯೇ ಸಾವರ್ಕರ್ ಕೂಡ ಎಂದು ಅವರು ಹೇಳಿದ್ದರು" ಎಂದೂ ಅದು ಹೇಳುತ್ತದೆ. "ನೀವು ಭಿನ್ನಾಭಿಪ್ರಾಯಗಳನ್ನು ಹೊಂದಬಹುದು, ಆದರೆ ಅವರನ್ನು ಹೀನಾಯವಾಗಿ ನೋಡುವುದು ಸರಿಯಲ್ಲ. ಅವರ ರಾಷ್ಟ್ರೀಯ ಕೊಡುಗೆಯನ್ನು ತುಚ್ಛವಾಗಿ ಕಾಣುವ ಕೃತ್ಯವನ್ನು ಸಹಿಸಲಾಗುವುದಿಲ್ಲ" ಎಂದು ಅವರು ಹೇಳಿದರಂತೆ (ಬೆದರಿಕೆಯನ್ನು ಗಮನಿಸಿ– ಗೋಡ್ಸೆ ದೇವಸ್ಥಾನಗಳನ್ನು ಸ್ಥಾಪಿಸುವುದು ಮತ್ತು ವ್ಯಕ್ತಿಪೂಜೆ ಮಾಡುವುದನ್ನು ಸಹಿಸಿಕೊಳ್ಳಬಹುದು ಆದರೆ ಸಾವರ್ಕರ್ ಅವರನ್ನು ಟೀಕಿಸುವುದನ್ನು ಸಹಿಸುವುದಿಲ್ಲ!)

ಸತ್ಯಸಂಗತಿಗಳು ಯಾವುವು?

ರಾಜನಾಥ್ ಸಿಂಗ್ ಅವರ ಹೇಳಿಕೆಯು ಬಹುಶಃ 1920 ರ ವರ್ಷಕ್ಕೆ ಸಂಬಂಧಿಸಿದ ದಾಖಲೆಗಳನ್ನು ಆಧರಿಸಿದೆ: ಗಾಂಧೀಜಿಯವರಿಗೆ ವಿ ಡಿ ಸಾವರ್ಕರ್ ಮತ್ತು ಗಣೇಶ್ ಸಾವರ್ಕರ್ ಅವರ ಸಹೋದರ ಎನ್ ಡಿ ಸಾವರ್ಕರ್ ಬರೆದ ಪತ್ರ, ಗಾಂಧೀಜಿಯವರ ಉತ್ತರ ಮತ್ತು ಗಾಂಧೀಜಿಯವರ 'ಯಂಗ್ ಇಂಡಿಯಾ'ದಲ್ಲಿನ ಒಂದು ಲೇಖನ.

ವಾಸ್ತವಾಂಶಗಳು ರಾಜನಾಥ್ ಸಿಂಗ್ ಹೇಳಿಕೊಂಡಿರುವುದಕ್ಕಿಂತ ಸ್ವಲ್ಪಮಟ್ಟಿಗೆ ಭಿನ್ನವಾಗಿವೆ. ಮೊದಲ ಕ್ಷಮಾದಾನ ಅರ್ಜಿಯನ್ನು ಒಂಭತ್ತು ವರ್ಷಗಳ ಹಿಂದೆಯೇ ವಿನಾಯಕ ದಾಮೋದರ್ ಸಾವರ್ಕರ್ 1911 ರಲ್ಲಿ ಸಲ್ಲಿಸಿದರು, ಅವರು ಶಿಕ್ಷೆಗೊಳಗಾದ ಆರು ತಿಂಗಳೊಳಗೆ, ಮತ್ತು ನಂತರದ ವರ್ಷಗಳಲ್ಲಿ ಇತರ ಹಲವು ಅರ್ಜಿಗಳನ್ನು ಸಲ್ಲಿಸಿದರು, ಇವನ್ನೆಲ್ಲ ಗಾಂಧೀಜಿಯ ಸಲಹೆಯ ಮೇರೆಗೆ ಸಲ್ಲಿಸಲಾಯಿತು ಎಂಬುದಕ್ಕೆಯಾವುದೇ ಪುರಾವೆಗಳು ಅಥವಾ ದಾವೆಗಳಿಲ್ಲ! ಗೃಹ ಇಲಾಖೆ ಸದಸ್ಯ ಸರ್ ರೆಜಿನಾಲ್ಡ್ ಕ್ರಾಡಾಕ್ ಅವರು 1913 ರಲ್ಲಿ ಅಂಡಮಾನ್ ಜೈಲಿಗೆ ಭೇಟಿ ನೀಡಿದಾಗ, ತನ್ನ ಬಿಡುಗಡೆಗಾಗಿ ಅವರಿಗೆ ವೈಯಕ್ತಿಕವಾಗಿ ಸಲ್ಲಿಸಿದ ಇಂತಹ ಒಂದು ಅರ್ಜಿಯಿಂದ ಉಲ್ಲೇಖಿಸುವುದಾದರೆ, ಅದರಲ್ಲಿ ತಾನು ಬ್ರಿಟಿಷ್ ಸರ್ಕಾರಕ್ಕೆ ನಿಷ್ಠರಾಗಿರುವುದಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದರು. ಆ ಅರ್ಜಿಯ ಒಂದು ಉಲ್ಲೇಖವನ್ನು ಹೀಗಿದೆ:

> "ಸರ್ಕಾರವು ತನ್ನ ಬಹುವಿಧ ಉಪಕಾರಬುದ್ಧಿ ಮತ್ತು ಕರುಣೆಯಿಂದ ನನ್ನನ್ನು ಬಿಡುಗಡೆ ಮಾಡಿದರೆ, ನಾನು ಸಂವಿಧಾನಾತ್ಮಕ ಪ್ರಗತಿಯ, ಮತ್ತು ಎಲ್ಲಕ್ಕೂ ಹೆಚ್ಚಾಗಿ ಆ ಪ್ರಗತಿಗೆ ಅಗತ್ಯವಾದ ಇಂಗ್ಲೀಷ್ ಸರ್ಕಾರಕ್ಕೆ ನಿಷ್ಠೆಯ ಪ್ರಬಲ ಪ್ರತಿಪಾದಕನಾಗಿರುವುದಲ್ಲದೆ ಬೇರೇನೂ ಆಗಿರಲಾರೆ. ಸರಕಾರ ಇಷ್ಟಪಡುವ ಯಾವುದೇ ಸ್ಥಾನದಲ್ಲಿ ನಾನು ಸರ್ಕಾರಕ್ಕೆ ಸೇವೆ ಸಲ್ಲಿಸಲು ಸಿದ್ಧನಿದ್ದೇನೆ, ಏಕೆಂದರೆ ನನ್ನ ಪರಿವರ್ತನೆಯು ಅಂತಃಕರಣಪೂರ್ವಕ ವಾಗಿರುವುದರಿಂದ ನನ್ನ ಮುಂದಿನ ನಡವಳಿಕೆಯು ಹಾಗೆಯೇ ಇರುತ್ತದೆ ಎಂದು ನಾನು ಆಶಿಸುತ್ತೇನೆ. ಶಕ್ತಿಶಾಲಿಯು ಮಾತ್ರವೇ ಕರುಣಾಮಯಿಯಾಗಲು ಸಾಧ್ಯ, ಆದ್ದರಿಂದಲೇ ದುಂದುಗಾರ ಮಗ ಸರ್ಕಾರದ ಪೋಷಕ ಬಾಗಿಲಿಗಲ್ಲದೆ ಬೇರೆಲ್ಲಿಗೆ ಮರಳಿ ಬರಲು ಸಾಧ್ಯ?"

ಮುಂದೆ, ಜಿಎಸ್ ಖೋಪಾರ್ಡೆ ಅವರ ಸಾಕ್ಷ್ಯದಂತೆ, ಮಾರ್ಚ್ 22, 1920 ರಂದು ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಒಬ್ಬ ಸಾವರ್ಕರ್ ಬೆಂಬಲಿಗರು ಈ ಪ್ರಶ್ನೆ ಕೇಳಿದ್ದರು:"ಶ್ರೀ ಸಾವರ್ಕರ್ ಮತ್ತು ಅವರ ಸಹೋದರ 1915 ರಲ್ಲಿ ಒಮ್ಮೆ ಮತ್ತು ಇನ್ನೊಂದು ಸಮಯದಲ್ಲಿ 1918 ರಲ್ಲಿ, ಬಿಡುಗಡೆಯಾದರೆ, ಯುದ್ಧದ ಮುಂದುವರಿಕೆಯ ಸಮಯದಲ್ಲಿ ಸೇನೆಯಲ್ಲಿ ಸೇರಿಕೊಂಡು ಸಾಮ್ರಾಜ್ಯಕ್ಕೆ ಸೇವೆ ಸಲ್ಲಿಸುವುದಾಗಿ ಮತ್ತು ಸುಧಾರಣಾ ಮಸೂದೆಯನ್ನು ಅಂಗೀಕರಿಸಿದ ನಂತರ, ಕಾಯಿದೆಯನ್ನು ಯಶಸ್ವಿಯಾಗಿ ಮಾಡಲು ಪ್ರಯುತ್ನಿಸುವುದಾಗಿ ಮತ್ತು ಕಾನೂನು ಮತ್ತು ಸುವ್ಯವಸ್ಥೆಗೆ ಬದ್ಧರಾಗಿರುವುದಾಗಿ ಹೇಳುವ ಅರ್ಜಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದರು." ಹೋಂ ಮೆಂಬರ್ ಸರ್ ವಿಲಿಯಂ ವಿನ್ಸೆಂಟ್ ತಮ್ಮ ಉತ್ತರದಲ್ಲಿ: "ವಿನಾಯಕ ದಾಮೋದರ್ ಸಾವರ್ಕರ್ ಅವರಿಂದ ಎರಡು ಅರ್ಜಿಗಳನ್ನು – ಒಂದು 1914 ರಲ್ಲಿ ಮತ್ತು ಇನ್ನೊಂದು 1917 ರಲ್ಲಿ, ಅಧೀಕ್ಷಕ, ಪೋರ್ಟ್ ಬ್ಲೇರ್, ಮೂಲಕ ಸ್ವೀಕರಿಸಲಾಗಿದೆ. ಮೊದಲಿನದರಲ್ಲಿ ಅವರು ಯುದ್ಧದ ಸಮಯದಲ್ಲಿ ಯಾವುದೇ ಸ್ಥಾನದಲ್ಲಿ ಸರ್ಕಾರಕ್ಕೆ ತನ್ನ ಸೇವೆಗಳನ್ನು ಸಲ್ಲಿಸುವುದಾಗಿ ಹೇಳಿದ್ದರು ಮತ್ತು ಮತ್ತು ಎಲ್ಲಾ ರಾಜಕೀಯ ಕೈದಿಗಳಿಗೆ ಒಂದು ಸಾರ್ವತ್ರಿಕ ಕ್ಷಮಾದಾನವನ್ನು ನೀಡಬೇಕೆಂದು ಪ್ರಾರ್ಥಿಸಿದರು. ಎರಡನೆಯ ಅರ್ಜಿಯು ನಂತರದ ಪ್ರಸ್ತಾವನೆಗೆ ಸೀಮಿತವಾಗಿತ್ತು." ಎಂದು ದೃಢಪಡಿಸಿದರು.

ಹೀಗಾಗಿ, ಸಾವರ್ಕರ್ 1911 ಮತ್ತು 1920 ರ ನಡುವೆ ಗಾಂಧಿಯ ಯಾವುದೇ ಸಲಹೆ ಅಥವಾ ಪ್ರೇರಣೆಯಿಲ್ಲದೆಯೇ ಹಲವಾರು ಅರ್ಜಿಗಳನ್ನು ಸಲ್ಲಿಸಿದ್ದರು ಎಂಬುದು ಸ್ಪಷ್ಟವಾಗಿದೆ. ಅವುಗಳಲ್ಲಿ ಬ್ರಿಟಿಷ್ ಸರ್ಕಾರಕ್ಕೆ ನಿಷ್ಠೆಯನ್ನು ಮತ್ತು ಯಾವುದೇ ಸ್ಥಾನದಿಂದ ಅದಕ್ಕೆ ಸೇವೆ ಸಲ್ಲಿಸಲು ತಾನು ಸಿದ್ಧ ಎಂಬ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಆದ್ದರಿಂದ ಸಾವರ್ಕರ್ ಕ್ಷಮಾದಾನ ಅರ್ಜಿಗಳನ್ನು ಸಲ್ಲಿಸಲಿಲ್ಲ, ಆದರೆ ಮಹಾತ್ಮರ ಸಲಹೆಯ ಮೇರೆಗೆ ಮಾತ್ರ ಸಲ್ಲಿಸಿದರು ಎಂಬ ರಕ್ಷಣಾ ಸಚಿವರ ಹೇಳಿಕೆಯು ನಿಜವಾದ ಐತಿಹಾಸಿಕ ದಾಖಲೆಯಿಂದ ದೃಢಪಟ್ಟಿಲ್ಲ.

ಹಾಗಾದರೆ ಗಾಂಧೀಜಿ ಈ ಕಥೆಯಲ್ಲಿ ಎಲ್ಲಿ ಬರುತ್ತಾರೆ?

1920 ರಲ್ಲಿ, ಬ್ರಿಟಿಷ್ ರಾಯಲ್ ಘೋಷಣೆಯ ಅಡಿಯಲ್ಲಿ ಬಿಡುಗಡೆಯಾಗಲಿದ್ದ ಕೈದಿಗಳ ಪಟ್ಟಿಯಲ್ಲಿ ಜೈಲಿನಲ್ಲಿದ್ದ ತನ್ನ ಇಬ್ಬರು ಸಹೋದರರ ಹೆಸರುಗಳು ಒಳಗೊಂಡಿಲ್ಲ ಎಂದು ಈ ಸಾವರ್ಕರ್ ಸಹೋದರರ ಕಿರಿಯ ಸಹೋದರ ಎನ್ ಡಿ ಸಾವರ್ಕರ್ ಗೆ ಕಂಡು ಬಂದಾಗ ಅವರು ಗಾಂಧೀಜಿಗೆ ಸಲಹೆ ಕೇಳಿದಾಗಲಷ್ಟೇ ಈ ಕಥೆಯಲ್ಲಿ ಬರುತ್ತಾರೆ. ಗಾಂಧೀಜಿಯವರು ಸಲಹೆ ನೀಡುವುದು ಕಷ್ಟ ಎಂದು ಉತ್ತರಿಸಿದರು, ಆದರೆ ಅವರು ಒಂದು ಸಂಕ್ಷಿಪ್ತ ಅರ್ಜಿಯ ಕರಡನ್ನು ರಚಿಸಬಹುದು ಎಂದು ಸೂಚನೆನೀಡಿದರು. ಇದರ ಜೊತೆಯಲ್ಲಿ, ಅವರು 26 ಮೇ 1920 ರಂದು 'ಯಂಗ್ ಇಂಡಿಯಾ'ದಲ್ಲಿ 'ಸಾವರ್ಕರ್ ಬ್ರದರ್ಸ್' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಲೇಖನವನ್ನು ಬರೆದರು, ಅಲ್ಲಿ ಅವರು ರಾಜಘೋಷಣೆಯನ್ನು ಉಲ್ಲೇಖಿಸುತ್ತಾರೆ ಮತ್ತು ಇತರ ಅನೇಕ ರಾಜಕೀಯ ಕೈದಿಗಳನ್ನು ಇದರ ಅಡಿಯಲ್ಲಿ ಬಿಡುಗಡೆ ಮಾಡಲಾಗಿದ್ದರೂ ಸಾವರ್ಕರ್

ಪುಟ 10–11 ನೋಡಿ

ಯಾರಾದರೂ ಇವರ ಸ್ಪಷ್ಟೀಕರಣ ಕೇಳಲು ಬಂದುಬಿಡುವ ಮೊದಲು **ಸಾಗಿಸಿ ಬಿಡಿ!!**




ಸಾವರ್ಕರ್ 1911 ಮತ್ತು 1920 ರ ನಡುವೆ ಗಾಂಧಿಯ ಯಾವುದೇ ಸಲಹೆ ಅಥವಾ ಪ್ರೇರಣೆಯಿಲ್ಲದೆಯೇ ಹಲವಾರು ಅರ್ಜಿಗಳನ್ನು ಸಲ್ಲಿಸಿದ್ದರು ಎಂಬುದು ಸ್ಪಷ್ಟವಾಗಿದೆ. ಅವುಗಳಲ್ಲಿ ಬ್ರಿಟಿಷ್ ಸರ್ಕಾರಕ್ಕೆ ನಿಷ್ಠೆಯನ್ನು ಮತ್ತು ಯಾವುದೇ ಸ್ಥಾನದಿಂದ ಅದಕ್ಕೆ ಸೇವೆ ಸಲ್ಲಿಸಲು ತಾನು ಸಿದ್ಧ ಎಂಬ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಆದ್ದರಿಂದ ಸಾವರ್ಕರ್ ಕ್ಷಮಾದಾನ ಅರ್ಜಿಗಳನ್ನು ಸಲ್ಲಿಸಲಿಲ್ಲ, ಆದರೆ ಮಹಾತ್ಮರ ಸಲಹೆಯ ಮೇರೆಗೆ ಮಾತ್ರ ಸಲ್ಲಿಸಿದರು ಎಂಬ ರಕ್ಷಣಾ ಸಚಿವರ ಹೇಳಿಕೆಯು ನಿಜವಾದ ಐತಿಹಾಸಿಕ ದಾಖಲೆಯಿಂದ ದೃಢಪಟ್ಟಿಲ್ಲ.

ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್ ಡೆಕ್ಕನ್ ಹೆರಾಲ್ಡ್

ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

1947 ಒಂದು ಭಿಕ್ಷೆಯಾಗಿತ್ತು ಎನ್ನುತ್ತಾರೆ "ಪದ್ಮಶ್ರೀ" ಕಂಗನಾ





ಗಾಂಧೀಜಿ ಒಂದು ಹೊಸ ಅವತಾರದಲ್ಲಿ!

ಪುಟ 9 ರಿಂದ

ಸಹೋದರರನ್ನು ಬಿಡುಗಡೆ ಮಾಡಲಾಗಿಲ್ಲ ಎಂದು ಬರೆಯುತ್ತಾರೆ.

ಅವರು ಹೇಳುತ್ತಾರೆ "ಇಬ್ಬರೂ ಸಹೋದರರು ತಮ್ಮ ರಾಜಕೀಯ ಅಭಿಪ್ರಾಯಗಳನ್ನು ಘೋಷಿಸಿದ್ದಾರೆ, ಇಬ್ಬರೂ ತಾವು ಯಾವುದೇ ಕ್ರಾಂತಿಕಾರಿ ವಿಚಾರಗಳನ್ನು ಹೊಂದಿಲ್ಲ ಎಂದು ಹೇಳಿದ್ದಾರೆ ಮತ್ತು ತಾವು ಬಿಡುಗಡೆಗೊಂಡರೆ ಸುಧಾರಣಾ ಕಾಯಿದೆಯ ಅಡಿಯಲ್ಲಿ ಕೆಲಸ ಮಾಡಲು ಬಯಸುತ್ತಾರೆ..." (ಭಾರತ ಸರ್ಕಾರ ಕಾಯಿದೆ, 1919) " ಬ್ರಿಟಿಷ್ ಸಂಬಂಧದಿಂದ ಸ್ವಾತಂತ್ರ್ಯವನ್ನು ಬಯಸುವುದಿಲ್ಲ ಎಂದು ಇಬ್ಬರೂ ನಿಸ್ಸಂದಿಗ್ಧವಾಗಿ ಹೇಳುತ್ತಾರೆ. ತದ್ವಿರುದ್ಧವಾಗಿ, ಅವರು ಭಾರತದ ಹಣೆಬರಹವನ್ನು ಬ್ರಿಟಿಷರ ಸಹಯೋಗದಲ್ಲಿಯೇ ಉತ್ತಮವಾಗಿ ರೂಪಿಸಬಹುದು ಎಂದು ಭಾವಿಸುತ್ತಾರೆ."

ಗಮನಿಸಬೇಕಾದ ಸಂಗತಿಯೆಂದರೆ, ಗಾಂಧೀಜಿಯವರ ಲೇಖನದಲ್ಲಿ ಎಲ್ಲಿಯೂ ರಕ್ಷಣಾ ಸಚಿವರು "ಸಾವರ್ಕರ್‌ಜೀಯವರನ್ನು ಬಿಡುಗಡೆ ಮಾಡಬೇಕು ಎಂದು ಮಹಾತ್ಮ ಗಾಂಧಿ ಮನವಿ ಮಾಡಿದರು" ಎಂದು ಹೇಳಿರುವಂತೆ ಸಾವರ್ಕರ್ ಬಿಡುಗಡೆಗೆ ಮನವಿಯೇನೂ ಇಲ್ಲ . ಅವರು "ಸಾರ್ವಜನಿಕ ಸುರಕ್ಷತೆ"ಗೆ ಯಾವುದೇ ಅಪಾಯ ಒಡ್ಡುವಂತಾಗಲೀ ಅಥವಾ "ಪ್ರಭುತ್ವಕ್ಕೆ ಅಪಾಯ" ಒಡ್ಡುವಂತಾಗಲೀ ಕಾಣುತ್ತಿಲ್ಲವಾದ್ದರಿಂದ ಅವರನ್ನು ಬಿಡುಗಡೆ ಮಾಡದಿರುವ ಸರ್ಕಾರದ ನಿರ್ಧಾರವನ್ನು ಗಾಂಧೀಜಿ ಪ್ರಶ್ನಿಸುತ್ತಾರೆ, ಆದರೆ ಬ್ರಿಟಿಷರಿಗೆ ಮನವಿ ಮಾಡುವುದಿಲ್ಲ. ಅಥವಾ ಗಾಂಧೀಜಿಯವರು ತಮ್ಮ ಲೇಖನದಲ್ಲಿ ಎಲ್ಲಿಯೂ, ರಕ್ಷಣಾ ಸಚಿವರು ಹೇಳುವಂತೆ, "ನಾವು ಸ್ವಾತಂತ್ರ್ಯಕ್ಕಾಗಿ ಚಳುವಳಿಯನ್ನು ಶಾಂತಿಯುತವಾಗಿ ನಡೆಸುತ್ತಿದ್ದೇವೆ, ಹಾಗೆಯೇ ಸಾವರ್ಕರ್ ಕೂಡ." ಎಂದು ಹೇಳಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಗಾಂಧೀಜಿಯವರು ಸಾವರ್ಕರ್ ಸಹೋದರರು ಸ್ವಾತಂತ್ರ್ಯವನ್ನು ಬಯಸುವುದಿಲ್ಲ ಮತ್ತು ಸುಧಾರಣಾ ಕಾಯಿದೆಯ ಅಡಿಯಲ್ಲಿ ಕೆಲಸ ಮಾಡಲು ಬಯಸುತ್ತಾರೆ ಎಂಬುದನ್ನು ಒತ್ತಿಹೇಳುತ್ತಾರೆ.

ಈ ಇಡೀ ಪ್ರಸಂಗದಲ್ಲಿ ವಿಚಿತ್ರವಾದ ವ್ಯಂಗ್ಯವಿದೆ. ಸಾವರ್ಕರ್ ಅವರ ರಾಷ್ಟ್ರೀಯತಾವಾದಕ್ಕೆ ರುಜುವಾತುಗಳನ್ನು ಸ್ಥಾಪಿಸಲು ಮಹಾತ್ಮಾ ಗಾಂಧೀಜಿಯವರನ್ನು ಎಳೆ ತರಲಾಗುತ್ತಿದೆ, ಅದೂ ಕೂಡ ಇಂತಹ ಕ್ಷುಲ್ಲಕ ಆಧಾರದ ಮೇಲೆ! ಈಮೂಲಕ, ಗಾಂಧೀಜಿ ಮತ್ತು ಸಾವರ್ಕರ್ ನಿಕಟ ಸಂಬಂಧವನ್ನು ಹೊಂದಿದ್ದರು, ಎಷ್ಟು ನಿಕಟವೆಂದರೆ, ಕ್ಷಮಾದಾನದ ಅರ್ಜಿಯಂತಹ ಮಹತ್ವದ ವಿಷಯಗಳ ಬಗ್ಗೆ ಗಾಂಧೀಜಿಯವರ ಸಲಹೆಯನ್ನು ಪಡೆದರು ಮತ್ತು ಗಾಂಧೀಜಿ ಅವರ ಬಿಡುಗಡೆಗೆ ಮನವಿ ಮಾಡಿದರು ಎಂಬ ಒಂದು ಚಿತ್ರವನ್ನು ಸಾರ್ವಜನಿಕ ಮನಸ್ಸಿನಲ್ಲಿ ಸೃಷ್ಟಿಸುವ ಪ್ರಯತ್ನವಿದು ಹಲವಾರು ಇತರ ರಾಷ್ಟ್ರೀಯವಾದಿಗಳು ಕ್ಷಮಾದಾನ ಕೇಳಲು ನಿರಾಕರಿಸುತ್ತಿದ್ದಾಗ ಮತ್ತು ಗಾಂಧೀಜಿಯಂತೂ ತನಗೆ ತೀವ್ರತರವಾದ ಶಿಕ್ಷೆಯನ್ನು ನೀಡಬೇಕೆಂದು ಒತ್ತಾಯಿಸುತ್ತಿದ್ದಾಗ, ಸಾವರ್ಕರ್ ಕ್ಷಮೆಗಾಗಿ ಬೇಡುತ್ತಿದ್ದುದನ್ನು ಒಂದು ಸಾಮಾನ್ಯ ಸಂಗತಿ ಎಂದು ಬಿಂಬಿಸುವ ಸ್ಪಷ್ಟ ಪ್ರಯತ್ನವಾಗಿದೆ.

> ಗಾಂಧೀಜಿಯವರು ತಮ್ಮ ಲೇಖನದಲ್ಲಿ ಎಲ್ಲಿಯೂ, ರಕ್ಷಣಾ ಸಚಿವರು ಹೇಳುವಂತೆ, "ನಾವು ಸ್ವಾತಂತ್ರ್ಯಕ್ಕಾಗಿ ಚಳುವಳಿಯನ್ನು ಶಾಂತಿಯುತವಾಗಿ ನಡೆಸುತ್ತಿದ್ದೇವೆ, ಹಾಗೆಯೇ ಸಾವರ್ಕರ್ ಕೂಡ." ಎಂದು ಹೇಳಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಗಾಂಧೀಜಿಯವರು ಸಾವರ್ಕರ್ ಸಹೋದರರು ಸ್ವಾತಂತ್ರ್ಯವನ್ನು ಬಯಸುವುದಿಲ್ಲ ಮತ್ತು ಸುಧಾರಣಾ ಕಾಯಿದೆಯ ಅಡಿಯಲ್ಲಿ ಕೆಲಸ ಮಾಡಲು ಬಯಸುತ್ತಾರೆ ಎಂಬುದನ್ನು ಒತ್ತಿಹೇಳುತ್ತಾರೆ.

ನಾವು ಮರೆಯಬೇಕೆಂದು ನಿರೀಕ್ಷಿಸುವ ಸಂಗತಿಗಳು ಯಾವುವು?

ಜನವರಿ 1948 ರಲ್ಲಿ, ಗಾಂಧಿ ಹತ್ಯೆಯಾದಾಗ, ಸಾವರ್ಕರ್ ಅವರನ್ನು ಪಿತೂರಿಯ ಹಿಂದಿನ ಮಹಾನಿಯೋಜಕ ಎಂದು ಶಂಕಿಸಲಾಗಿದ್ದರಿಂದ ಬಂಧಿಸಲಾಯಿತು. ಸರ್ದಾರ್ ಪಟೇಲ್, ಗೃಹ ಸಚಿವರಾಗಿ, ಇಡೀ ಪ್ರಕರಣದ ಮೇಲ್ವಿಚಾರಣೆ ಮಾಡುತ್ತಿದ್ದರು, ಉತ್ತಮ ಕ್ರಿಮಿನಲ್ ವಕೀಲರಾಗಿದ್ದ ಅವರಿಗೆ, ಸಾವರ್ಕರ್ ಅವರ ತಪ್ಪು ವೈಯಕ್ತಿಕವಾಗಿ ಮನವರಿಕೆ ಆಗಿತ್ತು, ಇಲ್ಲದಿದ್ದರೆ ಅವರನ್ನು ವಿಚಾರಣೆಗೆ ಒಳಪಡಿಸಲು ಒಪ್ಪುತ್ತಿರಲಿಲ್ಲ. ಅವರು ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅವರಿಗೆ ನಿಸ್ಸಂದಿಗ್ಧವಾಗಿ ಹೇಳಿದರು, 'ಇದು ನೇರವಾಗಿ ಹಿಂದೂ ಮಹಾಸಭಾದ ಮತಾಂಧ ವಿಭಾಗವಾಗಿದ್ದು, ಸಾವರ್ಕರ್ ನೇತೃತ್ವದಲ್ಲಿ ಪಿತೂರಿಯನ್ನು [ಮಾಡಿತು] ಮತ್ತು ಅದನ್ನು ಸಾಧಿಸಿತು. (ದುರ್ಗಾ ದಾಸ್, ಸರ್ದಾರ್ ಪಟೇಲ್ ಪತ್ರವ್ಯವಹಾರ, 1945–50, ಸಂಪುಟ ೧೫, ಪುಟ 56.)

ಹಿಂದೂ ಮಹಾಸಭಾ ತನ್ನ ಪಾತ್ರವೇನೂ ಇಲ್ಲ ಎಂದುದಕ್ಕೆ ಪ್ರತಿಕ್ರಿಯೆಯಾಗಿ, ಪಟೇಲರು 6 ಮೇ 1948 ರಂದು ಹಿಂದೂ ಮಹಾಸಭಾ ನಾಯಕರಾದ ಶ್ಯಾಮಪ್ರಸಾದ್ ಮುಖರ್ಜಿ ಅವರಿಗೆ ಹೀಗೆ ಪತ್ರ ಬರೆದರು:

> "... ಮಹಾಸಭಾದ ಸದಸ್ಯರ ಒಂದು ಗಮನಾರ್ಹ ಸಂಖ್ಯೆಯ ಜನರು ದುರಂತದ ಬಗ್ಗೆ ಸಂತೋಷಪಟ್ಟರು ಮತ್ತು ಸಿಹಿತಿಂಡಿಗಳನ್ನು ಹಂಚಿದರು ಎಂಬ ಅಂಶಕ್ಕೆ ನಾವು ಕಣ್ಣು ಮುಚ್ಚಿಕೊಳ್ಳಲು ಸಾಧ್ಯವಿಲ್ಲ. ಮಹಂತ್ ದಿಗ್ವಿಜಯ್ ನಾಥ್, ಪ್ರೊ.ರಾಮ್ ಸಿಂಗ್ ಮತ್ತು ದೇಶಪಾಂಡೆ ಸೇರಿದಂತೆ ಮಹಾಸಭಾದ ಹಲವು ವಕ್ತಾರರು ಕೆಲವೇ ತಿಂಗಳುಗಳ ಹಿಂದೆ ಬೋಧಿಸುತ್ತಿದ್ದ ಉಗ್ರಗಾಮಿ ಕೋಮುವಾದ ಸಾರ್ವಜನಿಕ ಭದ್ರತೆಗೆ ಅಪಾಯ ಎಂದಲ್ಲದೆ ಬೇರೆ ರೀತಿಯಲ್ಲಿ ಪರಿಗಣಿಸಲು ಆಗಲಿಲ್ಲ. ಆರ್.ಎಸ್.ಎಸ್. ಗೆ ಕೂಡ ಇದು ಅನ್ವಯಿಸುತ್ತದೆ, ಜತೆಗೆ ಮಿಲಿಟರಿ ಅಥವಾ ಅರೆ ಸೇನಾ ಮಾರ್ಗದಲ್ಲಿ ರಹಸ್ಯವಾಗಿ ನಡೆಸಲ್ಪಡುವ ಸಂಸ್ಥೆಯಲ್ಲಿ ಹೆಚ್ಚುವರಿ ಅಪಾಯ ಅಂತರ್ಗತವಾಗಿರುತ್ತದೆ." (ಸರ್ದಾರ್ ಪಟೇಲ್ ಕರೆಸ್ಪಾಂಡೆನ್ಸ್, ಸಂಪುಟ 6,ಪುಟ 66.)

ಮುಂದೆ, ಪಟೇಲರು ಶ್ಯಾಮಪ್ರಸಾದ್ ಮುಖರ್ಜಿಗೆ 'ಆರ್‌ಎಸ್‌ಎಸ್‌ನ ಚಟುವಟಿಕೆಗಳು ಸರ್ಕಾರ ಮತ್ತು ಪ್ರಭುತ್ವದ ಅಸ್ತಿತ್ವಕ್ಕೆ ಸ್ಪಷ್ಟವಾದ ಅಪಾಯವನ್ನುಂಟುಮಾಡಿದೆ" ಎಂದು ಬೊಟ್ಟುಮಾಡು ಹೇಳಿದರು (18 ಜುಲೈ 1948, ಸರ್ದಾರ್ ಪಟೇಲ್ ಕರೆಸ್ಪಾಂಡೆನ್ಸ್, ಸಂಪುಟ 6, ಪುಟ 323.)

ಮುಂಬೈಯ ಮುಖ್ಯಮಂತ್ರಿ, ಬಿ.ಜಿ. ಖೇರ್, ಮಹಾರಾಷ್ಟ್ರದ ರಾಜಕೀಯ ಪರಿಸ್ಥಿತಿಯನ್ನು ಪಟೇಲ್‌ಗೆ ಹೀಗೆಂದು ವಿವರಿಸಿದರು: 'ಹಿಂದೂ ಮಹಾಸಭಾವು ಕಾಂಗ್ರೆಸ್ ಮತ್ತು ಮಹಾತ್ಮರ ವಿರುದ್ಧ ದ್ವೇಷದ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸಿತು, ಅದು ಕೆಲವು ಮಹಾರಾಷ್ಟ್ರೀಯರ ಕೈಯಲ್ಲಿ ಮಹಾತ್ಮ ಗಾಂಧಿಯವರ ಹತ್ಯೆಯಲ್ಲಿ ಕೊನೆಗೊಂಡಿತು'. {ಬಿ.ಜಿ. ಖೇರ್ ಟು ಪಟೇಲ್, 26 ಮೇ 1948, ಅದೇ., ಸಂಪುಟ. ೧೫, ಪುಟಗಳು 77–78.)

ಕ್ರಿಮಿನಲ್ ಕಾನೂನಿನ ಒಂದು ತಾಂತ್ರಿಕ ಅಂಶದಿಂದಾಗಿ ಸಾವರ್ಕರ್ ಅಂತಿಮವಾಗಿ ಗಾಂಧಿ ಕೊಲೆ ವಿಚಾರಣೆಯಲ್ಲಿ ಶಿಕ್ಷೆಗೊಳಗಾಗಲಿಲ್ಲ: ಅದೆಂದರೆ, ಮಾಫಿ ಸಾಕ್ಷೀದಾರ(ಅಪ್ರೂವರ್)ನ ಸಾಕ್ಷ್ಯವನ್ನು ದೃಢಿಕರಿಸಲು ಸ್ವತಂತ್ರ ಸಾಕ್ಷ್ಯಾಧಾರಗಳ ಕೊರತೆ.

ಆದಾಗ್ಯೂ, ಭಾರತದ ಸರ್ವೋಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರಾದ ನ್ಯಾಯಮೂರ್ತಿ ಜೀವನ್ ಲಾಲ್ ಕಪೂರ್ ಅವರ ಅಡಿಯಲ್ಲಿ 1965 ರಲ್ಲಿ ಸ್ಥಾಪಿಸಲಾದ ವಿಚಾರಣಾ ಆಯೋಗವು ವಿಚಾರಣಾ ನ್ಯಾಯಾಧೀಶರಿಗೆ ಲಭ್ಯವಿಲ್ಲದ ಸಾಕಷ್ಟು ಪುರಾವೆಗಳನ್ನು ಕಲೆ ಹಾಕಿತು. ವಿಚಾರಣೆಯಲ್ಲಿ ಸಾಕ್ಷಿ ಹೇಳದ, ಸಾವರ್ಕರ್ ಅವರ ಇಬ್ಬರು ನಿಕಟವರ್ತಿಗಳಾದ ಎ ಪಿ ಕಸರ್ ಮತ್ತು ಜಿ.ವಿ. ದಾಮ್ಲೆ ಆ ವೇಳೆಗೆ ಸಾವರ್ಕರ್ ನಿಧನರಾಗಿದ್ದರಿಂದ ಕಪೂರ್ ಕಮಿಷನ್ ಮುಂದೆ ಮಾತನಾಡಿದ್ದು, ಮಾಫಿ ಸಾಕ್ಷೀದಾರರ ಹೇಳಿಕೆಗಳನ್ನು ದೃಢಪಡಿಸಿದರು. ಒಂದು ವೇಳೆ ಅವರು ವಿಚಾರಣೆಯಲ್ಲಿ ಸಾಕ್ಷಿ ಹೇಳಿದ್ದರೆ ಸಾವರ್ಕರ್ ಅಪರಾಧಿ ಎಂದು ಸಾಬೀತಾಗುವ ಸಾಧ್ಯತೆ ಇತು. ವಾಸ್ತವವಾಗಿ, ಕಪೂರ್ ಆಯೋಗವು ಸರ್ದಾರ್ ಪಟೇಲ್ ಅವರಂತೆಯೇ ಒಂದು ತೀರ್ಮಾನಕ್ಕೆ ಬಂದಿತು: 'ಈ ಎಲ್ಲಾ ಸಂಗತಿಗಳನ್ನು ಒಟ್ಟಾಗಿ ತೆಗೆದುಕೊಂಡರೆ ಸಾವರ್ಕರ್ ಮತ್ತು ಅವರ ಗುಂಪಿನ ಕೊಲೆ ಪಿತೂರಿಯನ್ನು ಹೊರತುಪಡಿಸಿ ಬೇರೆ ಯಾವುದೇ ಸಿದ್ಧಾಂತವನ್ನು ಧ್ವಂಸ ಮಾಡುತ್ತದೆ' (ಮಹಾತ್ಮ ಗಾಂಧಿಯವರ ಕೊಲೆಗೆ ಪಿತೂರಿಯ ವಿಚಾರಣೆಯ ಆಯೋಗದ ವರದಿ, 1970, ಪುಟ.303, ಪ್ಯಾರಾ 25.106.)

ಗಾಂಧೀಜಿಯವರ ಹತ್ಯೆಯ ನಂತರ, ಸರ್ದಾರ್ ಪಟೇಲ್, ಉಪಪ್ರಧಾನಿ ಮತ್ತು ಗೃಹ ಸಚಿವರಾಗಿದ್ದ ಭಾರತ ಸರ್ಕಾರವು ಆರ್.ಎಸ್.ಎಸ್. ಅನ್ನು ನಿಷೇಧಿಸಿತು ಮತ್ತು ಅದರ ಸುಮಾರು 25,000 ಸದಸ್ಯರನ್ನು ಜೈಲಿಗೆ ಹಾಕಿತು. ಹಿಂದೂ ಮಹಾಸಭಾ ನಿಷೇಧವನ್ನು ಎದುರಿಸಬೇಕಾಗಿ ಬಂದಾಗ ತನ್ನನ್ನು ತಾನೇ ವಿಸರ್ಜಿಸಿ ಕೊಳ್ಳುವದೇ ಒಳ್ಳೆಯದು ಎಂದು ಬಗೆಯಿತು. ಗಾಂಧೀಜಿಯವರ ಕೊಲೆಯೊಂದಿಗೆ ಕಳಂಕಿತವಾಗಿದ್ದ ಹಿಂದೂ ಮಹಾಸಭಾವು ಹಿಂದೆ ಸರಿಯುವ ತಂತ್ರವನ್ನು ಅನುಸರಿಸಿದರೆ, ಶ್ಯಾಮ ಪ್ರಸಾದ್ ಮುಖರ್ಜಿ, 1951 ರಲ್ಲಿ ಭಾರತೀಯ ಜನ ಸಂಘವನ್ನು ಸ್ಥಾಪಿಸಿದರು. ಇದು ಅಂದಿನಿಂದ ಹಿಂದೂ ಕೋಮುವಾದಿ ಅಭಿವ್ಯಕ್ತಿಯ ಪ್ರಮುಖ ರಾಜಕೀಯ ವಾಹಕವಾಯಿತು, ತುರ್ತುಪರಿಸ್ಥಿತಿಯ ನಂತರ ಜನತಾ ಪಕ್ಷದಲ್ಲಿ ವಿಲೀನಗೊಳ್ಳುವವರೆಗೆ ಅದರ ಮುಂಚೂಣಿಯ ರಾಜಕೀಯ ಪಕ್ಷವಾಯಿತು ಮತ್ತು ನಂತರ ಅದರ ಜಾಗದಲ್ಲಿ ಬಿಜೆಪಿ ಬಂತು.


ಭಾರತದ ಸ್ವಾತಂತ್ರ್ಯಕ್ಕಾಗಿ ನಿಜವಾದ ಹೋರಾಟ ನಡೆಯುತ್ತಿದ್ದಾಗ ಇಂದು ಅತ್ಯಂತ ಬದ್ಧ ರಾಷ್ಟ್ರೀಯವಾದಿಗಳೆಂದು ಹೇಳಿಕೊಳ್ಳುವ ರಾಜಕೀಯ ಶಕ್ತಿಗಳು ಯಾವುದೇ ಪಾತ್ರವನ್ನು ವಹಿಸದಿರುವುದು ನಿಜಕ್ಕೂ ವಿಪರ್ಯಾಸ.

1924 ರಲ್ಲಿ ಜೈಲಿನಿಂದ ಬಿಡುಗಡೆಯಾದ ನಂತರ ಸಾವರ್ಕರ್ ಯಾವುದೇ ಬ್ರಿಟಿಷ್ ವಿರೋಧಿ ರಾಜಕೀಯದಲ್ಲಿ ಭಾಗವಹಿಸಲಿಲ್ಲ. ವಾಸ್ತವವಾಗಿ, ಅವರು, ಅಸಲೀ ಭಾರತೀಯರೆಂದರೆ ಯಾರು ಎಂಬುದನ್ನು ಅವರ 'ಪಿತೃಭೂಮಿ' ಮತ್ತು 'ಪುಣ್ಯಭೂಮಿ' ಆಧಾರದಲ್ಲಿ ವ್ಯಾಖ್ಯಾನಿಸುವ, ಆ ಮೂಲಕ, ಪುಣ್ಯಭೂಮಿಯು ಭಾರತದಿಂದ ಹೊರಗಿರುವ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರನ್ನು ಹೊರತುಪಡಿಸುವ ಹಿಂದುತ್ವ ಸಿದ್ಧಾಂತದ ಮೂಲ ರೂವಾರಿಯಾಗಿದ್ದರು. 1930 ಮತ್ತು 1940 ರ ದಶಕಗಳಲ್ಲಿ ಹಿಂದೂ ಮಹಾಸಭಾ ಕೂಡ ಬ್ರಿಟಿಷರಿಗೆ ಹೆಚ್ಚು ನಿಷ್ಠಾವಂತವಾಯಿತು. ನಿಷ್ಠಾವಂತ ಪ್ರವೃತ್ತಿ ಮೊದಲೇ ಇದ್ದರೂ, ಆರಂಭದಲ್ಲಿ ಅದರ ಕೆಲವು ನಾಯಕರು ಕಾಂಗ್ರೆಸ್ ನೇತೃತ್ವದ ಚಳುವಳಿಗಳಲ್ಲಿ ಭಾಗವಹಿಸಿದರು. ಆದರೆ 1937 ರಿಂದ, ಸಾವರ್ಕರ್ ಅಧ್ಯಕ್ಷರಾಗಿ, ಅದರ ನಿರ್ವಿವಾದ ನಾಯಕರಾದಾಗ, ಅವರು ಬ್ರಿಟಿಶ್ ಸಾಮ್ರಾಜ್ಯದ ಮೇಜಿನಿಂದ ಎಸೆಯುವ ರೊಟ್ಟಿ ತುಣುಕುಗಳಿಗಾಗಿ ಮುಸ್ಲಿಂ ಲೀಗ್‌ನೊಂದಿಗೆ ಸ್ಪರ್ಧೆಗೆ ಇಳಿದರು. ಎರಡನೆಯ ಮಹಾಯುದ್ಧದ ಆರಂಭವು ರಾಷ್ಟ್ರೀಯತಾವಾದಿ ಶಕ್ತಿಗಳೊಂದಿಗಿನ ಭಿನ್ನಾಭಿಪ್ರಾಯಗಳನ್ನು ಬಹಿರಂಗಕ್ಕೆ ತಂದಿತು ಭಾರತವನ್ನು ಅದರ ಒಪ್ಪಿಗೆಯಿಲ್ಲದೆ ಯುದ್ಧದಲ್ಲಿ ಭಾಗೀದಾರ ಮಾಡಲು ನಿರ್ಧರಿಸಿದಾಗ, ಕಾಂಗ್ರೆಸ್ ಪ್ರಾಂತೀಯ ಸಚಿವರು ಬ್ರಿಟಿಷ್ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ರಾಜೀನಾಮೆ ನೀಡಿದರೆ, ಹಿಂದೂ ಮಹಾಸಭಾ ನಾಯಕರು ಬ್ರಿಟಿಷರಿಗೆ ಸಹಕಾರವನ್ನು ನೀಡಿದರು ಮತ್ತು ಭಾರತೀಯರು ಯುದ್ಧ–ಪ್ರಯತ್ನದಲ್ಲಿ ಭಾಗವಹಿಸಿ ಸೈನ್ಯಕ್ಕೆ ಸೇರಿಕೊಳ್ಳಬೇಕೆಂದು ಪ್ರತಿಪಾದಿಸಿದರು. ಸಾವರ್ಕರ್, ಮಹಾಸಭಾದ ಅಧ್ಯಕ್ಷರಾಗಿ, ಹಿಂದೂಗಳಿಗೆ 'ಬ್ರಿಟಿಷ್ ಸರ್ಕಾರದ ಎಲ್ಲಾ ಯುದ್ಧ–ಪ್ರಯತ್ನಗಳಲ್ಲಿ ಭಾಗವಹಿಸುವಂತೆ' ಮನವಿ ಮಾಡಿದರು ಮತ್ತು ಈ ನೀತಿಯನ್ನು 'ಸಾಮ್ರಾಜ್ಯಶಾಹಿಯ ಸಹಕಾರ' ಎಂದು "ಖಂಡನೆ" ಮಾಡುವ "ಕೆಲವು ಮೂರ್ಖರ" ಮಾತಿಗೆ ಕಿವಿಗೊಡಬೇಡಿ ಎಂದು ಮನವಿ ಮಾಡಿದರು. (ಸಾವರ್ಕರ್, ಹಿಂದೂ ರಾಷ್ಟ್ರ ದರ್ಶನ, ಪುಟ 203ff.)

ಖಾಸಗಿಯಾಗಿ, ಸಾವರ್ಕರ್ ಅಕ್ಟೋಬರ್ 1939 ರಲ್ಲಿ ವೈಸ್‌ರಾಯ್‌ಗೆ ಹಿಂದೂಗಳು ಮತ್ತು ಬ್ರಿಟಿಷರು ಸ್ನೇಹಿತರಾಗಿರಬೇಕು ಎಂದು ಹೇಳಿದರು ಮತ್ತು ಕಾಂಗ್ರೆಸ್ ಮಂತ್ರಿಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದರೆ ಹಿಂದೂ ಮಹಾಸಭಾ ಆ ಜಾಗವನ್ನು ತುಂಬುತ್ತದೆ ಎಂದು ಭರವಸೆ ನೀಡಿತು. (ಝೆಟ್ಲ್ಯಾಂಡ್ಗೆ,ಗೃಹ ಕಾರ್ಯದರ್ಶಿಗೆ ಲಿಲಿತ್ ಗೊ, ವೈಸರಾಯ್ ಪತ್ರ, 7 ಅಕ್ಟೋಬರ್ 1939, ಜೆಟ್ಲ್ಯಾಂಡ್ ಪೇಪರ್ಸ್, ಸಂಪುಟ 18, ರೀಲ್ ಸಂಖ್ಯೆ 6.)

ಈ ಬ್ರಿಟಿಷ್ ಪರ ನೀತಿಗೆ ಅನುಸಾರವಾಗಿ, 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ನಡೆಯುತ್ತಿದ್ದಾಗ ಮತ್ತು ಗಾಂಧೀಜಿ ಸೇರಿದಂತೆ ಇಡೀ ರಾಷ್ಟ್ರೀಯವಾದಿ

⇨⇨



ಗಾಂಧೀಜಿಯ ಹತ್ಯೆಯಾದಾಗ, ಸಾವರ್ಕರ್ ಅವರನ್ನು ಪಿತೂರಿಯ ಹಿಂದಿನ ಮಹಾನಿಯೋಜಕ ಎಂದು ಶಂಕಿಸಲಾಗಿದ್ದರಿಂದ ಬಂಧಿಸಲಾಯಿತು. ಸರ್ದಾರ್ ಪಟೇಲ್, ಗೃಹ ಸಚಿವರಾಗಿ, ಇಡೀ ಪ್ರಕರಣದ ಮೇಲ್ವಿಚಾರಣೆ ಮಾಡುತ್ತಿದ್ದರು, ಉತ್ತಮ ಕ್ರಿಮಿನಲ್ ವಕೀಲರಾಗಿದ್ದ ಅವರಿಗೆ, ಸಾವರ್ಕರ್ ಅವರ ತಪ್ಪು ವೈಯಕ್ತಿಕವಾಗಿ ಮನವರಿಕೆ ಆಗಿತ್ತು, ಇಲ್ಲದಿದ್ದರೆ ಅವರನ್ನು ವಿಚಾರಣೆಗೆ ಒಳಪಡಿಸಲು ಒಪ್ಪುತ್ತಿರಲಿಲ್ಲ.ಮಾಫಿ ಸಾಕ್ಷೀದಾರ(ಅಪ್ರೂವರ್)ನ ಸಾಕ್ಷ್ಯವನ್ನು ದೃಢಿಕರಿಸಲು ಸ್ವತಂತ್ರ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಸಾವರ್ಕರ್ ಅಂತಿಮವಾಗಿ ಗಾಂಧಿ ಕೊಲೆ ವಿಚಾರಣೆಯಲ್ಲಿ ಶಿಕ್ಷೆಗೊಳಗಾಗಲಿಲ್ಲ: ಆದಾಗ್ಯೂ, 1965 ರಲ್ಲಿ ನೇಮಿಸಿದ ವಿಚಾರಣಾ ಆಯೋಗವು ಹಿಂದೆ ವಿಚಾರಣಾ ನ್ಯಾಯಾಧೀಶರಿಗೆ ಲಭ್ಯವಿಲ್ಲದ ಸಾಕಷ್ಟು ಪುರಾವೆಗಳನ್ನು ಕಲೆ ಹಾಕಿತು. ಹಿಂದೆ ಸಾಕ್ಷಿ ಹೇಳದ, ಸಾವರ್ಕರ್ ಅವರ ಇಬ್ಬರು ನಿಕಟವರ್ತಿಗಳಾದ ಎ ಪಿ ಕಸರ್ ಮತ್ತು ಜಿ.ವಿ. ದಾಮ್ಲೆ ಆ ವೇಳೆಗೆ ಸಾವರ್ಕರ್ ನಿಧನರಾಗಿದ್ದರಿಂದ ಕಪೂರ್ ಕಮಿಷನ್ ಮುಂದೆ ಮಾತನಾಡಿದ್ದು, ಮಾಫಿ ಸಾಕ್ಷೀದಾರರ ಹೇಳಿಕೆಗಳನ್ನು ದೃಢಪಡಿಸಿದರು.

ಗಾಂಧೀಜಿ ಹತ್ಯೆಯ ವಿಚಾರಣೆಯಲ್ಲಿ ಕಟಕಟೆಯಲ್ಲಿ ಗೋಡ್ಸೆ ಮತ್ತಿತರರೊಂದಿಗೆ ಸಾವರ್ಕರ್– ಹಿಂದಿನ ಸಾಲಿನಲ್ಲಿ

ಕ್ಷಮಾಯಾಚನೆಯ ಅರ್ಜಿಗಳ ಸಲಹೆಗಾರರಾಗಿ!!



1924 ರಲ್ಲಿ ಬ್ರಿಟಿಷರ ಕ್ಷಮಾದಾನ ಪಡೆದು ಜೈಲಿನಿಂದ ಬಿಡುಗಡೆಗೊಂಡಾಗ ಸ್ವಾಗತ



➪➪ಪುಟ 10 ರಿಂದ

ಕಾಂಗ್ರೆಸ್ ನಾಯಕತ್ವವು ಜೈಲಿನಲ್ಲಿದ್ದಾಗ, ಹಿಂದೂ ಮಹಾಸಭಾದ ಶ್ಯಾಮ ಪ್ರಸಾದ್ ಮುಖರ್ಜಿ ಬಂಗಾಳದ ಫಜ್ಲುಲ್ ಹಕ್ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದರು. ಹಿಂದೂ ಮಹಾಸಭಾವು ಸಿಂಧ್ ಮತ್ತು ವಾಯವ್ಯ ಗಡಿಪ್ರಾಂತದಲ್ಲಿ ಮುಸ್ಲಿಂ ಲೀಗ್ ನೊಂದಿಗೆ ಸಮ್ಮಿಶ್ರ ಸರ್ಕಾರಗಳನ್ನು ರಚಿಸಿತು. ಈ ಎಲ್ಲಾ ನಿಷ್ಠೆ ಅವರಿಗೆ ಚುನಾವಣಾ ಯಶಸ್ಸನ್ನು ಗಳಿಸಿ ಕೊಡಲಿಲ್ಲ, ಅವರು 1946 ರ ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದರು ಎಂಬುದು ಬೇರೆ ಮಾತು!

ಆರ್‌ಎಸ್‌ಎಸ್ ಕೂಡ ಒಂದು ಸಂಘಟನೆಯಾಗಿ ವಸಾಹತುಶಾಹಿ ಆಡಳಿತದಿಂದ ಸ್ವಾತಂತ್ರ್ಯಕ್ಕಾಗಿ ಯಾವುದೇ ಪ್ರಮುಖ ಸಮರಗಳಲ್ಲಿ ಭಾಗವಹಿಸಲಿಲ್ಲ. ಆರೆಸ್ಸೆಸ್ ಅನ್ನು 1925 ರಲ್ಲಿ ಸ್ಥಾಪಿಸಲಾಯಿತು, 3 ವರ್ಷದ ನಂತರ 1928 ರಲ್ಲಿ ಸೈಮನ್ ಕಮಿಷನ್ ಬಹಿಷ್ಕಾರವಲ್ಲದೆ, ಕನಿಷ್ಠ ಎರಡು ಪ್ರಮುಖ ಚಳುವಳಿಗಳನ್ನು, 1930–34ರ ನಾಗರಿಕ ಅಸಹಕಾರ ಚಳುವಳಿ ಮತ್ತು 1942 ರ ಕ್ವಿಟ್ ಇಂಡಿಯಾ ಚಳುವಳಿಯನ್ನು ಕಾಂಗ್ರೆಸ್ ನಡೆಸಿತು. ಇವುಗಳಲ್ಲಿ ಆರ್‌ಎಸ್‌ಎಸ್ ಯಾವುದೇ ಪಾತ್ರವನ್ನು ವಹಿಸಲಿಲ್ಲ. ಆರ್‌ಎಸ್‌ಎಸ್‌ನ ಸಂಸ್ಥಾಪಕ ಹೆಡ್ಗೆವಾರ್ 1930 ರಲ್ಲಿ ವೈಯಕ್ತಿಕವಾಗಿ ಜೈಲಿಗೆ ಹೋಗಿದ್ದರು, ಆದರೆ ಅವರು ತಮ್ಮ ಸಂಘಟನೆ ಮತ್ತು ಅದರ ಸದಸ್ಯರನ್ನು ಅಸಹಕಾರ ಚಳವಳಿಯಿಂದ ದೂರವಿಟ್ಟರು. ಸರ್ಕಾರವು ಆರ್‌ಎಸ್‌ಎಸ್‌ನಿಂದ ಭಯಪಡುವ ಅಗತ್ಯವಿಲ್ಲ ಎಂದು ಸ್ಪಷ್ಟವಾಗಿತ್ತು. ಆರೆಸ್ಸೆಸ್ ಕುರಿತು ಗೃಹ ಇಲಾಖೆಯ ಟಿಪ್ಪಣಿಯು ಇದನ್ನು ವರದಿ ಮಾಡಿದೆ: 'ಕಾಂಗ್ರೆಸ್ ಗಲಭೆಗಳ ಸಮಯದಲ್ಲಿ (1943ರಲ್ಲಿ) ಆರ್‌ಎಸ್‌ಎಸ್ ನ ಸಭೆಗಳಲ್ಲಿ, ನಾಯಕರುಗಳು ತಮ್ಮ ಸದಸ್ಯರನ್ನು ಕಾಂಗ್ರೆಸ್ ಚಳವಳಿಯಿಂದ ದೂರವಿರುವಂತೆ ಒತ್ತಾಯಿಸಿದರು ಮತ್ತು ಈ ಸೂಚನೆಗಳನ್ನು ಸಾಮಾನ್ಯವಾಗಿ ಪಾಲಿಸಲಾಯಿತು."

ಗಾಂಧೀಜಿಯವರ ಹತ್ಯೆಯ ನಂತರ ಏಕೆ ಆರ್‌ಎಸ್‌ಎಸ್ ಮತ್ತು ಜನ ಸಂಘ–ಬಿಜೆಪಿ ಶಿಬಿರದಲ್ಲಿ ಸಾವರ್ಕರ್ ಅವರ ಬಗ್ಗೆ ಏಕೆ 4–5 ದಶಕಗಳಿಗು ಹೆಚ್ಚು ಕಾಲ ಮೌನವಿತ್ತು ಎಂದು ಕೇಳುವುದು ನ್ಯಾಯಸಮ್ಮತವಾಗಿದೆ. ಜನಮಾನಸದಲ್ಲಿ ಸಾವರ್ಕರ್ ಅವರು ಗಾಂಧೀಜಿಯವರ ಹತ್ಯೆಯೊಂದಿಗೆ ಸಂಬಂಧ ಹೊಂದಿದ್ದರು ಎಂದು ಬಿಂಬಿತವಾಗಿದ್ದರಿಂದ ಅವರ ಪರವಾಗಿ ಮಾತಾಡುವುದು ರಾಜಕೀಯವಾಗಿ ಆತ್ಮಹತ್ಯೆಯೇ ಅಗುತ್ತಿತ್ತು ಎಂಬ ಕಾರಣಕ್ಕಾಗಿಯೇ ಹೀಗಾಗಿರಬಹುದೇ? ಈಗ ಬಹಳಷ್ಟು ಸಮಯ ಕಳೆದುಹೋಗಿದೆ, ಸಾರ್ವಜನಿಕ ನೆನಪು ಬಹಳ ಸಮಯ ಇರುವುದಿಲ್ಲ ಎಂದು ಭಾವಿಸಲಾಗುತ್ತದೆ. ಆದ್ದರಿಂದ ಸಾವರ್ಕರ್ ರನ್ನು ಈಗ ಮತ್ತೆ ಜೀವಂತಗೊಳಿಸಬಹುದು ಎಂದು ಭಾವಿಸಿರಬಹುದೇ? ಅಲ್ಲದೆ, ಹೊಸ ಆಕ್ರಮಣಕಾರಿ ಹಂತದ ಭಾಗವಾಗಿ 'ಹಿಂದುತ್ವ'ಕ್ಕೆ ಹೊಸ ಸಾರ್ವಜನಿಕ ಒತ್ತು ನೀಡುತ್ತಿರುವಾಗ, ಈ ಪರಿಕಲ್ಪನೆಯ ಮೂಲ ಸೃಷ್ಟಿಕರ್ತನನ್ನು ನಿರ್ಲಕ್ಷಿಸುವುದು ಕಷ್ಟಕರವಾಗಿತ್ತು. ಇದಲ್ಲದೆ, 'ರಾಷ್ಟ್ರೀಯವಾದಿ' ಎಂದು ಹೇಳಿಕೊಳ್ಳುವ ಪಕ್ಷಕ್ಕೆ, ತೋರಿಸಲು ಯಾವುದೇ ಸ್ವಾತಂತ್ರ್ಯ ಹೋರಾಟಗಾರರಿಲ್ಲದಿರುವುದು ಸ್ವಲ್ಪ ಮುಜುಗರದ ಸಂಗತಿಯಾಗಿದೆ. ಆದ್ದರಿಂದ, ರಾಷ್ಟ್ರೀಯವಾದಿ ಪ್ರತಿಮೆಗಳನ್ನು ಕಂಡುಹಿಡಿಯುವ ಹತಾಶ ಪ್ರಯತ್ನದಲ್ಲಿ, ಸಾವರ್ಕರ್ ಅವರನ್ನು ಆ ಅಚ್ಚಿನಲ್ಲಿ ಚಿತ್ರಿಸಲು ಪ್ರಯತ್ನಿಸಲಾಗುತ್ತಿದೆ.

ಸಾವರ್ಕರ್ ಅವರನ್ನು ಕ್ರಾಂತಿವೀರ, ಅಂಡಮಾನ್ ಕ್ರಾಂತಿಕಾರಿ ಎಂದು ಸ್ಮರಿಸುವ ಮೂಲಕ ಅವರ ಕೋಮುವಾದದ ಮೇಲೆ ರಾಷ್ಟ್ರೀಯವಾದ ಮುಸುಕು ಎಳೆಯಲಾಗಿದೆ. ಆ ಸಾವರ್ಕರ್ ಅಂಡಮಾನ್‌ನಲ್ಲಿ ಕ್ಷಮಿಸುವಂತೆ ಪದೇ ಪದೇ ಕೇಳುವ ಮೂಲಕ ಕ್ರಾಂತಿಕಾರಿಗಳನ್ನು ನಾಚಿಕೆಪಡುವಂತೆ ಮಾಡಿದರು ಮತ್ತು ಬ್ರಿಟಿಷ್ ಸರ್ಕಾರಕ್ಕೆ ನೀಡಿದ ಭರವಸೆಯಂತೆ ಅವರು ಬಿಡುಗಡೆಯಾದ ನಂತರ ಯಾವುದೇ ರಾಷ್ಟ್ರೀಯವಾದಿ ಚಟುವಟಿಕೆಯಲ್ಲಿ ಭಾಗವಹಿಸಲಿಲ್ಲ ಎಂಬುದನ್ನು ಮರೆಯುವಂತೆ ಮಾಡಲು ಪ್ರಯತ್ನಿಸಲಾಗಿದೆ. 2003 ರಲ್ಲಿ, ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಅಧಿಕಾರದಲ್ಲಿದ್ದಾಗ, ಸಾಕಷ್ಟು ವಿರೋಧದ ಹೊರತಾಗಿಯೂ, ಸಾವರ್ಕರ್ ಅವರ ಭಾವಚಿತ್ರವನ್ನು ಸಂಸತ್ತಿನಲ್ಲಿ ಸ್ಥಾಪಿಸಲಾಯಿತು. ಸಾವರ್ಕರ್ ಬಗ್ಗೆ ಅನುಮಾನದ ತುಸುವಾದರೂ ಸಂದೇಹ ಇದ್ದರೂ ಹೀಗಾಗಬಾರದಿತ್ತು ಎಂದು ಯಾರಾದರೂ ಕಲ್ಪಿಸಿಕೊಳ್ಳಬಹುದು. ಮತ್ತು ಈಗ ಇತ್ತೀಚಿನ ಪ್ರಯತ್ನವೆಂದರೆ, ಸಾವರ್ಕರ್ ಅವರ ಬಗ್ಗೆ ಮುಜುಗರಪಡುವಂತೆ ಮಾಡಿರುವ ಕ್ಷಮಾಯಾಚನೆ ಅರ್ಜಿಗಳನ್ನು ಸ್ವತಃ ಮಹಾತ್ಮರು ಮಂಜೂರು ಮಾಡಿದ್ದರು ಎನ್ನುವ ಮೂಲಕ, ಆ ರೀತಿಯ ಕ್ಷಮಾಯಾಚನೆ ಒಂದು ಸಾಮಾನ್ಯ ಸಂಗತಿ ಅದರಲ್ಲಿ ಮುಜುಗರಪಡುವಂತದ್ದೇನೂ ಇಲ್ಲ ಎಂದು ಅದನ್ನು ನ್ಯಾಯಸಮ್ಮತಗೊಳಿಸುವ ಪ್ರಯತ್ನ! ಇವರಿಬ್ಬರ ನಡುವೆ ನಿಕಟ ಮತ್ತು ಸ್ನೇಹಪರ ಸಂಬಂಧವಿತ್ತು ಎಂದು ತೋರಿಸುವುದು ಮತ್ತು ಈ ಮೂಲಕ ಇವರಿಬ್ಬರ ನಡುವೆ ಯಾವುದೇ ಸಾಮ್ಯತೆ ಇಲ್ಲ ಎಂಬ ಅಂಶವನ್ನು ಮರೆಮಾಚುವುದು ಕೂಡ ಗುರಿಯಾಗಿದೆ. ಹಿಂದುತ್ವದ ಸಿದ್ಧಾಂತಿ ಮತ್ತು ಹಿಂದೂ ಮಹಾಸಭಾದ ನಾಯಕರಾಗಿ ಸಾವರ್ಕರ್ ಗಾಂಧೀಜಿಯವರ, ವಿಶೇಷವಾಗಿ ಅವರ ಅಹಿಂಸೆ ಮತ್ತು ಮುಸ್ಲಿಮರನ್ನು ಒಳಗೊಳ್ಳುವ ನಿಲುವನ್ನು ಎಡೆಬಿಡದೆ ಮತ್ತು ಕಟುವಾಗಿ ಟೀಕಿಸುತ್ತಿದ್ದವರು. ಭಾರತ ಯಾರಿಗೆ ಸೇರಿದೆ ಎಂಬ ವಿಷಯದಲ್ಲಿ ಅವರ ಸೂತ್ರೀಕರಣಗಳ ನಡುವೆ ಇರುವ ವೈದೃಶ್ಯಕ್ಕಿಂತ ತೀಕ್ಷ್ಣವಾದುದು ಬೇರೊಂದಿರಲು ಸಾಧ್ಯವಿಲ್ಲ. ಸಾವರ್ಕರ್ "ಭಾರತವು ಹಿಂದೂ ಭೂಮಿಯಾಗಿರಬೇಕು, ಹಿಂದುಗಳಿಗಾಗಿ ಮೀಸಲಾಗಿರಬೇಕು" ಎಂದು ಸ್ಪಷ್ಟವಾಗಿಯೇ ಹೇಳುತ್ತಾರೆ ಹಿಂದುಗಳು "ತಮ್ಮ ಸ್ವಂತ ಮನೆಯಲ್ಲಿ, ಹಿಂದೂಸ್ಥಾನದಲ್ಲಿ, ಹಿಂದೂಗಳ ನಾಡಿನಲ್ಲಿ ಯಜಮಾನರಾಗಿರಬೇಕು" ಎಂದು ಅವರು ನಿಸ್ಸಂದಿಗ್ಧವಾಗಿ ಪ್ರತಿಪಾದಿಸುತ್ತಾರೆ. (ಹಿಂದೂ ರಾಷ್ಟ್ರ ದರ್ಶನ, ಪುಟ 92, 63). ಮತ್ತೊಂದೆಡೆ, ಗಾಂಧೀಜಿಯವರು 1942 ರ ಆಗಸ್ಟ್‌ನಲ್ಲಿ ಮುಂಬೈಯಲ್ಲಿ 'ಕ್ವಿಟ್ ಇಂಡಿಯಾ' ಗೆ ಕರೆ ನೀಡಿದ ತಮ್ಮ ಪ್ರಸಿದ್ಧ ಭಾಷಣದಲ್ಲಿ, "ಡಾ. ಮೂಂಜೆ ಮತ್ತು ಶ್ರೀ ಸಾವರ್ಕರ್ ಅವರಂತಹ ಹಿಂದೂಗಳು ಖಡ್ಗದ ಸಿದ್ಧಾಂತವನ್ನು ನಂಬುತ್ತಾರೆ. ಅವರು ಮುಸಲ್ಮಾನರನ್ನು ಹಿಂದೂ ಪ್ರಾಬಲ್ಯದ ಅಡಿಯಲ್ಲಿ ಇರಿಸಿಕೊಳ್ಳಲು ಪ್ರಯತ್ನಿಸಬಹುದು. ನಾನು ಆ ವಿಭಾಗವನ್ನು ಪ್ರತಿನಿಧಿಸುವುದಿಲ್ಲ. ನಾನು ಕಾಂಗ್ರೆಸನ್ನು ಪ್ರತಿನಿಧಿಸುತ್ತೇನೆ. ಕಾಂಗ್ರೆಸ್ ಯಾವುದೇ ಗುಂಪಿನ ಅಥವಾ ಯಾವುದೇ ಸಮುದಾಯದ ಪ್ರಾಬಲ್ಯವನ್ನು ನಂಬುವುದಿಲ್ಲ. ಇದು ತನ್ನ ಕಕ್ಷೆಯಲ್ಲಿ ಮುಸ್ಲಿಮರು, ಹಿಂದೂಗಳು, ಕ್ರಿಶ್ಚಿಯನ್ನರು, ಪಾರ್ಸಿಗಳು, ಯಹೂದಿಗಳು–ಈ ವಿಶಾಲವಾದ ದೇಶದಲ್ಲಿ ವಾಸಿಸುವ ಪ್ರತಿಯೊಂದು ಸಮುದಾಯವನ್ನು ಒಳಗೊಂಡಿರುವ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಹೊಂದಿದೆ....ಈ ದೇಶದಲ್ಲಿ ಲಕ್ಷಾಂತರ ಮುಸಲ್ಮಾನರು ಹಿಂದೂ ಸಂತತಿಯಿಂದ ಬಂದವರು. ಅವರ ಸ್ವದೇಶ ಭಾರತವಲ್ಲದೆ ಬೇರೇನಾದರೂ ಆಗಿರಲು ಹೇಗೆ ಸಾಧ್ಯ?" ಎಂದು ಸಾರಿ ಹೇಳಿದರು.

ಸಾವರ್ಕರ್ ಮತ್ತು ಆತನ ಕಡೆಯವರು, ಮತ್ತು ಭಗತ್ ಸಿಂಗ್ ರಂತಹ ಯಾವತ್ತೂ ಕ್ಷಮೆಯನ್ನು ಕೇಳುವುದಿಲ್ಲ ಎಂದು ತಮ್ಮ ಬಗ್ಗೆ ಹೆಮ್ಮೆಪಡುವ, ಸಾವು ಸೇರಿದಂತೆ ಎಲ್ಲಾ ಶಿಕ್ಷೆಯನ್ನು ಅನುಭವಿಸಲು ಸಿದ್ಧವಾದ ಕ್ರಾಂತಿಕಾರಿಗಳ ನಡುವೆ ಎಷ್ಟೊಂದು ವ್ಯತ್ಯಾಸವಿದೆ ಎಂದು ಯೋಚಿಸದಿರಲು ಸಾಧ್ಯವಿಲ್ಲ. ವಾಸ್ತವವಾಗಿ ಆರಂಭಿಕ ದಿನಗಳಿಂದಲೂ ಭಾರತೀಯ ರಾಷ್ಟ್ರೀಯವಾದಿಗಳು ತಾವು ಎಸಗುವ ಬ್ರಿಟಿಷ್–ವಿರೋಧಿ ಕೃತ್ಯಗಳಿಗೆ ಜವಾಬ್ದಾರಿಯನ್ನು ಧೈರ್ಯದಿಂದ ಸ್ವೀಕರಿಸುವ, ವಿಚಾರಣೆಗಳನ್ನು ಎದುರಿಸುವ, ಆ ವಿಚಾರಣೆಗಳನ್ನೇ ರಾಷ್ಟ್ರೀಯವಾದಿ ಗುರಿಗಳ ಮತ್ತಷ್ಟು ಪ್ರಚಾರಕ್ಕಾಗಿ ಬಳಸುವ ಮತ್ತು ನಂತರ ಜೈಲುವಾಸ, ಗಡಿಪಾರು ಅಥವಾ ಸಾವನ್ನು ಕೂಡ ಶಿಕ್ಷೆಯಾಗಿ ಸ್ವೀಕರಿಸುವ ಅಭ್ಯಾಸವನ್ನು ವಿಕಸನಗೊಳಿಸಿದರು,

ಗಮನಿಸಬೇಕಾದ ಸಂಗತಿಯೆಂದರೆ, ಬಂಧನದಿಂದ ಬಿಡುಗಡೆಗಾಗಿ ಸರ್ಕಾರಕ್ಕೆ ಮನವಿ ಸಲ್ಲಿಸುವ ಮತ್ತು ಉತ್ತಮ ನಡವಳಿಕೆಯ ವಚನ ಕೊಡುವ ಸಾವರ್ಕರ್ ಅವರ ಅಭ್ಯಾಸವು 1924 ರಲ್ಲಿ ಬ್ರಿಟಿಷ್ ಜೈಲಿನಿಂದ ಅವರನ್ನು ಬಿಡುಗಡೆ ಪಡೆಯುವುದರೊಂದಿಗೇ ಕೊನೆಗೊಳ್ಳಲಿಲ್ಲ. ಗಾಂಧೀಜಿಯವರ ಹತ್ಯೆಗೆ ಸಂಬಂಧಿಸಿದಂತೆ ಅವರನ್ನು ಬಂಧಿಸಿದ ಮೂರು ವಾರಗಳಲ್ಲಿ, ಫೆಬ್ರವರಿ 22, 1948 ರಂದು ಅವರು ಆರ್ಥರ್ ರೋಡ್ ಕಾರಾಗೃಹದಿಂದ ಪೊಲೀಸ್ ಕಮಿಷನರ್‌ಗೆ ಸಲ್ಲಿಸಿದ ಮನವಿಯಲ್ಲೂ "ಯಾವುದೇ ಕೋಮು ಅಥವಾ ರಾಜಕೀಯ ಸಾರ್ವಜನಿಕ ಚಟುವಟಿಕೆಯಲ್ಲಿ ಸರ್ಕಾರವು ಇಚ್ಛಿಸುವ ಯಾವುದೇ ಅವಧಿಯವರಿಗೆ ಭಾಗವಹಿಸುವುದಿಲ್ಲ ಎಂಬ ಷರತ್ತಿನ ಮೇಲೆ ನನ್ನನ್ನು ಬಿಡುಗಡೆಗೊಳಿಸುವುದಾದರೆ.." ತಾನು ಆ ಷರತ್ತನ್ನು ಪಾಲಿಸಲು ಸಿದ್ಧ ಎಂಬುದನ್ನು ವ್ಯಕ್ತಗೊಳಿಸಿದ್ದರು. ಇದು ಕೂಡ ಗಾಂಧೀಜಿಯವರ ಸಲಹೆಯ ಮೇರೆಗೆ ಎಂದು ಸಾಬೀತುಪಡಿಸುವುದು ಬಹುಶಃ ಅತ್ಯಂತ ಮೇಧಾವಿ ವಕೀಲರಿಗೂ ಕಷ್ಟಕರವೆನಿಸುವ ಕೆಲಸ.

"2014ರ ಸ್ವಾತಂತ್ರ್ಯ" – ವ್ಯಂಗ್ಯಚಿತ್ರಕಾರರು ಕಂಡಂತೆ



(ಮಿಕಾ ಅಝೀರ್ಝ್, ಫೇಸ್‌ಬುಕ್)


"ಅದು ಸ್ವಾತಂತ್ರ್ಯ ವಾಗಿರಲಿಲ್ಲ, ಭಿಕ್ಷೆಯಾಗಿತ್ತು, ಸ್ವಾತಂತ್ರ್ಯ ಸಿಕ್ಕಿದ್ದು 2014ರಲ್ಲಿ" ಎಂದು ಉದ್ಗರಿಸುತ್ತ ಝಾನ್ಸಿ ರಾಣಿಯಾಗಿ ಅಮೋಘ ನಟನೆ ನೀಡಿದ ಬಾಲಿವುಡ್ ತಾರೆ ಪದ್ಮಶ್ರೀ ಪ್ರಶಸ್ತಿ ಸ್ವೀಕಾರದ ನಂತರ ಪತ್ರಿಕಾ ಸಂದರ್ಶನವೊಂದರಲ್ಲಿ ಇತಿಹಾಸ ಪುನರ್ಲೇಖನಕ್ಕೆ ತಮ್ಮ ಕೊಡುಗೆ ನೀಡಿದ್ದಾರೆ.



(ಸತೀಶ ಆಚಾರ್ಯ, ಫೇಸ್‌ಬುಕ್)



'2014ರ ಸ್ವಾತಂತ್ರ್ಯ'ದವರೇ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವಾಗ, ಇವರು ಭಿಕ್ಷೆಯ ಅಮೃತ ಮಹೋತ್ಸವ ಆಚರಿಸಬೇಕೆಂದಿದ್ದಾರೆಯೇ?
(ಮಂಜುಲ್, ಫಸ್ಟ್ ಪೋಸ್ಟ್)



(ಪಿ.ಮಹಮ್ಮದ್, ಆಂದೋಲನ)

ಭಾರತ ಜಾಗತಿಕ ಸೂಚ್ಯಂಕಗಳಲ್ಲಿ ಕೆಳಜಾರುತ್ತಿರುವ ಬಗ್ಗೆ ನಿವೃತ್ತ ಉನ್ನತಾಧಿಕಾರಿಗಳ ತೀವ್ರ ಕಳವಳ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡಿದ ನಿವೃತ್ತ ಅಧಿಕಾರಿಗಳ ಗುಂಪು, ಸಿ.ಸಿ.ಜಿ.(ಕಾನ್ಸ್ಟಿಟ್ಯೂಷನಲ್ ಕಂಡಕ್ಟ್ ಗ್ರೂಪ್– ಸಂವಿಧಾನಿಕ ನಡವಳಿಕೆ ಗುಂಪು) ವಿವಿಧ ಅಂತರರಾಷ್ಟ್ರೀಯ ಸೂಚ್ಯಂಕಗಳಲ್ಲಿ ಭಾರತದ ಶ್ರೇಯಾಂಕವು ಕುಸಿಯುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದೆ. ದೇಶ ಈ ಸೂಚ್ಯಂಕಗಳಲ್ಲಿ ಕುಸಿಯುತ್ತಿರುವ ಬಗ್ಗೆ ಕಳವಳ ಪಡುವ ಬದಲು ಸರ್ಕಾರವು ವರದಿಗಳು ಮತ್ತು ಸಮೀಕ್ಷೆಗಳ ಮೇಲೆಯೇ ದಾಳಿ ಮಾಡುತ್ತಿದೆ ಎಂದು ಸಿ.ಸಿ.ಜಿ. ಖೇದ ವ್ಯಕ್ತಪಡಿಸಿದೆ.

ಜಾಗತಿಕ ಹಸಿವಿನ ಸೂಚ್ಯಂಕ, 2021, ಭಾರತದ ಶ್ರೇಯಾಂಕದಲ್ಲಿ ಕುಸಿತವನ್ನು ತೋರಿಸುವ ಇತ್ತೀಚಿನ ವರದಿಯಾಗಿದೆ. ಜಾಗತಿಕ ಹಸಿವು ಸೂಚ್ಯಂಕವನ್ನು ಯುರೋಪಿಯನ್ ಸರಕಾರೇತರ ಸಂಘಟನೆ(ಎನ್‌ಜಿಒ)ಗಳವರು ವಿಶ್ವದ ವಿವಿಧ ದೇಶಗಳಲ್ಲಿನ ಹಸಿವನ್ನು ಹೋಲಿಸಿ ಸಿದ್ಧಪಡಿಸಿದ್ದಾರೆ. ವರದಿಯ ಪ್ರಕಾರ, ಭಾರತವು 2015 ರಲ್ಲಿ 55 ನೇ ಸ್ಥಾನದಿಂದ 2021 ರಲ್ಲಿ 101 ನೇ ಸ್ಥಾನಕ್ಕೆ ಕುಸಿದಿದೆ, ಕೇವಲ 15 ರಾಷ್ಟ್ರಗಳು ಮಾತ್ರ ಭಾರತಕ್ಕಿಂತ ಕೆಳಗಿವೆ ಎಂಬ ಸಂಗತಿಯತ್ತ ಸಿ.ಸಿ.ಜಿ. ಗಮನ ಸೆಳೆದಿದೆ. ಈ ಸೂಚ್ಯಂಕ ಕೆಲವು ಮಿತಿಗಳನ್ನು ಹೊಂದಿದ್ದರೂ ಸಹ, ತಳಮಟ್ಟದ ವಾಸ್ತವತೆಯಿಂದ ಹೊರತಾಗಿದೆ, "ಅವೈಜ್ಞಾನಿಕ ವಿಧಾನ"ವನ್ನು ಆಧರಿಸಿದೆ ಎಂಬ ಸರ್ಕಾರದ ವಾದವು "ತಪ್ಪಾಗಿದೆ" ಎಂದು ಸಿ.ಸಿ.ಜಿ. ಹೇಳಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಸರ್ಕಾರದ ಸ್ವಂತ ದತ್ತಾಂಶ, ಸಿ.ಎಂ.ಐ.ಇ.(ಭಾರತೀಯ ಆರ್ಥಿಕತೆ ಮೇಲ್ವಿಚಾರಣೆ ಕೇಂದ್ರ) ಮತ್ತು ಶೈಕ್ಷಣಿಕ ಅಧ್ಯಯನಗಳು ಜಾಗತಿಕ ಹಸಿವು ಸೂಚ್ಯಂಕದಲ್ಲಿ ಸೂಚಿಸಲಾದ ಅಂಕಿಅಂಶಗಳನ್ನು ಬಹುಪಾಲು ದೃಢೀಕರಿಸುತ್ತವೆ ಎಂದು ಸಿ.ಸಿ.ಜಿ. ಹೇಳಿದೆ.

ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಬಂಧವನ್ನು ಹೊಂದಿಲ್ಲದ ಈ ಗುಂಪು ನವೆಂಬರ್ 15ರಂದು ನೀಡಿದ ಸಾರ್ವಜನಿಕ ಹೇಳಿಕೆ "...ಶ್ರೇಯಾಂಕಗಳನ್ನು ಸಂಚಿತವಾಗಿ ತೆಗೆದುಕೊಂಡಾಗ, ಭಾರತದಲ್ಲಿ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯು ಕ್ಷೀಣಿಸುತ್ತ ಬರುತ್ತಿದೆ, ಮಾತ್ರವಲ್ಲ ಭಾರತವನ್ನು ಪ್ರಮುಖ ಪ್ರಜಾಪ್ರಭುತ್ವವನ್ನಾಗಿ ಮಾಡುತ್ತಿರುವ ಅಂಶಗಳು ನಿಧಾನವಾಗಿ ನಶಿಸುತ್ತಿವೆ ಎಂದು ತೋರಿಸುತ್ತವೆ" ಎಂಧೂ ಅಭಿಪ್ರಾಯ ಪಟ್ಟಿದೆ.

ಭಾರತದ ಶ್ರೇಯಾಂಕ ತೀವ್ರವಾಗಿ ಕುಸಿದಿರುವ ಹಲವು ನಿದರ್ಶನಗಳನ್ನು ಸಿ.ಸಿ.ಜಿ. ಪ್ರಸ್ತಾಪಿಸಿದೆ. ಉದಾಹರಣೆಗೆ, ಶಿಕ್ಷಣ, ಜೀವಿತಾವಧಿ ಮತ್ತು ತಲಾ ಆದಾಯವನ್ನು ಅಳೆಯುವ ಯುಎನ್‌ಡಿಪಿಯ 'ಮಾನವ ಅಭಿವೃದ್ಧಿ ವರದಿ'ಯು 2020 ರಲ್ಲಿ ಭಾರತವನ್ನು 189 ದೇಶಗಳಲ್ಲಿ 131 ನೇ ಸ್ಥಾನದಲ್ಲಿಟ್ಟಿದೆ, ಅಂದರೆ, 2018 ರಿಂದ ಎರಡು ಸ್ಥಾನಗಳಷ್ಟು ಕೆಳಗಿಳಿದಿದೆ. 2014 ರಿಂದ ಭಾರತದ ಸ್ಥಾನವು ಸುಧಾರಿಸಿಲ್ಲ.

2021 ರ ಜಾಗತಿಕ ಲಿಂಗ ಅಂತರ ವರದಿಯು ಭಾರತವನ್ನು 140 ರಲ್ಲಿ ಇರಿಸಿದೆ, ಅಂದರೆ ಅದು 28 ಸ್ಥಾನಗಳಷ್ಟು ಕೆಳಕ್ಕೆ ಜಾರಿದೆ. ಆದರೆ ನೆರೆಯ ಬಾಂಗ್ಲಾದೇಶ 65 ನೇ ಸ್ಥಾನದಲ್ಲಿದೆ. ಇದಲ್ಲದೆ, 'ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಪರಿಹಾರಗಳ ಜಾಲ' ಪ್ರಕಟಿಸಿರುವ ವೈಯಕ್ತಿಕ ಯೋಗಕ್ಷೇಮವನ್ನು ಅಳೆಯುವ 'ವಿಶ್ವ ಸಂತೋಷ ವರದಿ'ಯು ಭಾರತವನ್ನು ಅತ್ಯಂತ ಕೆಳಮಟ್ಟಕ್ಕೆ ಇಳಿಸಿದೆ. ಭಾರತ 149 ದೇಶಗಳಲ್ಲಿ 139 ನೇ ಸ್ಥಾನದಲ್ಲಿದೆ, ಇದರಲ್ಲಿ ಪಾಕಿಸ್ತಾನ (105 ನೇ ಶ್ರೇಯಾಂಕ) ಕೂಡ ಭಾರತಕ್ಕಿಂತ ಹೆಚ್ಚು ಸಂತೋಷದ ದೇಶವೆಂದು ಕಂಡುಬಂದಿದೆ.

ಕಳೆದ ವರ್ಷ ಮಾರ್ಚ್‌ನಲ್ಲಿ, ಸ್ವೀಡನ್‌ನ ಪ್ರಸಿದ್ಧ ವಿ–ಡೆಮ್ ಇನ್‌ಸ್ಟಿಟ್ಯೂಟ್ ಪ್ರಕಟಿಸಿದ 'ಪ್ರಜಾಪ್ರಭುತ್ವ ವರದಿ' ಪ್ರಸ್ತುತ ಆಡಳಿತದಲ್ಲಿ ಮಾಧ್ಯಮ, ನಾಗರಿಕ ಸಮಾಜ ಮತ್ತು ವಿರೋಧ ಪಕ್ಷಗಳು ಮುಕ್ತವಾಗಿ ಕಾರ್ಯನಿರ್ವಹಿಸಲು ಹೆಚ್ಚೆಚ್ಚು ಸವಾಲುಗಳನ್ನು ಎದುರಿಸಬೇಕಾಗಿದೆ ಎಂದು ಗಮನಿಸಿದೆ ಮತ್ತು "ಭಾರತವು ಒಂದು ತೀವ್ರ ಅವನತಿಯ ಹಾದಿಯಲ್ಲಿ, ಮುಂದುವರೆದಿದೆ, ಎಷ್ಟರ ಮಟ್ಟಿಗೆ ಎಂದರೆ, ಅದು ಒಂದು ಪ್ರಜಾಪ್ರಭುತ್ವ ಎಂಬ ಸ್ಥಾನಮಾನವನ್ನು ಸುಮಾರಾಗಿ ಕಳೆದುಕೊಂಡೇ ಬಿಟ್ಟಿದೆ" ಎಂದು ಹೇಳಿದೆ. ಹಂಗೇರಿ, ಪೋಲೆಂಡ್ ಮತ್ತು ಬ್ರೆಜಿಲ್‌ನೊಂದಿಗೆ ಒಂದು ಹೊಗಳಲಾರದ ಗುಂಪಿನಲ್ಲಿ ಭಾರತವನ್ನು ಇಟ್ಟು ಈ ವರದಿ "ನಿರಂಕುಶೀಕರಣದ ಮೊದಲ ಹಂತಗಳು ಮಾಧ್ಯಮ ಸ್ವಾತಂತ್ರ್ಯವನ್ನು ನಿರ್ಮೂಲ ಮಾಡುವುದು ಮತ್ತು ನಾಗರಿಕ ಸಮಾಜವನ್ನು ಮೊಟಕುಗೊಳಿಸುವುದನ್ನು ಒಳಗೊಂಡಿರುತ್ತವೆ" ಎಂದು ವಾದಿಸುತ್ತದೆ. "..ಪತ್ರಿಕಾ ಸ್ವಾತಂತ್ರ್ಯದಲ್ಲಿ ತೀವ್ರ ಕುಸಿತದೊಂದಿಗೆ ಹೆಚ್ಚುತ್ತಿರುವ ನಾಗರಿಕ ಸಮಾಜದ ದಮನ ಪ್ರಧಾನಿ ನರೇಂದ್ರ ಮೋದಿಯವರ ಪ್ರಸ್ತುತ ಹಿಂದೂ–ರಾಷ್ಟ್ರೀಯವಾದಿ ಆಳ್ವಿಕೆಯೊಂದಿಗೆ ತಳುಕು ಹಾಕಿಕೊಂಡಿದೆ" ಎಂದು ವರದಿ ಸ್ಪಷ್ಟವಾಗಿಯೇ ಹೇಳಿದೆ.

'ಎಕನಾಮಿಸ್ಟ್ ಇಂಟೆಲಿಜೆನ್ಸ್ ಯೂನಿಟ್' ನ 'ಪ್ರಜಾಪ್ರಭುತ್ವ ಸೂಚ್ಯಂಕ'ದಲ್ಲಿ ಕೂಡ ಭಾರತದ ಸ್ಥಾನದಲ್ಲಿ ತೀವ್ರ ಕುಸಿತ ಉಂಟಾಗಿದೆ. ಇದು 2014 ರಲ್ಲಿ 167 ದೇಶಗಳಲ್ಲಿ 27 ನೇ ಸ್ಥಾನದಿಂದ 2020 ರಲ್ಲಿ 53 ನೇ ಸ್ಥಾನಕ್ಕೆ, 26 ಸ್ಥಾನಳಷ್ಟು ಕೆಳಕ್ಕೆ ಕುಸಿದಿದೆ. ಆದಾಗ್ಯೂ, ಮೋದಿ ಸರ್ಕಾರವು ಸಂಸತ್ತಿನಲ್ಲಿ, ಇದು ತೀರಾ ಕ್ಷುಲ್ಲಕ ಮತ್ತು ತುಂಬಾ ಸೂಕ್ಷ್ಮ ಎನ್ನುತ್ತ ಈ ಕುರಿತ ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಎಂದು ಸಿ.ಸಿ.ಜಿ. ಖೇದ ವ್ಯಕ್ತಪಡಿಸಿದೆ.

"ಭಾರತವು ಭಿನ್ನಾಭಿಪ್ರಾಯವನ್ನು ಅಪರಾಧೀಕರಿಸಲು ಮತ್ತು ಆಡಳಿತದ ವಿರುದ್ಧ ನಿಲ್ಲುವ ಕಾರ್ಯಕರ್ತರು, ಮಾಧ್ಯಮ ವ್ಯಕ್ತಿಗಳು ಮತ್ತು ವಿರೋಧ ಪಕ್ಷದ ರಾಜಕಾರಣಿಗಳ ವಿರುದ್ಧ ದೇಶದ್ರೋಹ ಮತ್ತು ಭಯೋತ್ಪಾದನೆಗೆ ಸಂಬಂಧಿಸಿದ ಕಾನೂನುಗಳನ್ನು ಬಳಸುವುದಕ್ಕಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿದೆ. ಮಾನವ ಹಕ್ಕುಗಳ ಉಲ್ಲಂಘನೆಗಳು ಕ್ಷಿಪ್ರಗತಿಯಲ್ಲಿ ನಡೆಯುತ್ತಿವೆ ಮತ್ತು ಚುನಾವಣಾ ಆಯೋಗ ಮತ್ತು ನ್ಯಾಯಾಂಗದಂತಹ ಸಾಂವಿಧಾನಿಕ ಸಂಸ್ಥೆಗಳು ನಿವೃತ್ತಿಯ ನಂತರದ ಆಮಿಷಗಳು, ಮತ್ತು ಬೆದರಿಕೆಗಳು ಸೇರಿದಂತೆ ಎಲ್ಲಾ ರೀತಿಯ ವಿಧಾನಗಳಿಂದ ದುರ್ಬಲಗೊಳಿಸಲ್ಪಟ್ಟಿವೆ ಮತ್ತು ಸತ್ವಹೀನಗೊಳಿಸಲ್ಪಟ್ಟಿವೆ, "ಎಂದು ಸಿ.ಸಿ.ಜೆ. ತನ್ನ ಹೇಳಿಕೆಯಲ್ಲಿ ಕಳವಳ ವ್ಯಕ್ತಪಡಿಸಿದೆ.

ಘೋರ ಅಪಾಯವನ್ನು ಸೂಚಿಸುವ ಈ ಸನ್ನಿವೇಶಗಳನ್ನು ಸರ್ವಶಕ್ತಿಯಿಂದ ಹಿಂದೊತ್ತಬೇಕಾಗಿದೆ ಎಂದು ಹೇಳಿರುವ ಸಿ.ಸಿ.ಜಿ, ಈ ಸವಾಲುಗಳನ್ನು ಜಾಗರೂಕ ನಾಗರಿಕ ಸಮಾಜ, ಮಾಧ್ಯಮಗಳು, ರಾಜಕೀಯ ಪ್ರತಿಪಕ್ಷಗಳು, ಜನಾಂದೋಲನಗಳು ಮತ್ತು ಚುನಾವಣಾ ಆಯೋಗ ಮತ್ತು ನ್ಯಾಯಾಂಗದಂತಹ ಸಾಂವಿಧಾನಿಕ ಸಂಸ್ಥೆಗಳು ಪುನಶ್ಚೇತನ ಪಡೆದು ಎದುರಿಸಬೇಕು ಎಂದು ಹೇಳಿದೆ. "ಅಪಾಯಕ್ಕೆ ಒಡ್ಡಲ್ಪಟ್ಟಿರುವುದು ಬಡವರು ಮತ್ತು ಸೌಲಭ್ಯವಂಚಿತ ಜನವಿಭಾಗಗಳು ಮತ್ತು ಜೀವನ ಮತ್ತು ಸ್ವಾತಂತ್ರ್ಯ ಹಾಗೂ ಸಂವಿಧಾನದ ಅಡಿಯಲ್ಲಿ ಭಾರತದ ಜನರು ಕಷ್ಟಪಟ್ಟು ಗೆದ್ದ ಹಕ್ಕಗಳೇ" ಎಂದು ಈ ನಿವೃತ್ತ ಉನ್ನತಾಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಕಾಶ್ಮೀರ: ನಾಗರಿಕರನ್ನು ಮಾನವ ಗುರಾಣಿಗಳಾಗಿ ಬಳಸುತ್ತಿರುವ ಆರೋಪ ಬರುತ್ತಿರುವುದು ದುರದೃಷ್ಟಕರ–ತರಿಗಾಮಿ

ಕಾಶ್ಮೀರದಲ್ಲಿ, ಶ್ರೀನಗರದ ಬಳಿ ಹೈದರ್‌ಪೊರಾದಲ್ಲಿ ನವಂಬರ್ 15ರಂದು ನಡೆದ ಎನ್‌ಕೌಂಟರ್ ನಲ್ಲಿ ನಾಲ್ಕು ಉಗ್ರಗಾಮಿಗಳು ಹತರಾಗಿದ್ದಾರೆ ಎಂದು ಜಮ್ಮು–ಕಾಶ್ಮೀರ ಪೋಲಿಸ್ ತಿಳಿಸಿದ್ದರು.. ಅವರ ಶವಗಳನ್ನು, ಕಾನೂನು ವ್ಯವಸ್ಥೆಯ ಸಮಸ್ಯೆಯಾಗದಿರಲೆಂದು ಉತ್ತರ ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿ ಹೂಳಲಾಗಿದೆ ಎಂದೂ ವರದಿಯಾಗಿದೆ. ಆದರೆ ಅವರಲ್ಲಿ ಇಬ್ಬರ ಸಂಬಂಧಿಕರು ಅವರು ಉಗ್ರಗಾಮಿಗಳಲ್ಲ, ಅಥವ ಭಯೋತ್ಪಾದಕರ ಬೆಂಬಲಿಗರಲ್ಲ, ತಮಗೆ ನ್ಯಾಯ ಬೇಕು ಅವರ ಶವಗಳನ್ನು ಸೂಕ್ತ ಅಂತಿಮ ಸಂಸ್ಕಾರಗಳನ್ನು ನಡೆಸಲು ತಮಗೆ ಕೊಡಬೇಕು ಎಂದು ನವಂಬರ್ 17ರಂದು ಶ್ರೀನಗರದ ಪ್ರೆಸ್ ಎಂಕ್ಲೇವ್‌ನಲ್ಲಿ ಪ್ರತಿಭಟನೆ ನಡೆಸಿದ್ದಾರೆ, ಈ ಕುರಿತು ಅವರು ಜಮ್ಮು–ಕಾಶ್ಮೀರದ ಉಪರಾಜ್ಯಪಾಲರನ್ನು ವಿನಂತಿಸಿಕೊಂಡಿದ್ದಾರೆ ಎಂದು ವರದಿಯಾಗಿದೆ.

ಹತ್ಯೆಯಾದ ಅಲ್ತಾಫ್ ಅಹ್ಮದ್ ಮತ್ತು ಮುದಸಿರ್ ಗುಲ್ ಉಗ್ರಗಾಮಿಗಳಲ್ಲ. ಅವರನ್ನು ಮಾನವ ಗುರಾಣಿಗಳನ್ನಾಗಿ ಬಳಸಲಾಗಿದೆ ಎಂಬ ಸಂದೇಹ ಉಂಟಾಗಿದೆ. ನಿಶ್ಶಸ್ತ್ರ ನಾಗರಿಕರನ್ನು ಮಾನವ ಗುರಾಣಿಗಳನ್ನಾಗಿ ಬಳಸಿಕೊಳ್ಳುವುದು ಅತ್ಯಂತ ಆಘಾತಕಾರಿ ಸಂಗತಿ. ಆದ್ದರಿಂದ ಈ ಬಗ್ಗೆ ಒಂದು ನ್ಯಾಯಾಂಗ ತನಿಖೆ ನಡೆಸಬೇಕು, ಅವರ ಹೆಣಗಳನ್ನು ಸಂಬಂಧಿಕರು ಕೇಳುತ್ತಿರುವಂತೆ ಸರಿಯಾದ ಅಂತಿಮ ಸಂಸ್ಕಾರ ನಡೆಸಲಿಕ್ಕಾಗಿ ಕೊಡಬೇಕು ಎಂದು ರಾಜ್ಯದ ಹಿರಿಯ ಸಿಪಿಐ(ಎಂ) ಮುಖಂಡ ಮಹಮ್ಮದ್ ಯುಸುಫ್ ತರಿಗಾಮಿ ಆಡಳಿತವನ್ನು ಆಗ್ರಹಿಸಿದ್ದಾರೆ. ಯಾವ ಸನ್ನಿವೇಶದಲ್ಲಿ ಈ ಹತ್ಯೆಗಳು ನಡೆದಿವೆ ಎಂಬುದರ ಆಮೂಲಾಗ್ರ ತನಿಖೆ ನಡೆಸಬೇಕಾಗಿದೆ ಎಂಧೂ ಅವರು ಹೇಳಿದ್ದಾರೆ.


ಕಾಶ್ಮೀರದಲ್ಲಿ ಕಾನೂನಿನ ಆಳ್ವಿಕೆಯನ್ನು ರಾಜಾರೋಷವಾಗಿ ಉಲ್ಲಂಘಿಸಲಾಗುತ್ತಿದೆ. ಇದು ಅತ್ಯಂತ ದುರದೃಷ್ಟಕರ. ಮನಬಂದಂತೆ ಜನಗಳನ್ನು ಬಂಧಿಸುವುದು, ಯುವಜನರನ್ನು ಕರಾಳ ಕಾಯ್ದೆಗಳ ಅಡಿಯಲ್ಲಿ ಹಿಡಿದು ಹಾಕುವುದು ಮತ್ತು ಈಗ ನಾಗರಿಕರನ್ನು ಮಾನವ ಗುರಾಣಿಗಳಾಗಿ ಬಳಸುವ ಆರೋಪ, ಕೆಟ್ಟ ಪರಿಸ್ಥಿತಿ ಮತ್ತಷ್ಟು ಹೊಲಸಾಗುತ್ತಿದೆ ಎಂದು ತರಿಗಾಮಿ ಖೇದ ವ್ಯಕ್ತಪಡಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿಗಳಾದ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಅಧ್ಯಕ್ಷ ಫಾರುಖ್ ಅಬ್ದುಲ್ಲ ಕೂಡ ಉಪರಾಜ್ಯಪಾಲರು ಮಧ್ಯಪ್ರವೇಶಿಸಿ ನಿಷ್ಪಕ್ಷಪಾತ ತನಿಖೆಗೆ ಮತ್ತು ಹತ್ಯೆಯಾದ ಸಂಬಂಧಿಕರಿಗೆ ಹಿಂದಿರುಗಿಸಬೇಕು ಎಂದು ಆಗ್ರಹಿಸಿದ್ದಾರೆ. ಮತ್ತೊಬ್ಬರು ಮಾಜಿ ಮುಖ್ಯಮಂತ್ರಿ ಮೆಹಬೂಬ ಮುಫ್ತಿಯವರು ಕೂಡ ಈ ಹತ್ಯೆಗಳ ಬಗ್ಗೆ ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದಾರೆ.

ಉಪರಾಜ್ಯಪಾಲರು ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶ ನೀಡಿದ್ದಾರೆ ಎಂದು ಇತ್ತೀಚಿನ ವರದಿಗಳು ತಿಳಿಸಿವೆ.

ಈ ನಡುವೆ, 'ಎನ್‌ಕೌಂಟರ್'ನಲ್ಲಿ ಸತ್ತಿರುವ ಇನ್ನೊಬ್ಬರು, ಅಮಿರ್ ಅಹ್ಮದ್ ಮಗ್ರೆ ಕೂಡ ನಿಶ್ಶಸ್ತ್ರ ನಾಗರಿಕರು, ಪೋಲೀಸರು ಹೇಳುವಂತೆ ಉಗ್ರಗಾಮಿಯಲ್ಲ ಎಂದು ಖಚಿತ ಪಟ್ಟಿದೆ. ಆತನ ತಂದೆ ಅಬ್ದುಲ್ ಲತೀಫ್ ಮಗ್ರೆ ಒಬ್ಬ ರಾಜ್ಯ ಸಾಹಸ ಪ್ರಶಸ್ತಿ ವಿಜೇತ. ಅಮಿರ್ ಅಹ್ಮದ್‌ನ ಶವವನ್ನು ಕೂಡ ಆತನ ಸಂಬಂಧಿಕರಿಗೆ ಕೊಡಬೇಕು ಎಂದು ತರಿಗಾಮಿ ಆಗ್ರಹಿಸಿದ್ದಾರೆ.

ಈ ನಡುವೆ ರಾಜ್ಯ ಪ್ರಮುಖ ರಾಜಕೀಯ ಪಕ್ಷಗಳ ಮೈತ್ರಿಕೂಟವಾದ ಗುಪ್ಕರ್ ಘೋಷಣೆಯ ಜನತಾ ಮೈತ್ರಿಕೂಟ (ಪಿಎಜಿಡಿ) ರಾಷ್ಟ್ರಪತಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ, ಇಂತಹ ಘಟನೆಗಳು ಜನಗಳು ಮತ್ತು ಆಡಳಿತದ ನಡುವಿನ ಕಂದರವನ್ನು ಇನ್ನಷ್ಟು ಹೆಚ್ಚಿಸುತ್ತವೆ, ಈ ಪ್ರದೇಶದ ಆಡಳಿತ ರಾಷ್ಟ್ರಪತಿಗಳ ಹೆಸರಿನಲ್ಲಿ ನಡೆಯುತ್ತಿರುವುದರಿಂದ ಅವರು ಮಧ್ಯಪ್ರವೇಶಿಸಿ ಸಂತ್ರಸ್ತರಿಗೆ ನ್ಯಾಯ ದೊರಕಿಸಬೇಕು ಎಂದು ಆಗ್ರಹಿಸಿದೆ.










'ಜೈಭೀಮ್' ಖ್ಯಾತಿಯ ಸೂರಿಯ ಅವರಿಂದ ರೂ.15 ಲಕ್ಷ ಕೊಡುಗೆ

ವ್ಯಾಪಕ ಪ್ರಶಂಸೆ ಗಳಿಸಿರುವ 'ಜೈಭೀಮ್' ಚಿತ್ರದ ನಟ ಮತ್ತು ನಿರ್ಮಾಪಕ ಸೂರಿಯ ಅವರು ಪೋಲೀಸರ ಚಿತ್ರಹಿಂಸೆಗೆ ಬಲಿಯಾದ ರಾಜಕಣ್ಣುರವರ ಪತ್ನಿ ಪಾರ್ವತಿ ಅಮ್ಮಾ???ಗೆ 15ಲಕ್ಷ ರೂ.ನ ಒಂದು ಚೆಕ್ಕನ್ನು ನವಂಬರ್ 16ರಂದು ನೀಡಿದರು. ಈ ವೇಳೆಯಲ್ಲಿ ತಮಿಳುನಾಡಿನ ಹಿರಿಯ ರಾಜಕಾರಣಿ ಮತ್ತು ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಜಿ.ರಾಮಕೃಷ್ಣನ್ ಮತ್ತು ರಾಜ್ಯ ಕಾರ್ಯದರ್ಶಿ ಕೆ.ಬಾಲಕೃಷ್ಣನ್ ಹಾಜರಿದ್ದರು. ಅವರು ಪಕ್ಷದ ತಮಿಳುನಾಡು ರಾಜ್ಯಸಮಿತಿಯ ಪರವಾಗಿ ಸೂರಿಯ ಅವರಿಗೆ ಧನ್ಯವಾದ ಅರ್ಪಿಸಿದರು. ಈ ಚಿತ್ರದಲ್ಲಿನ ಅಂಶಗಳನ್ನೆತ್ತಿ ಜಾತ್ಯಂಧರು ಮತ್ತು ಬಲಪಂಥೀಯರ ದಾಳಿಗಳ ವಿರುದ್ಧ ಪಕ್ಷ ಅವರ ಬೆಂಬಲಕ್ಕೆ ನಿಲ್ಲುತ್ತದೆ ಎಂದು ಅವರು ಹೇಳಿದರು.

ತಮಿಳುನಾಡು ರಾಜ್ಯಸರಕಾರ, ಪಿಎಂಕೆ ಮತ್ತು ಬಲಪಂಥೀಯ ಗುಂಪುಗಳ ಬೆದರಿಕೆಯ ನಂತರ, ಸೂರಿಯ ರವರ ನಿವಾಸಕ್ಕೆ ಭದ್ರತೆ ಒದಗಿಸಿದ್ದಾರೆ ಎಂದು ವರದಿಯಾಗಿದೆ.

ನೋಟುರದ್ಧತಿಯ ಪಿಡುಗು: ಸರ್ಕಾರದ ಅಜ್ಞಾನ + ದುರಹಂಕಾರದ ದುಷ್ಫಲ



ನೋಟು ರದ್ದತಿಯನ್ನು ಆದೇಶಿಸಿದ ಮೋದಿ ಸರ್ಕಾರವು ಜನರ ಕಷ್ಟಗಳ ಬಗ್ಗೆ ತೋರಿದಷ್ಟು ಅಸಡ್ಡೆಯನ್ನು ಯಾರಾದರೂ ಹೇಗೆ ತೋರಲು ಸಾಧ್ಯವೆ? ಇದಕ್ಕೆ ಉತ್ತರ "ಆಘಾತ ಮತ್ತು ಭಯ ಭಕ್ತಿ" ಉಂಟುಮಾಡುವ ಬಯಕೆ ಮತ್ತು ಸರಕಾರ ಇಷ್ಟೊಂದು ಯಾತನೆ ಉಂಟು ಮಾಡುತ್ತಿದ್ದರೆ, ಅದು ಯಾವುದೋ ಉನ್ನತ ಗುರಿಸಾಧನೆಗಾಗಿ ಎಂದು ಜನ ಎಷ್ಟು ಹೆಚ್ಚು ಬಳಲುತ್ತಾರೋ, ಅಷ್ಟು ಹೆಚ್ಚಿನ ಮಟ್ಟದಲ್ಲಿ ಭಾವಿಸುತ್ತಾರೆ ಎಂಬ ಅವರ ನಂಬಿಕೆಯಲ್ಲಿ ಇದೆ. ಸರ್ಕಾರದ ಅಜ್ಞಾನ, ದುರಹಂಕಾರ ಮತ್ತು "ಆಘಾತ ಮತ್ತು ಭಯ ಭಕ್ತಿ" ಉಂಟುಮಾಡುವ ಬಯಕೆ– ಇವೆಲ್ಲಾ ಒಟ್ಟಾದರೆ ಸಾಕಷ್ಟು ಮಾರಕವಾಗಬಲ್ಲದು ಎಂಬುದನ್ನು ಭಾರತದ ಜನರು ಬಲು ದೊಡ್ಡ ಬೆಲೆ ತೆತ್ತು ಕಲಿತಿದ್ದಾರೆ.

ಪ್ರೊ.ಪ್ರಭಾತ್ ಪಟ್ನಾಯಕ್   **ಅನು: ಕೆ.ಎಂ. ನಾಗರಾಜ್**

ನವೆಂಬರ್ 8, 2016 ರಂದು ಮೋದಿ ಸರ್ಕಾರವು ಆದೇಶಿಸಿದ 500 ಮತ್ತು 1000 ರೂ.ಗಳ ಮುಖಬೆಲೆಯ ಕರೆನ್ಸಿ ನೋಟುಗಳ ರದ್ದತಿಯ ಕ್ರಮವು, ಸ್ವಾತಂತ್ರ್ಯಾನಂತರದ ಭಾರತದ ಇತಿಹಾಸದಲ್ಲೇ ತನ್ನ ಘೋಷಿತ ಉದ್ದೇಶಗಳನ್ನು ಸಾಧಿಸುವಲ್ಲಿ ಸಂಪೂರ್ಣವಾಗಿ ವಿಫಲಗೊಂಡ ಮತ್ತು ಜನರಿಗೆ ಅತ್ಯಂತ ವಿನಾಶಕಾರಿಯಾಗಿ ಪರಿಣಮಿಸಿದಂಥಹ ಆರ್ಥಿಕ ಕ್ರಮ ಮತ್ತೊಂದಿಲ್ಲ. ತನ್ನ ಉದ್ದೇಶಗಳನ್ನು ಸರ್ಕಾರವು ಸಾಧಿಸಲಿಲ್ಲ ಎಂಬುದೇನೂ ಅನಿರೀಕ್ಷಿತವಾಗಿರಲಿಲ್ಲ. ಮಾತ್ರವಲ್ಲ, ಅದು ಮೂರ್ಖತನದ ಪರಮಾವಧಿ ಎಂಬುದೂ ಸಹ ಪ್ರತಿಯೊಬ್ಬ ಅರ್ಥಶಾಸ್ತ್ರಜ್ಞನಿಗೂ ಗೊತ್ತಿತ್ತು. ಆದ್ದರಿಂದಲೇ ಎಲ್ಲರೂ ಅದನ್ನು ವಿರೋಧಿಸಿದರು. ಬೆರಳೆಣಿಕೆಯ ಕೆಲವು ಹೊಗಳುಭಟ್ಟರು ಮಾತ್ರ ಮೋದಿಯನ್ನು ಇನ್ನಿಲ್ಲದಂತೆ ಕೊಂಡಾಡಿದರು.

ಕಪ್ಪು ಹಣದ ನಿರ್ಮೂಲನೆ, ನಕಲಿ ನೋಟುಗಳ ಹುಟ್ಟಡಗಿಸುವುದು ಮತ್ತು ಭಯೋತ್ಪಾದಕರಿಗೆ ಒದಗುವ ಹಣದ ಮೂಲದ ನಾಶ ಎಂಬ ಮೂರು ಉದ್ದೇಶಗಳನ್ನು ಸರ್ಕಾರ ಹೊಂದಿತ್ತು. ನಕಲಿ ನೋಟುಗಳ ನಿರ್ಮೂಲನೆ ಮತ್ತು ಭಯೋತ್ಪಾದನೆಯ ಅಂತ್ಯ, ಇವು ಒಗ್ಗರಣೆಯ ಮಾತುಗಳು ಎಂಬುದೂ ಸಹ ಎಲ್ಲರಿಗೂ ತಿಳಿದಿತ್ತು. ಭಾರತದ ಅಂಕಿ–ಸಂಖ್ಯೆಗಳ ಸಂಸ್ಥೆಯು ಸ್ವಲ್ಪ ಸಮಯದ ಹಿಂದೆ ಕೈಗೊಂಡ ಒಂದು ಅಧ್ಯಯನದ ಪ್ರಕಾರ, ಚಲಾವಣೆಯಲ್ಲಿರುವ ಅಸಲಿ ಕರೆನ್ಸಿಯ (ನೋಟುಗಳ) ನಡುವೆ ನುಸುಳಿರುವ ನಕಲಿ ಕರೆನ್ಸಿಯ (ಖೋಟಾ ನೋಟುಗಳ) ಪ್ರಮಾಣವು ಒಟ್ಟು ಕರೆನ್ಸಿಯ ಪ್ರಮಾಣಕ್ಕೆ ಹೋಲಿಸಿದರೆ, ನಗಣ್ಯ ಎಂಬ ಒಂದು ಅಂದಾಜು ಸರ್ಕಾರದ ಬಳಿ ಇತ್ತು. ಆದ್ದರಿಂದ, ಅಲ್ಲೊಂದು ಇಲ್ಲೊಂದು ಎನ್ನುವಷ್ಟು ಕಡಿಮೆ ಪ್ರಮಾಣದ ನಕಲಿ ಕರೆನ್ಸಿಯನ್ನು ತೊಡೆದುಹಾಕುವ ಸಲುವಾಗಿ ದೇಶದ ಚಲಾವಣೆಯ 85% ಕರೆನ್ಸಿಯನ್ನು ಹಠಾತ್ತಾಗಿ ರದ್ದು ಮಾಡಿದ ಕ್ರಮದ ಪರವಾಗಿ ಮಾಡಿದ ವಾದವನ್ನು ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲ.

ಅದೇ ರೀತಿಯಲ್ಲಿ, 500 ಮತ್ತು 1000 ರೂ.ಗಳ ನೋಟುಗಳನ್ನು ರದ್ದು ಮಾಡಿದರೆ ಭಯೋತ್ಪಾದನೆಯತ್ತ ಹಣದ ಹರಿವನ್ನು ನಿಲ್ಲಿಸಬಹುದು ಅಥವಾ ಭಯೋತ್ಪಾದನೆಯನ್ನು ತಾತ್ಕಾಲಿಕವಾಗಿಯಾದರೂ ನಿಲ್ಲಿಸಬಹುದು ಎಂಬುದನ್ನೂ ಸಹ ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲ. ಏಕೆಂದರೆ, ಭಯೋತ್ಪಾದನೆಗೆ ವಿವಿಧ ಮಾರ್ಗಗಳ ಮೂಲಕ ಹಣ ಹರಿಯುತ್ತದೆ. ಹಾಗಾಗಿ, ಕಪ್ಪು ಹಣವನ್ನು ತೊಡೆದುಹಾಕುವುದೇ ನೋಟು ರದ್ದತಿಯ ನಿಜವಾದ ಉದ್ದೇಶವಾಗಿತ್ತು. ಆದ್ದರಿಂದ, ನೋಟು ರದ್ದತಿಯ ಮೂಲಕ ಕಪ್ಪು ಹಣವನ್ನು ತೊಡೆದು ಹಾಕಬಯಸಿದ ಮೋದಿ ಸರ್ಕಾರವು ಅರ್ಥವ್ಯವಸ್ಥೆಯ ಕಪ್ಪು ಆಯಾಮದ ಬಗ್ಗೆ ಮಾತ್ರವಲ್ಲ, ಅರ್ಥವ್ಯವಸ್ಥೆಯ ಬಗ್ಗೆಯೇ ಹೊಂದಿರುವ ತಿಳುವಳಿಕೆಯ ಕೊರತೆಯನ್ನು ಬಯಲು ಮಾಡುತ್ತದೆ.

ಕಪ್ಪು ಹಣದ ಸಂಬಂಧವಾಗಿ ಮೋದಿ ಸರ್ಕಾರವು ಹೊಂದಿರುವ ತಿಳುವಳಿಕೆಯು ಬಾಲಿವುಡ್ ಚಲನಚಿತ್ರಗಳಿಂದ ಪಡೆದ ತಿಳುವಳಿಕೆಯೇ. ಅಂದರೆ, ಸಿನೆಮಾಗಳಲ್ಲಿ ತೋರಿಸುವ ರೀತಿಯಲ್ಲಿ ಕಪ್ಪು ಹಣವನ್ನು ಅಥವಾ ಅಕ್ರಮವಾಗಿ ಸಂಪಾದಿಸಿದ ಹಣವನ್ನು (ಅಂದರೆ, ಕರೆನ್ಸಿ ನೋಟುಗಳನ್ನು) ತಲೆದಿಂಬುಗಳ ಒಳಗೆ ಅಥವಾ ಹಾಸಿಗೆಗಳ ಕೆಳಗೆ ಇರಿಸಲಾದ ಸೂಟ್ ಕೇಸ್‌ಗಳಲ್ಲಿ ಅಡಗಿಸಿಟ್ಟಿರುತ್ತಾರೆ. ನಾಯಿ ಮಾರಿದ ಹಣ ಬೌಬೌ ಎನ್ನುವುದಿಲ್ಲ ಎಂಬಂತೆ, "ಕಪ್ಪು ಹಣ" ಎಂಬುದಕ್ಕೆ ಒಂದು ಪ್ರತ್ಯೇಕ ರೂಪವಿಲ್ಲ. ಕೆಲವು ಕಾನೂನು ಬಾಹಿರ ಚಟುವಟಿಕೆಗಳ ಮೂಲಕ ಅಥವಾ ಅಕ್ರಮವಾಗಿ ಸಂಪಾದಿಸಿದ ಹಣವನ್ನು ಅಥವಾ ಸಂಪಾದನೆಯ ಮೇಲೆ ಕೊಡಬೇಕಾದ ತೆರಿಗೆಯಿಂದ ತಪ್ಪಿಸಿಕೊಂಡ ವರಮಾನವನ್ನು "ಕಪ್ಪು ಹಣ" ಎನ್ನುತ್ತಾರೆ. ಯಾವುದೇ ಆರ್ಥಿಕ ಚಟುವಟಿಕೆಗೂ ಹಣದ ಅಗತ್ಯ ಇದ್ದೇ ಇರುತ್ತದೆ ಮತ್ತು ಅದಕ್ಕೆ ಬಳಕೆಯಾದದ್ದು ಕಪ್ಪು ಹಣವೂ ಆಗಿರಬಹುದು ಮತ್ತು ಅದು ತಲೆದಿಂಬುಗಳಲ್ಲಿ ಅಥವಾ ಸೂಟ್ ಕೇಸ್‌ಗಳಲ್ಲಿ ನಿಷ್ಕ್ರಿಯವಾಗಿ ಉಳಿಯುವುದಿಲ್ಲ.

ತಮ್ಮ ಬಳಿ ಇದ್ದ ರದ್ದಾದ ಕರೆನ್ಸಿ ನೋಟುಗಳನ್ನು ಹೊಸ ಕರೆನ್ಸಿಯೊಂದಿಗೆ ಬದಲಾಯಿಸಿಕೊಳ್ಳಲು ಬ್ಯಾಂಕುಗಳಿಗೆ ಬಾರದೆ ಇದ್ದ ಕೆಲವರಿಗೆ ಸೇರಿದ ಒಂದಿಷ್ಟು ಕಪ್ಪು ಹಣವನ್ನು ಪತ್ತೆಹಚ್ಚಬಹುದು ಎಂಬ ನಿರೀಕ್ಷೆಯಲ್ಲಿ ಮೋದಿ ಸರ್ಕಾರವು ಒಂದು ವೇಳೆ ಯಶಸ್ವಿಯಾಗಿದ್ದರೂ ಸಹ, ಅಕ್ರಮ ಚಟುವಟಿಕೆಗಳನ್ನು ತಪ್ಪಿಸಲಾಗುತ್ತಿರಲಿಲ್ಲ. ಏಕೆಂದರೆ, ಹಣದ ಬಳಕೆಯನ್ನು ಒಂದು ಘೋಷಿತ ಆರ್ಥಿಕ ಚಟುವಟಿಕೆಯಿಂದ ಇನ್ನೊಂದು ಅಘೋಷಿತ ಆರ್ಥಿಕ ಚಟುವಟಿಕೆಗೆ ವರ್ಗಾಯಿಸಲು ಸಾಧ್ಯವಿದೆ. ಅಂದರೆ, ಹಣವು "ಸಕ್ರಮ" ಆರ್ಥಿಕ ಚಟುವಟಿಕೆಯಿಂದ "ಅಕ್ರಮ" ಆರ್ಥಿಕ ಚಟುವಟಿಕೆಗೆ ಅಥವಾ ಘೋಷಿತವಲ್ಲದ ಆರ್ಥಿಕ ಚಟುವಟಿಕೆಗೆ ಬದಲಾಗುತ್ತಿತ್ತು. ಇದು ಹೆಚ್ಚೆಂದರೆ, ಹಣದ ಅಭಾವವನ್ನು ಉಂಟುಮಾಡುತ್ತಿತ್ತು ಮತ್ತು ಆದ್ದರಿಂದಾಗಿ ಸ್ವಲ್ಪ ಮಟ್ಟಿನ ಆರ್ಥಿಕ ಹಿಂಜರಿತವೂ ಆಗುತ್ತಿತ್ತು. "ಕಪ್ಪು" ಹಣವಂತೂ ನಿಜಕ್ಕೂ ನಿರ್ಮೂಲವಾಗುತ್ತಿರಲಿಲ್ಲ.

ತಮ್ಮ ಬಳಿ ಇರುವ ರದ್ದಾದ ಕರೆನ್ಸಿಯು ಹೆಚ್ಚಿನ ಪ್ರಮಾಣದೊಂದಿಗೆ ಬ್ಯಾಂಕಿಗೆ ಹೋದರೆ ಸಿಕ್ಕಿಹಾಕಿಕೊಳ್ಳುವ ಭಯದಿಂದ "ಕಪ್ಪು" ಹಣ ಇಟ್ಟುಕೊಂಡವರು ಅದನ್ನು "ಬಿಳಿ" ಹಣದೊಂದಿಗೆ ವಿನಿಮಯ ಮಾಡಿಕೊಳ್ಳುವುದು ಸಾಧ್ಯವಿಲ್ಲ, ಏಕೆಂದರೆ, ಹಾಗೆ ಮಾಡಲು ಅವರು ತುಂಬಾ ಹೆದರುತ್ತಾರೆ ಎಂಬುದು ಸರ್ಕಾರದ ನಿರೀಕ್ಷೆಯಾಗಿತ್ತು. ವಾಸ್ತವವಾಗಿ, ಹೊಸ ನೋಟುಗಳಾಗಿ ಬದಲಾಯಿಸಿಕೊಳ್ಳಲು ರದ್ದಾದ 99% ಕರೆನ್ಸಿ ನೋಟುಗಳು ಬ್ಯಾಂಕುಗಳಿಗೆ ಮರಳಿದವು. ನೋಟು ರದ್ದತಿಯ ಸಂಪೂರ್ಣ ವೈಫಲ್ಯವನ್ನು ಇಷ್ಟು ಸ್ಫುಟವಾಗಿ ತೋರಿಸುವುದು ಬೇರೆ ಯಾವ ಸಂಗತಿಯಿಂದಲೂ ಸಾಧ್ಯವಿಲ್ಲ.

ಕರೆನ್ಸಿಯನ್ನು ಚಲಾವಣೆಗೆ ನೀಡಿದಾಗ ಅದು ಭಾರತೀಯ ರಿಸರ್ವ್ ಬ್ಯಾಂಕ್‌ನ ಹೊಣೆಗಾರಿಕೆಯಾಗುತ್ತದೆ. ರದ್ದಾದ ಕರೆನ್ಸಿಯಲ್ಲಿ ಒಂದು ನಿರ್ದಿಷ್ಟ ಪ್ರಮಾಣದ ಕರೆನ್ಸಿಯು (100 ರೂ. ಎಂದುಕೊಳ್ಳೋಣ) ಬದಲಾವಣೆಗಾಗಿ ಒಂದು ವೇಳೆ ಬರದಿದ್ದರೆ, ಆರ್‌ಬಿಐನ ಬ್ಯಾಲೆನ್ಸ್ ಶೀಟ್‌ನಲ್ಲಿ 100 ರೂ.ಗಳ ಹೊಣೆಗಾರಿಕೆ ನಶಿಸುತ್ತದೆ/ ಇಲ್ಲವಾಗುತ್ತದೆ. ಅಷ್ಟು ಮೊತ್ತದ ಹೊಸ ಹಣವನ್ನು ಮುದ್ರಿಸುವ ಮೂಲಕ ಹೊಸ ಹಣವನ್ನು ಜನರಿಗೆ ಸುಮ್ಮನೇ ವಿತರಿಸಬಹುದು ಎಂಬ ಲೆಕ್ಕಾಚಾರ ಮಂಡಿಸುವ ಮಟ್ಟಿಗೆ ಬಿಜೆಪಿ ವಕ್ತಾರರು ಹೋಗಿದ್ದರು. ಕೂಸು ಹುಟ್ಟುವ ಮುನ್ನವೇ ಕುಲಾವಿಯನ್ನೂ ಹೊಲಿಸಿಟ್ಟುಕೊಂಡಿದ್ದರು. ಆದರೆ, ರದ್ದಾದ 99% ಕರೆನ್ಸಿ ನೋಟುಗಳು ಹೊಸ ನೋಟುಗಳಾಗಿ ಬದಲಾಯಿಸಿಕೊಳ್ಳಲು ಬ್ಯಾಂಕಿಗೆ ಮರಳಿ ಬಂದಾಗ, ಈ ಲೆಕ್ಕಾಚಾರಗಳು ಎಷ್ಟು ಅಸಂಬದ್ಧವಾಗಿದ್ದವು ಎಂಬುದಷ್ಟೇ ಅಲ್ಲ, "ಕಪ್ಪು" ಹಣವನ್ನು ನಿಷ್ಕ್ರಿಯಗೊಳಿಸಿ ಅದನ್ನು ಅರ್ಥವ್ಯವಸ್ಥೆಯಿಂದಲೇ ಕಿತ್ತೆಸೆಯುವ ಲೆಕ್ಕಾಚಾರವೂ ಸಹ ಎಷ್ಟು ತಿಳಿಗೇಡಿತನದಿಂದ ಕೂಡಿತ್ತು ಎಂಬುದನ್ನು ಊಹಿಸಬಹುದಾಗಿದೆ. ಹಾಗಾಗಿ, ಈ ಇಡೀ ಪ್ರಕ್ರಿಯೆಯು ಹಳೆಯ ನೋಟುಗಳನ್ನು ಹೊಸ ನೋಟುಗಳಾಗಿ ಬದಲಾಯಿಸುವ ಒಂದು ಕೆಲಸವಾಗಿ ಪರಿಣಮಿಸಿತು. ಮತ್ತು, ಜನರಿಗೆ ಹೇಳತೀರದ ಅನಾನುಕೂಲತೆಗಳನ್ನು ತಂದೊಡ್ಡಿತು.

ಅನಾನುಕೂಲತೆಗಳ ಕತೆ ಅಷ್ಟಕ್ಕೇ ಮುಗಿಯಲಿಲ್ಲ. ಜನರು ತಮ್ಮದೇ ಹಣ ಪಡೆಯಲು ಬ್ಯಾಂಕುಗಳ ಹೊರಗೆ ಗಂಟೆಗಟ್ಟಲೆ ಸರದಿಯ ಸಾಲಿನಲ್ಲಿ ನಿಲ್ಲುವ ಯಾತನೆಯನ್ನು ಅನುಭವಿಸಿದರು. ನೋಟು ರದ್ದತಿಯು ಅನೇಕ ಜೀವಗಳನ್ನು ಬಲಿತೆಗೆದುಕೊಂಡಿತು. ಇಷ್ಟೊ ಸಾಲದೆಂಬಂತೆ, ಅದು ಅರ್ಥವ್ಯವಸ್ಥೆಯ ಮೇಲೆ ತೀವ್ರ ತರದ ದುಷ್ಪರಿಣಾಮಗಳನ್ನೂ ಬೀರಿತು. ರದ್ದು ಮಾಡಿದ 500 ಮತ್ತು 1000 ರೂ.ಗಳ ಮುಖಬೆಲೆಯ ಕರೆನ್ಸಿ ನೋಟುಗಳ ಮೌಲ್ಯವು ಚಲಾವಣೆಯಲ್ಲಿದ್ದ ಒಟ್ಟು ನಗದು ಹಣದ ಸುಮಾರು 85% ಇತ್ತು. ಅಷ್ಟೊಂದು ದೊಡ್ಡ ಪ್ರಮಾಣದ ನಗದು ಹಣದ ಚಲಾವಣೆಯನ್ನು ಇದ್ದಕ್ಕಿದ್ದಂತೆ ನಿಲ್ಲಿಸಿದಾಗ, ಅದು ಅರ್ಥವ್ಯವಸ್ಥೆಯನ್ನು ಅಲ್ಪಾವಧಿಯಲ್ಲಿ ಮತ್ತು ದೀರ್ಘಾವಧಿಯಲ್ಲಿ, ಎರಡೂ ಅವಧಿಯಲ್ಲೂ ದುರ್ಬಲಗೊಳಿಸುವ ಪರಿಣಾಮಗಳನ್ನು ಬೀರಿತು. ನೋಟು ರದ್ದತಿಯ ಮೂಲಕ ಕುಂಠಿತಗೊಂಡ ಚಲಾವಣೆಯನ್ನು ಎಂದಿನ ಸ್ಥಿತಿಗೆ ಮರಳಿಸಲು ಬ್ಯಾಂಕಿಂಗ್ ವ್ಯವಸ್ಥೆಗೆ ಸುಮಾರು ಒಂಭತ್ತು ತಿಂಗಳುಗಳ ಸಮಯ ಹಿಡಿಯಿತು. ಈ ಅವಧಿಯಲ್ಲಿ ಅರ್ಥವ್ಯವಸ್ಥೆಯು ಕರೆನ್ಸಿಯ ಕೊರತೆಯನ್ನು ಎದುರಿಸಿತು. ಪ್ರಧಾನವಾಗಿ ನಗದು ವಹಿವಾಟುಗಳನ್ನೇ ಅವಲಂಬಿಸಿದ ಕಿರು ಉತ್ಪಾದನಾ ವಲಯವು ಅದರ ತಕ್ಷಣದ ಬಲಿಪಶುವಾಗಿ ಹೀನಾಯ ಹೊಡೆತ ತಿಂದಿತು.

ನೋಟು ರದ್ದತಿಯ ಪರಿಣಾಮವಾಗಿ ರೈತರು ತಮ್ಮ ಹಿಂಗಾರು ಫಸಲನ್ನು ಮಾರುವಲ್ಲಿ ಅಪಾರ ಕಷ್ಟ–ನಷ್ಟಗಳನ್ನು ಅನುಭವಿಸಿದರು. ಮುಂದಿನ ಬೆಳೆ ತೆಗೆಯಲು ಬೇಕಾಗುವ ಬೀಜ ಮತ್ತು ರಸಗೊಬ್ಬರಗಳನ್ನು ಕೊಳ್ಳಲು ಅವರ ಬಳಿ ಹಣ/ನಗದು ಇಲ್ಲದ ಕಾರಣ, ಅವರು ಸಾಲ ಪಡೆದರು. ಅಂತೆಯೇ, ತಮ್ಮ ಉತ್ಪಾದನೆಯನ್ನು ಮಾರಲು ಸಾಧ್ಯವಾಗದ ಕೃಷಿಯೇತರ ವಲಯದ ಅನೇಕ ಕುಶಲಕರ್ಮಿಗಳು ಮತ್ತು ಕಿರು ಉತ್ಪಾದಕರು ತಮಗೆ ಬೇಕಾಗುವ ಲಾಗುವಾಡುಗಳನ್ನು ಕೊಳ್ಳಲು ಸಾಲ ಪಡೆಯಬೇಕಾಯ್ತು. ಮತ್ತು, ಅವರು ತಮ್ಮ ಕಸುಬಿಗೆ ಬೇಕಾಗುವ ಲಾಗುವಾಡುಗಳನ್ನು ಸಕಾಲದಲ್ಲಿ ಕೊಳ್ಳದೇ ತಮ್ಮ ಉತ್ಪಾದನೆಯನ್ನು ನಿಲ್ಲಿಸಿದರೆ, ಉದ್ಯೋಗವಿಲ್ಲದ ಅವರ ಕೆಲಸಗಾರರು ಮನೆಗೆ ಮರಳುತ್ತಿದ್ದರು ಮತ್ತು ನಿರುದ್ಯೋಗದ ಅವಧಿಯಲ್ಲಿ ತಮ್ಮ ಜೀವ ಉಳಿಸಿಕೊಳ್ಳಲು ಸಾಲ ತೆಗೆದುಕೊಳ್ಳಬೇಕಾಗಿತ್ತು. ಹಾಗಾಗಿ, ನೋಟು ರದ್ದತಿಯು ಕಿರು ಉತ್ಪಾದನಾ ವಲಯ ಅಥವಾ "ಅನೌಪಚಾರಿಕ ವಲಯ"ವನ್ನು ಸಾಲದ ಬಲೆಗೆ ಸಿಲುಕಿಸಿತು. ಈ ವಲಯವು, ದೇಶದ 94% ದುಡಿಮೆಗಾರರನ್ನು ಹೊಂದಿದೆ ಎಂಬುದನ್ನು ಮರೆಯುವಂತಿಲ್ಲ.

ಇಂಥಹ ಸಾಲಗಳು ಕಿರು ಉತ್ಪಾದನಾ ವಲಯದ ಮೇಲೆ ಶಾಶ್ವತ ಗಾಯ ಮಾಡಿದವು. ಉತ್ಪಾದನೆಯಲ್ಲಿ ಅಡಚಣೆ ಎದುರಾದ ಘಟಕಗಳಲ್ಲಿ, ಮಧ್ಯಂತರದ ಅವಧಿಯಲ್ಲಿ ಮಾಡಿದ ಸಾಲಗಳು ಶಾಶ್ವತ ಸಾಲಗಳಾಗಿ ಉಳಿದವು. ಉತ್ಪತ್ತಿಯನ್ನು ಸಂಗ್ರಹವಾಗಿ ಇಟ್ಟುಕೊಂಡ ಘಟಕಗಳಲ್ಲಿ ಉತ್ಪತ್ತಿಯು ಮಾರಾಟವಾಗದಿದ್ದರೂ ಸಹ, ಉತ್ಪಾದನೆಯು ಮುಂದುವರಿಯಿತಾದರೂ, ಲಾಗುವಾಡುಗಳನ್ನು ಕೊಳ್ಳಲು ಮಾಡಿದ ಸಾಲದ ಅಸಲು ತೀರಿಸಬಹುದಿತ್ತಾದರೂ ಅತಿ ಹೆಚ್ಚು ಬಡ್ಡಿ ದರದ ಸಾಲಮಾಡಿದ ಕಾರಣದಿಂದಾಗಿ ಬಡ್ಡಿ ಪಾವತಿಯೇ ಒಂದು ನೇಣು ಹಗ್ಗವಾಗಿ ಪರಿಣಮಿಸಿತು.

ಹಾಗಾಗಿ, ಕಿರು ಉತ್ಪಾದನಾ ವಲಯದ ಸಾಲವು ವಿಷ ಏರುವ ರೀತಿಯಲ್ಲಿ ಏರಿತು. ಎಲ್ಲವೂ ಚೆನ್ನಾಗಿದ್ದ ಕಾಲದಲ್ಲೇ ತಮ್ಮ ಕನಿಷ್ಠ ಅಗತ್ಯಗಳನ್ನಷ್ಟೇ ಪೂರೈಸಿಕೊಳ್ಳಲು ತಿಣುಕುತ್ತಿದ್ದ ಈ ವಲಯದಲ್ಲಿ ಸಾಲದ ಹೆಚ್ಚಳವು ಅನೇಕ ಘಟಕಗಳನ್ನು ಕಾರ್ಯಸಾಧುವಲ್ಲದ ಸ್ಥಿತಿಗೆ ತಳ್ಳಿತು. ಪರಿಣಾಮವಾಗಿ, ಉತ್ಪಾದನೆಯ ಅಲ್ಪಾವಧಿಯ ಅಡಚಣೆ ಮಾತ್ರವಲ್ಲ, ನೋಟು ರದ್ದತಿ–ಪ್ರೇರಿತ ನಗದು ಕೊರತೆಯನ್ನು ನಿಭಾಯಿಸುವ ಅಸಮರ್ಥತೆಯಿಂದಾಗಿ ಕಿರು ಉತ್ಪಾದನಾ ವಲಯವು ತನ್ನ ಕೆಲಸಗಾರರನ್ನು ದೀರ್ಘಕಾಲ ಉಳಿಸಿಕೊಳ್ಳಲಾಗದಷ್ಟು ದುರ್ಬಲವಾಗಿಯೂ ಇತ್ತು. ಈ ದೌರ್ಬಲ್ಯವು ಇಂದಿಗೂ ಮುಂದುವರೆದಿದೆ.





"ನಾಚಿಕೆಗೇಡು! ನೀವು ಇನ್ನೂ ನೋಟುರದ್ದತಿಯ ಬಗ್ಗೆ ಅಳುತ್ತಿದ್ದೀರಾ?"
ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ನೋಟು ರದ್ದತಿಯು ಉಂಟು
ಪುಟ 14 ನೋಡಿ

ನವೆಂಬರ್ 26-ಹೋರಾಟದ ವರ್ಷಾಚರಣೆ ಕರೆಗಳಿಗೆ ಬೆಂಬಲ: ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಐತಿಹಾಸಿಕ ರೈತ ಹೋರಾಟದ ಮೊದಲ ವರ್ಷಾಚರಣೆಯನ್ನು ನವಂಬರ್ 26 ರಂದು ದಿಲ್ಲಿಯ ಗಡಿಗಳಲ್ಲಿ ಅಣಿನೆರೆಸುವಿಕೆಯನ್ನು ಬಲಪಡಿಸುವ ಮೂಲಕ ಮತ್ತು ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ಪ್ರತಿಭಟನೆಯನ್ನು ನಡೆಸುವ ಮೂಲಕ ಆಚರಿಸುವ ಸಂಯುಕ್ತ ಕಿಸಾನ್ ಮೋರ್ಚಾದ ನಿರ್ಧಾರಕ್ಕೆ ಸಿಪಿಐ(ಎಂ)ನ ಸೌಹಾರ್ದ ಮತ್ತು ಬೆಂಬಲವನ್ನು ಪೊಲಿಟ್‌ಬ್ಯೂರೋ ವ್ಯಕ್ತಪಡಿಸಿದೆ. ದೊಡ್ಡ ಪ್ರಮಾಣದ ಖಾಸಗೀಕರಣದ ಮೂಲಕ ದೇಶದ ಸೊತ್ತುಗಳ ಲೂಟಿಯ ವಿರುದ್ಧ ಮತ್ತು ಕಾರ್ಮಿಕ ಸಂಹಿತೆಗಳ ರದ್ದು ಮತ್ತಿತರ ಬೇಡಿಕೆಗಳನ್ನು ಆಗ್ರಹಿಸಿ ನಡೆದ ಕಾರ್ಮಿಕ ವರ್ಗದ ಐತಿಹಾಸಿಕ ಮುಷ್ಕರದ ಮೊದಲ ವರ್ಷಾಚರಣೆಗೆ ಕೇಂದ್ರ ಕಾರ್ಮಿಕ ಸಂಘಗಳ ಕರೆಗೆ ಪೊಲಿಟ್‌ಬ್ಯೂರೋ ತನ್ನ ಬೆಂಬಲವನ್ನು ವ್ಯಕ್ತಪಡಿಸಿದೆ.

ನವಂಬರ್ 13 ಮತ್ತು 14ರಂದು ನವದೆಹಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಸಭೆಯ ನಂತರ ಪ್ರಕಟಿಸಿರುವ ಹೇಳಿಕೆಯಲ್ಲಿ ಈ ಬೆಂಬಲವನ್ನು ವ್ಯಕ್ತಪಡಿಸಿದೆ. ಹೇಳಿಕೆಯ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಪೆಟ್ರೋಲ್-ಡೀಸೆಲ್ ಬೆಲೆ ಇಳಿಕೆಯ ಅಪಹಾಸ್ಯ

ಕೇಂದ್ರ ಅಬಕಾರಿ ಸುಂಕದಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಗೆ 5 ರೂ. ಮತ್ತು ಡೀಸೆಲ್‌ಗೆ ಲೀಟರ್‌ಗೆ 10 ರೂ.ಕಡಿತ ಮಾಡಿರುವುದು ಪೆಟ್ರೋಲಿಯಂ ಉತ್ಪಾದನೆಯ ಹೆಚ್ಚುತ್ತಿರುವ ಬೆಲೆಗಳ ಹೊರೆಯಿಂದ ಬಳಲುತ್ತಿರುವ ಜನರಿಗೆ ಯಾವುದೇ ಪರಿಹಾರವನ್ನು ಕೊಡುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ.

ಈ ಲೆಕ್ಕಮಾತ್ರದ ಕಡಿತವನ್ನು ಕೇಂದ್ರೀಯ ಅಬಕಾರಿಯು ರೂ. ಪ್ರತಿ ಲೀಟರ್ ಪೆಟ್ರೋಲ್ ಗೆ 33 ರೂ. ಪ್ರತಿ ಲೀಟರ್ ಡೀಸೆಲ್‌ಗೆ 32 ರೂ. ಎಂಬ ಸಂಗತಿಯ ಬೆಳಕಿನಲ್ಲಿ ನೋಡಬೇಕಾಗಿದೆ.

ಕೇಂದ್ರ ಸರ್ಕಾರವು ರಾಜ್ಯಗಳೊಂದಿಗೆ ಹಂಚಿಕೊಳ್ಳಬಹುದಾದ ಅಬಕಾರಿ ಸುಂಕಗಳಿಂದ ಈ ಅಲ್ಪ ಕಡಿತವನ್ನು ಮಾಡಿದೆ. ಆದರೆ, ಅದು ಮೊತ್ತದ ವಿಶೇಷ ಹೆಚ್ಚುವರಿ ಅಬಕಾರಿ ಸುಂಕ (ಸರ್ಚಾರ್ಜ್) ವನ್ನು ಮೊತ್ರದ ಹೆಚ್ಚುವರಿ ಅಬಕಾರಿ ಸುಂಕ (ಸೆಸ್) ವನ್ನು ಮತ್ತು ಮೊತ್ತದ ಇತರ ಸೆಸ್ ಮತ್ತು ಹೆಚ್ಚುವರಿ ಶುಲ್ಕಗಳನ್ನು ಸಂಗ್ರಹಿಸುವುದನ್ನು ಮುಂದುವರೆಸುತ್ತದೆ. ಈ ವರ್ಷ ಈ ಬಾಬ್ತುಗಳಲ್ಲಿ ಅದು ಸಂಗ್ರಹಿಸಿರುವ ಮೊತ್ತಗಳು ಅನುಕ್ರಮವಾಗಿ ರೂ. 74,350 ಕೋಟಿ, ರೂ. 1,98,000 ಕೋಟಿ ಮತ್ತು ರೂ. 15,150 ಕೋಟಿ, ಅಂದರೆ ರಾಜ್ಯಗಳೊಂದಿಗೆ ಹಂಚಿಕೊಳ್ಳದ ಮೊತ್ತ ಒಟ್ಟು ರೂ. 2.87 ಲಕ್ಷ ಕೋಟಿ ರೂ. ಇದು ಹಾಗೆಯೇ ಮುಂದುವರೆಯುತ್ತದೆ.

ಈ ಹೆಚ್ಚುವರಿ ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ತಕ್ಷಣವೇ ಹಿಂಪಡೆಯಬೇಕು ಮತ್ತು ಜನರಿಗೆ ಸ್ವಲ್ಪ ಅರ್ಥಪೂರ್ಣ ಪರಿಹಾರವನ್ನು ಒದಗಿಸಬೇಕು ಎಂದು ಪೊಲಿಟ್‌ಬ್ಯೂರೋ ಒತ್ತಾಯಿಸಿದೆ.

ಭತ್ತ ಸಂಗ್ರಹಣೆ ನಿಲ್ಲಿಸಬಾರದು

ಕೇಂದ್ರೀಯ ಗೋದಾಮುಗಳು ಭರ್ತಿಯಾಗಿವೆ ಎಂಬ ನೆವವನ್ನು ಮುಂದೊಡ್ಡಿ ಕೆಲವು ರಾಜ್ಯಗಳಿಂದ ಎಂಎಸ್‌ಪಿ ದರದಲ್ಲಿ ಭತ್ತವನ್ನು ಖರೀದಿಸದಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪೊಲಿಟ್‌ಬ್ಯೂರೋ ಖಂಡಿಸಿದೆ. ಗೋದಾಮುಗಳಲ್ಲಿ ಕೊಳೆಯುತ್ತಿರುವ ಆಹಾರಧಾನ್ಯಗಳನ್ನು ಅಗತ್ಯವಿರುವವರಿಗೆ ಉಚಿತವಾಗಿ ವಿತರಿಸಬೇಕು.

ಕೃಷಿ ಕಾನೂನುಗಳನ್ನು ರದ್ದುಪಡಿಸಲು ಮತ್ತು ಎಲ್ಲಾ ಬೆಳೆಗಳಿಗೆ ಎಂಎಸ್‌ಪಿಗೆ ಮಾರಾಟ ಮಾಡುವ ಕಾನೂನುಬದ್ಧ ಹಕ್ಕನ್ನು ಒತ್ತಾಯಿಸಿ ರೈತರು ಒಂದು ವರ್ಷದಿಂದ ಐತಿಹಾಸಿಕ ಹೋರಾಟ ನಡೆಸುತ್ತಿರುವ ಸಮಯದಲ್ಲಿ ಈ ಕ್ರೂರ ನಿರ್ಧಾರವು ಬಂದಿದೆ.

ಕೇಂದ್ರವು ಎಲ್ಲಾ ಬೆಳೆಗಳನ್ನು ಎಂಎಸ್‌ಪಿ ದರದಲ್ಲಿ ಖರೀದಿಸಬೇಕು ಎಂದು ಪೊಲಿಟ್ ಬ್ಯೂರೋ ಒತ್ತಾಯಿಸಿದೆ.

ಅಲ್ಪಸಂಖ್ಯಾತರ ಮೇಲಿನ ದಾಳಿಗಳನ್ನು ನಿಲ್ಲಿಸಬೇಕು

ದೇಶಾದ್ಯಂತ ಅಲ್ಪಸಂಖ್ಯಾತರ ವಿರುದ್ಧ ಹೆಚ್ಚುತ್ತಿರುವ ದಾಳಿಗಳ ವರದಿಗಳು ಪ್ರವಾಹದಂತೆ ಬರುತ್ತಿರುವುದು ಬಹಳ ಕಳವಳಕಾರಿ ಸಂಗತಿಯಾಗಿದೆ. ಸ್ಪಷ್ಟವಾಗಿ, ಸರ್ಕಾರಗಳ ಕೃಪಾಪೋಷಣೆ ಪಡೆದಿರುವ ಬಲಪಂಥೀಯ ಗುಂಪುಗಳಿಗೆ ಇಂತಹ ಅಪರಾಧಗಳನ್ನು ಎಸಗುವ ಧೈರ್ಯ ಮಾಡುತ್ತಿವೆ ಎಂದು ಪೊಲಿಟ್‌ಬ್ಯುರೊ ಹೇಳಿದೆ. ಇವುಗಳಿಗೆ ತುತ್ತಾದವರನ್ನು ರಕ್ಷಿಸುವ ಬದಲು ಆಡಳಿತ, ವಾಸ್ತವವಾಗಿ ಅವರನ್ನು ಮತ್ತು ಅವರ ಬೆಂಬಲಿಗರನ್ನು ಕಠಿಣ ಕಾನೂನುಗಳ ಅಡಿಯಲ್ಲಿ ಬಂಧಿಸುವ ಮೂಲಕ ಶಿಕ್ಷಿಸುತ್ತಿದೆ. ಅಸ್ಸಾಂನಲ್ಲಿ ಮತ್ತು ಇತ್ತೀಚೆಗೆ ತ್ರಿಪುರಾದಲ್ಲಿ ದೊಂಬಿ ಹಿಂಸಾಚಾರವು ರಾಜ್ಯ ಆಡಳಿತದ ಆಶ್ರಯದಲ್ಲಿ ಸಂಭವಿಸಿದೆ, ಅಂತಹ ದಾಳಿಗಳ ಬಗ್ಗೆ ಯಾರಾದರೂ ವರದಿ ಮಾಡಿದರೆ ಅವರ ಮೇಲೆ ಯುಎಪಿಎ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುತ್ತಿದೆ.

ಉತ್ತರ ಪ್ರದೇಶದಲ್ಲಿ, ಮುಸ್ಲಿಮರ ವಿರುದ್ಧ ಅಸಂಖ್ಯ "ಎನ್‌ಕೌಂಟರ್" ಗಳ ಜೊತೆಗೆ ಎನ್.ಎಸ್.ಎ. ಬಳಕೆಯು ಸಾಮಾನ್ಯ ಸಂಗತಿಯಾಗುತ್ತಿದೆ. ರಾಷ್ಟ್ರೀಯ ರಾಜಧಾನಿ ಪ್ರದೇಶ, ಗುರ್‌ಗಾಂವ್‌ನಲ್ಲಿ ಇತ್ತೀಚಿನ ಘಟನೆಗಳು ತೋರಿಸಿರುವಂತೆ ಪ್ರಾರ್ಥನೆ ಸಲ್ಲಿಸುವ ಮೂಲಭೂತ ಹಕ್ಕನ್ನು ಮೊಟಕುಗೊಳಿಸಲಾಗುತ್ತಿದೆ.

ಮಾನವ ಹಕ್ಕುಗಳ ಗುಂಪುಗಳು ಇತ್ತೀಚೆಗೆ 2021 ರ ಮೊದಲ ಒಂಬತ್ತು ತಿಂಗಳುಗಳಲ್ಲಿ ಕ್ರಿಶ್ಚಿಯನ್ನರ ಮೇಲಿನ 300 ದಾಳಿಯ ಘಟನೆಗಳ ವರದಿಯನ್ನು ಪ್ರಕಟಿಸಿವೆ. ಅಂತಹ ದಾಳಿಗಳು ಮುಂದುವರಿಯುತ್ತಿವೆ. ಎಫ್‌ಐಆರ್ ದಾಖಲಾದರೂ ಕ್ರಮ ಕೈಗೊಳ್ಳುತ್ತಿಲ್ಲ. ಇವರಲ್ಲಿ ಹಲವರು ದಲಿತ ಮತ್ತು ಆದಿವಾಸಿ ಸಮುದಾಯಗಳಿಗೆ ಸೇರಿದವರು. ಚರ್ಚ್‌ಗಳನ್ನು ಧ್ವಂಸಗೊಳಿಸಲಾಗಿದೆ.

ನಮ್ಮ ಜಾತ್ಯತೀತ ಹಂದರಕ್ಕೆ ಅಪಾಯವನ್ನುಂಟುಮಾಡುವ ಮತ್ತು ಸಂವಿಧಾನವು ಖಾತರಿಪಡಿಸುವ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವ ಅಲ್ಪಸಂಖ್ಯಾತರ ಮೇಲಿನ ದಾಳಿಗಳ ವಿರುದ್ಧ ಪ್ರತಿಭಟನಾ ದಿನಾಚರಣೆ ನಡೆಸಬೇಕು ಎಂದು ಪೊಲಿಟ್ ಬ್ಯೂರೋ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಬಿ.ಎಸ್.ಎಫ್. ಕಾರ್ಯಾಚರಣೆಯ ವ್ಯಾಪ್ತಿಯ ವಿಸ್ತರಣೆಯನ್ನು ಹಿಂಪಡೆಯಬೇಕು

ಪಂಜಾಬ್, ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಗಡಿ ಭದ್ರತಾ ಪಡೆಗಳ ಕಾರ್ಯಾಚರಣೆಯ ವ್ಯಾಪ್ತಿಯನ್ನು ಅಂತರಾಷ್ಟ್ರೀಯ ಗಡಿಯಿಂದ 15 ಕಿಲೋಮೀಟರ್‌ಗಳಿಂದ 50 ಕಿಲೋಮೀಟರ್‌ಗಳ ವರೆಗೆ ವಿಸ್ತರಿಸಲು ಕೇಂದ್ರ ಸರ್ಕಾರದ ನಿರ್ಧಾರವು ರಾಜ್ಯಗಳ ಹಕ್ಕುಗಳು ಮತ್ತು ನಮ್ಮ ಸಂವಿಧಾನದ ಒಂದು ಮೂಲ ಅಂಶವಾದ ಒಕ್ಕೂಟ ತತ್ವದ ಮೇಲೆ ತೀವ್ರವಾದ ಪ್ರಹಾರವಾಗಿದೆ ಎಂದು ಪೊಲಿಟ್‌ಬ್ಯುರೊ ಖಂಡಿಸಿದೆ.

ಇನ್ನೂ ಕೆಟ್ಟ ಸಂಗತಿಯೆಂದರೆ, ರಾಜ್ಯಗಳೊಂದಿಗೆ ಸಮಾಲೋಚನೆಯಿಲ್ಲದೆ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಪೊಲೀಸ್ ಮತ್ತು ಕಾನೂನು- ವ್ಯವಸ್ಥೆ ಭಾರತೀಯ ಸಂವಿಧಾನದ ರಾಜ್ಯಪಟ್ಟಿಯಲ್ಲಿರುವ ವಿಷಯವಾಗಿದೆ.

ಈ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಪೊಲಿಟ್ ಬ್ಯೂರೋ ಆಗ್ರಹಿಸಿದೆ.

ರಫೇಲ್ ಹಗರಣ

ಫ್ರೆಂಚ್ ತನಿಖಾ ಪತ್ರಿಕೆ 'ಮೀಡಿಯಾಪಾರ್ಟ್' ಭಾರತದಲ್ಲಿ ಮಧ್ಯವರ್ತಿಗಳಿಗೆ ಕಮಿಷನ್‌ಗಳು ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳ ತಾಜಾ ಪುರಾವೆಗಳನ್ನು, ಇದರಿಂದ ಡಸಾಲ್ಟ್ ಏವಿಯೇಷನ್‌ಗೆ ಗಣನೀಯವಾಗಿ ಲಾಭವಾಗಿದೆ ಎಂದು ತೋರಿಸುವ ಅಧಿಕೃತ ಮಾತುಕತೆಗಳ ವಿವರಗಳೊಂದಿಗೆ ಪ್ರಕಟಪಡಿಸಿದ ನಂತರವೂ, ಕೇಂದ್ರ ಸರ್ಕಾರವು ಹಗರಣದ ತನಿಖೆಯನ್ನು ನಡೆಸಲು ನಿರಾಕರಿಸುತ್ತಿದೆ.

ರಫೇಲ್ ವ್ಯವಹಾರದಲ್ಲಿರುವ ಉನ್ನತ ಮಟ್ಟದ ಭ್ರಷ್ಟಾಚಾರವನ್ನು ಸಮಾಧಿ ಮಾಡುವ ಮತ್ತು ಅದನ್ನು ಮುಚ್ಚಿಹಾಕುವ ಕಾರ್ಯಾಚರಣೆಯ ಪ್ರಯತ್ನಗಳು ನಿಂದನೀಯ ಎಂದು ಪೊಲಿಟ್‌ಬ್ಯುರೊ ಹೇಳಿದೆ. ಇತರ ದೇಶಗಳ ಹಲವು ಸರ್ಕಾರಗಳು ಕೆಲವು ರೀತಿಯಲ್ಲಿ ತನಿಖೆಗೆ ಆದೇಶ ನೀಡಿದ್ದರೂ, ಮೋದಿ ಸರ್ಕಾರವು ಅಂತಹ ತನಿಖೆಯನ್ನು ನಡೆಸಲು ನಿರಾಕರಿಸುತ್ತ ತನ್ನ ಮೊಂಡುತನವನ್ನು ಮುಂದುವರೆಸಿದೆ. ಇದರಲ್ಲಿ ಸಂಪೂರ್ಣ ಶಾಮೀಲಿನ ವಾಸನೆ ಬರುತ್ತಿದೆ.

ಒಂದು ಉನ್ನತ ಮಟ್ಟದ ಸ್ವತಂತ್ರ ತನಿಖೆ ನಡೆಸಬೇಕು ಎಂದು ಪೊಲಿಟ್ ಬ್ಯೂರೋ ಆಗ್ರಹಿಸಿದೆ.

ನೋಟುರದ್ಧತಿ= ಸರ್ಕಾರದ ಅಜ್ಞಾನ + ದುರಹಂಕಾರ +.......

ಪುಟ 13 ರಿಂದ

ಮಾಡಿದ ಈ ಹಾನಿಯು ಕಿರು ಉತ್ಪಾದನಾ ವಲಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಸಂಘಟಿತ ವಲಯವೂ ಸಹ ಬೇರೆ ಕೆಲವು ಕಾರಣಗಳಿಂದಾಗಿ ನೋಟು ರದ್ದತಿಯಿಂದ ಬಾಧಿತವಾಯಿತು. ಕಿರು ಉತ್ಪಾದನಾ ವಲಯವು ನೇರವಾಗಿ ಅಥವಾ ಈ ವಲಯದಲ್ಲಿ ತೊಡಗಿರುವವರ ಬಳಕೆ ಬೇಡಿಕೆಗಳ ಮೂಲಕ, ಸಂಘಟಿತ ವಲಯದಿಂದ ಹಲವಾರು ಸರಕುಗಳನ್ನು ಖರೀದಿಸುತ್ತದೆ. ಕಿರು ಉತ್ಪಾದನಾ ವಲಯವು ಆರ್ಥಿಕ ಹಿಂಜರಿತಕ್ಕೆ ಒಳಗಾದಾಗ ಅಥವಾ ಆದಾಯದ ನಷ್ಟಕ್ಕೆ ಒಳಗಾದಾಗ, ಸಂಘಟಿತ ವಲಯದ ಸರಕುಗಳಿಗೆ ಬೇಡಿಕೆ ಕುಸಿಯುತ್ತದೆ. ಇದು ಸಂಘಟಿತ ವಲಯವನ್ನು ಬಾಧಿಸುತ್ತದೆ. ಹೀಗೆ, ಇಡೀ ಅರ್ಥವ್ಯವಸ್ಥೆಯು ಒಂದಲ್ಲ ಒಂದು ರೀತಿಯಲ್ಲಿ ನೋಟು ರದ್ದತಿಯ ಪ್ರತಿಕೂಲ ಪರಿಣಾಮಕ್ಕೆ ಒಳಗಾಯಿತು.

ಏತನ್ಮಧ್ಯೆ, ಸುಳ್ಳು ಹೇಳುವುದರಲ್ಲಿ ಅಪ್ರತಿಮ ಪ್ರಾವೀಣ್ಯತೆ-ಸಾಧನೆಯನ್ನು ಹೊಂದಿರುವ ಬಿಜೆಪಿಯು, ಮತ್ತೊಂದು ಕಥೆಯನ್ನು ಹೆಣೆಯಲು ಆರಂಭಿಸಿತು. ನಗದು ಬಳಕೆಯ ಪರಿಣಾಮವಾಗಿ ಅರ್ಥವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಮತ್ತು ಕಪ್ಪು ಹಣ ಸೃಷ್ಟಿಯಾಗುತ್ತವೆ ಎಂಬುದಾಗಿ ಬಿಜೆಪಿಯು ವಾದಿಸಿತು. ವ್ಯವಹಾರಗಳನ್ನು ಇತ್ಯರ್ಥಪಡಿಸುವಲ್ಲಿ ನಗದು ಹಣಕ್ಕೆ ಬದಲಿಯಾಗಿ ಹಣವನ್ನು ನಗದು ರಹಿತ ವಿಧಾನಗಳ ಮೂಲಕ ನೀಡಿದರೆ, ಅಂತಹ ಎಲ್ಲಾ ವಹಿವಾಟುಗಳ ದಾಖಲೆಗಳು ಉಳಿಯುವುದರಿಂದ, ಭ್ರಷ್ಟಾಚಾರದ ಮತ್ತು ಕಪ್ಪು ಹಣದ ವ್ಯಾಪ್ತಿಯನ್ನು ತಗ್ಗಿಸಬಹುದು ಎಂದು ಬಿಜೆಪಿಯು ವಾದಿಸಿತು. ಎಲ್ಲ ಭ್ರಷ್ಟಾಚಾರದ ಮತ್ತು ಕಪ್ಪು ಹಣದ ವಹಿವಾಟುಗಳ ವ್ಯಾಪ್ತಿಯನ್ನು ತೊಡೆದುಹಾಕುವ ರೀತಿಯಲ್ಲಿ ಅರ್ಥವ್ಯವಸ್ಥೆಯನ್ನು ಆಧುನೀಕರಿಸಿದರು ಎಂಬ ಕೀರ್ತಿಯನ್ನು ಸಲ್ಲಿಸಿ ಮೋದಿ ಅವರನ್ನು "ದೂರದರ್ಶಿ" ಎಂದು ಬಿಂಬಿಸಿತು. ಬಿಜೆಪಿಯ ಈ ದಾವೆಯು, ಭ್ರಷ್ಟಾಚಾರ ಮತ್ತು ನಗದು ಬಳಕೆಯ ನಡುವೆ ಯಾವುದೇ ಸಂಬಂಧವಿಲ್ಲ ಎಂಬ ಸ್ಪಷ್ಟ ಸಂಗತಿಗಳ ಎದುರಿನಲ್ಲಿ ಬಿದ್ದುಹೋಗುತ್ತದೆ. ಉದಾಹರಣೆಯಾಗಿ ಹೇಳುವುದಾದರೆ, ನಗದು-ಜಿಡಿಪಿ ಅನುಪಾತದಲ್ಲಿ ಜರ್ಮನಿ ಮತ್ತು ಜಪಾನ್ ದೇಶಗಳು ಭಾರತಕ್ಕಿಂತ ಹೆಚ್ಚಿನ ನಗದು-ಜಿಡಿಪಿ ಅನುಪಾತವನ್ನು ಹೊಂದಿದ್ದರೂ ಸಹ, ಭ್ರಷ್ಟಾಚಾರದಿಂದ ಅವು ಕಡಿಮೆ ಬಾಧಿತವಾಗಿದ್ದವು. ಮತ್ತು, ಕುತೂಹಲದ ಸಂಗತಿಯೆಂದರೆ, ನೋಟು ರದ್ದತಿಯ ನಂತರ, ನಗದು-ಜಿಡಿಪಿ ಅನುಪಾತವು ತಾತ್ಕಾಲಿಕವಾಗಿ 12%ನಿಂದ ಕೆಳಗಿಳಿದು ಮತ್ತೆ ಮೇಲೇರಿ ಪ್ರಸ್ತುತ 14% ಮಟ್ಟದಲ್ಲಿದೆ. ಹೀಗಾಗಿ, ಈ ವಿಷಯದಲ್ಲಿ ಬಿಜೆಪಿಯ ಸ್ವಂತ ವಾದದ ಪ್ರಕಾರವಾಗಿ ನೋಡಿದರೂ ಸಹ, ನೋಟು ರದ್ದತಿಯು ಸಂಪೂರ್ಣವಾಗಿ ವಿಫಲವಾಗಿದೆ.

ನೋಟು ರದ್ದತಿಯನ್ನು ಆದೇಶಿಸಿದ ಮೋದಿ ಸರ್ಕಾರವು ಜನರ ಕಷ್ಟಗಳ ಬಗ್ಗೆ ತೋರಿದಷ್ಟು ಅಸಡ್ಡೆಯನ್ನು ಯಾರಾದರೂ ಹೇಗೆ ತೋರಲು ಸಾಧ್ಯವೆ? ಇದಕ್ಕೆ ಉತ್ತರ "ಆಘಾತ ಮತ್ತು ಭಯ ಭಕ್ತಿ" ಉಂಟುಮಾಡುವ ಬಯಕೆ ಮತ್ತು ಸರಕಾರ ಇಷ್ಟೊಂದು ಯಾತನೆ ಉಂಟು ಮಾಡುತ್ತಿದ್ದರೆ, ಅದು ಯಾವುದೋ ಉನ್ನತ ಗುರಿಸಾಧನೆಗಾಗಿ ಎಂದು ಜನ ಎಷ್ಟು ಹೆಚ್ಚು ಬಳಲುತ್ತಾರೋ, ಅಷ್ಟು ಹೆಚ್ಚಿನ ಮಟ್ಟದಲ್ಲಿ ಭಾವಿಸುತ್ತಾರೆ ಎಂಬ ಅವರ ನಂಬಿಕೆಯಲ್ಲಿ ಇದೆ. ಸರ್ಕಾರದ ಅಜ್ಞಾನ, ದುರಹಂಕಾರ ಮತ್ತು "ಆಘಾತ ಮತ್ತು ಭಯ ಭಕ್ತಿ" ಉಂಟುಮಾಡುವ ಬಯಕೆ- ಇವೆಲ್ಲಾ ಒಟ್ಟಾದರೆ ಸಾಕಷ್ಟು ಮಾರಕವಾಗಬಲ್ಲದು ಎಂಬುದನ್ನು ಭಾರತದ ಜನರು ಬಲು ದೊಡ್ಡ ಬೆಲೆ ತೆತ್ತು ಕಲಿತಿದ್ದಾರೆ.

ನೋಟುರದ್ಧತಿಯ 'ಮಿಂಚಿನ ಪ್ರಹಾರ' ಸಾಧಿಸಿದ್ದೇನು?

ಕಪ್ಪು ಹಣದ ನಿರ್ಮೂಲನೆ, ನಕಲಿ ನೋಟುಗಳ ಹುಟ್ಟಡಗಿಸುವುದು ಮತ್ತು ಭಯೋತ್ಪಾದಕರಿಗೆ ಒದಗುವ ಹಣದ ಮೂಲದ ನಾಶ ಎಂಬ ಮೂರು ಉದ್ದೇಶಗಳನ್ನು ಸರ್ಕಾರ ಹೊಂದಿತ್ತು. ನಂತರ ಅದು ಆದಾಯ ತೆರಿಗೆ ತೆರುವವರ ಪ್ರಮಾಣವನ್ನು ಹೆಚ್ಚಿಸುತ್ತದೆ, ಇದರಿಂದ 2 –3 ಲಕ್ಷ ಕೋಟಿ ರೂ.ಗಳು ಸರಕಾರದ ಖಜಾನೆಗೆ ಬರುತ್ತವೆ, ನಗದು ಚಲಾವಣೆಯನ್ನು ಕಡಿಮೆ ಮಾಡಿ ಡಿಜಿಟಲ್ ಅರ್ಥವ್ಯವಸ್ಥೆಯತ್ತ ಸಾಗುತ್ತದೆ, ನಮ್ಮ ಅರ್ಥವ್ಯವಸ್ಥೆಯನ್ನು ಆಧುನೀಕರಿಸುತ್ತದೆ ಎಂದೆಲ್ಲ ಹೇಳಲಾಯಿತು.ವಿಶ್ಲೇಷಕರ ಪ್ರಕಾರ 5 ವರ್ಷಗಳ ನಂತರ ಕಾಣುತ್ತಿರುವ ವಾಸ್ತವ ಹೀಗಿದೆ:

- ನೋಟುರದ್ಧತಿಯ ಮೊದಲು ವರ್ಷಕ್ಕೆ 11.9% ದರದಲ್ಲಿ ನಮ್ಮ ಅರ್ಥವ್ಯವಸ್ಥೆಯಲ್ಲಿ ನಗದಿನ ಪ್ರಮಾಣ ಹೆಚ್ಚುತ್ತಿತ್ತು. ಈಗಲೂ ಅದೇ ದರದಲ್ಲಿ ಹೆಚ್ಚುತ್ತಿದೆ.
- ನೋಟುರದ್ಧತಿಯ ವೇಳೆಯಲ್ಲಿ ಚಲಾವಣೆಯಲ್ಲಿದ್ದ ನಗದು ಹಣದ ಮೊತ್ತ 18.5ಲಕ್ಷ ಕೋಟಿ ರೂ. ಈಗ ಅದು 28.5ಲಕ್ಷ ಕೋಟಿ ರೂ.
- ಜಿಡಿಪಿ ಹೋಲಿಕೆಯಲ್ಲಿ ನಗದಿನ ಪ್ರಮಾಣ ನೋಟುರದ್ಧತಿಯ ಮೊದಲು 2015–16ರಲ್ಲಿ 11.6% ಇತ್ತು ಈಗ ಅದು 13.9% . ಅಂದರೆ ನೋಟುರದ್ದತಿಯ ದಿನಗಳ ದೀರ್ಘ ಕ್ಯೂಗಳ ಒಟ್ಟು ಪರಿಣಾಮ ಸೊನ್ನೆಗಿಂತಲೂ ಕಡಿಮೆ.
- ತೆರಿಗೆದಾರರ ಪ್ರಮಾಣ ಹೆಚ್ಚುವ ಬದಲು ಕಡಿಮೆಯಾಗಿದೆ, 11.9%ದಿಂದ 10.5%ಕ್ಕೆ ಇಳಿದಿದೆ.
- ಜಿಡಿಪಿ ಬೆಳವಣಿಗೆ ದರ 2010ರಲ್ಲಿ 8.5% ಇದ್ದು, 2016ರಲ್ಲಿ 8.25%ಕ್ಕೆ, 2019ರಲ್ಲಿ(ಕೊವಿಡ್ ತಟ್ಟುವ ಮೊದಲೇ) 4%ಕ್ಕೆ ಇಳಿಯಿತು. ಕೊವಿಡ್ ನಂತರವಂತೂ (–)8%ಕ್ಕೆ ಕುಸಿಯಿತು!

ನೋಟುರದ್ಧತಿಯ ಮುಖ್ಯ ಪರಿಣಾಮವೆಂದರೆ ಅರ್ಥವ್ಯವಸ್ಥೆಯಲ್ಲಿ ಅನೌಪಚಾರಿಕ ವಲಯ ಸುಮಾರಾಗಿ ಧ್ವಂಸ ಗೊಂಡಿತು; ಸಣ್ಣ ಮತ್ತು ವಲಯ ಕೂಡ ಭಾರೀ ಹೊಡೆತ ತಿಂದಿತು; ದೇಶದಲ್ಲಿ ಉದ್ಯೋಗಾವಕಾಶ ನಿರ್ಮಾಣ ಮಾಡುವ ಬಹುದೊಡ್ಡ ವಲಯಗಳಿವು ಎಂಬುದು ಗಮನಾರ್ಹ ಎನ್ನುತ್ತಾರೆ ಅರ್ಥಿಕ ತಜ್ಞರು.

ವ್ಯಂಗ್ಯವೆಂದರೆ ಅರ್ಥವ್ಯವಸ್ಥೆಯ ಔಪಚಾರೀಕರಣ ಮತ್ತು ಡಿಜಿಟಲೀಕರಣ ನೋಟುರದ್ಧತಿಯ ಬಹುದೊಡ್ಡ ಸಾಧನೆ ಎಂದು ಆಳುವ ಪಕ್ಷದ ಕಟ್ಟಾ ಬೆಂಬಲಿಗರು ಹೇಳುತ್ತಿದ್ದಾರೆ. ಆದರೆ ಅವರಿಗೂಇದಕ್ಕಾಗಿ ಸರ್ವೋಚ್ಚ ನಾಯಕರಿಗೆ 'ಥ್ಯಾಂಕ್ಯು' ಹೇಳುವ ಧೈರ್ಯವಿದ್ದಂತಿಲ್ಲ!

‘ಜನತಾ ಮಾಧ್ಯಮ’ ಜನತೆಯ ಆಶೋತ್ತರಗಳ ದನಿ ಹಾಗೂ ವ್ಯಾಪಕ ವೇದಿಕೆಯಾಗಬೇಕು: ಪ್ರಬೀರ್ ಪುರಕಾಯಸ್ಥ


ವಸಂತರಾಜ ಎನ್.ಕೆ.

‘ಜನತಾ ಮಾಧ್ಯಮ’ವು ಮೊದಲನೆಯದಾಗಿ ಮಾಧ್ಯಮವಾಗಿರಬೇಕು. ಹೇಳಬೇಕಾದ್ದನ್ನು ಹೇಳಬೇಕಾದ ಶೇ.90 ಜನತೆಗೆ ಅರ್ಥವಾಗುವಂತೆ ಆಸಕ್ತಿಕಾರಕವಾಗಿ ಮುಟ್ಟಿಸುವ ಕೌಶಲ್ಯ, ಕಲೆಗಾರಿಕೆಯನ್ನು ಬೆಳೆಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಈವರೆಗಿನ ಮಾಧ್ಯಮ ಬೆಳವಣಿಗೆಗಳಲ್ಲಿ ಆಗಿರುವ ಸಂವಹನ, ತಾಂತ್ರಿಕ ಅಂಶಗಳಿಂದ ಉತ್ತಮವಾದದ್ದನ್ನು ಕಲಿಯಬೇಕು. ‘ಜನತಾ ಮಾಧ್ಯಮ’ ಎಲ್ಲ ಜನವಿಭಾಗಗಳ ಆಶೋತ್ತರಗಳ ದನಿ ಹಾಗೂ ವ್ಯಾಪಕ ವೇದಿಕೆಯಾಗಬೇಕು. ಇದಕ್ಕಾಗಿ ಈ ಜನವಿಭಾಗಗಳನ್ನು ಪ್ರತಿನಿಧಿಸುವ ಜನಸಂಘಟನೆ ಮತ್ತು ಜನಚಳುವಳಿಗಳ ಜತೆ ಸಂಪರ್ಕ ಬೆಳೆಸಬೇಕು.

ಹೀಗೆಂದವರು ಪ್ರಸಿದ್ಧ ಇಂಗ್ಲಿಷ್ ವೆಬ್ ಪತ್ರಿಕೆ ‘ನ್ಯೂಸ್ ಕ್ಲಿಕ್’ ನ ಪ್ರಧಾನ ಸಂಪಾದಕ ಹಾಗೂ ಮಾರ್ಕ್ಸ್‌ವಾದಿ ಚಿಂತಕ ಕಾ. ಪ್ರಬೀರ್ ಪುರಕಾಯಸ್ಥ. ಅವರು ಜನಶಕ್ತಿ ಮೀಡಿಯಾ ನವೆಂಬರ್ 1 ರಂದು ಏರ್ಪಡಿದ್ದ **“ಕಾರ್ಪೊರೆಟ್ ಮಾಧ್ಯಮಗಳಿಗೆ ಬದಲಿಯಾಗಿ ‘ಜನತಾ ಮಾಧ್ಯಮ’ ಕಟ್ಟುವ ಅನುಭವಗಳು ಮತ್ತು ಸವಾಲುಗಳು”** ಎಂಬ ವಿಷಯವಾಗಿ ಭೌತಿಕ+ಆನ್ ಲೈನ್ ವಿಚಾರ ಸಂಕಿರಣದಲ್ಲಿ ದಿಕ್ಸೂಚಿ ಭಾಷಣ ಮಾಡಿ ಮಾತನಾಡುತ್ತಿದ್ದರು. ‘ನ್ಯೂಸ್ ಕ್ಲಿಕ್’ ಮೋದಿ ಸರಕಾರದ ಜನ–ವಿರೋಧಿ ನೀತಿಗಳನ್ನು ಬಯಲಿಗೆಳೆಯುವ, ಜನತೆಯ ಹೋರಾಟಗಳ ಕುರಿತು ವಾಸ್ತವಿಕ ತಳಮಟ್ಟದ ವರದಿ ಮಾಡುವ ವೆಬ್ ಪತ್ರಿಕೆ. ಮೋದಿ ಸರಕಾರ ಭಯ ಪಡುವ ಕೆಲವೇ ಮಾಧ್ಯಮ ಸಂಸ್ಥೆಗಳಲ್ಲಿ ಒಂದು. ಆದ್ದರಿಂದಲೇ ಇತ್ತೀಚೆಗೆ ‘ನ್ಯೂಸ್ ಕ್ಲಿಕ್’ ಕಚೇರಿಯ ಮೇಲೆ ಮತ್ತು ಪ್ರಬೀರ್ ಅವರ ನಿವಾಸದ ಮೇಲೆ ಇಡಿ, ಐ.ಟಿ ದಾಳಿಗಳು ನಡೆದಿವೆ.

‘ಜನತಾ ಮಾಧ್ಯಮ’ವು ಜನಸಂಘಟನೆ ಮತ್ತು ಜನಚಳುವಳಿಗಳ ಜತೆ ಸತತ ಸಂಪರ್ಕ ಸಾಧಿಸಬೇಕು. ಜನವಿಭಾಗಗಳ ಜತೆ ಸಂವಹನ ನಡೆಸುವ ಕುರಿತು ಅವುಗಳಿಂದ ಕಲಿಯಬೇಕು. ಆದರೆ ಜನಸಂಘಟನೆ ಮತ್ತು ಜನಚಳುವಳಿಗಳ ಚಟುವಟಿಕೆಗಳೆಲ್ಲ ಸುದ್ದಿಯಲ್ಲ. ಅವುಗಳು ಮಾಡಿದ್ದು ಮಾತ್ರ ಸುದ್ದಿಯಲ್ಲ ಎಂಬುದನ್ನೂ ಅವರಿಗೆ ಸ್ಪಷ್ಟ ಪಡಿಸಬೇಕು. ಅವರ ಜತೆಗೂಡಿ ಜನತೆಯ ಎಲ್ಲ ಜನವಿಭಾಗಗಳ ಜತೆ ಸತತ ಸಂವಹನ ಸಾಧಿಸಬೇಕು. ಅವರ ಆಶೋತ್ತರಗಳಿಗೆ ವೇದಿಕೆಯಾಗಬೇಕು. ಸರಕಾರದ ನೀತಿ ಧೋರಣೆಗಳ, ಸಮಾಜದ ದೂರಗಾಮಿ ಸಮಸ್ಯೆಗಳು ಸವಾಲುಗಳು ಮತ್ತು ಪರಿಹಾರಗಳ ಕುರಿತು ವಿಮರ್ಶಾತ್ಮಕ ಸಂವಾದ ಏರ್ಪಡಿಸುವ ವೇದಿಕೆಯಾಗಬೇಕು ಎಂದೂ ಪ್ರಬೀರ್ ಅವರು ಮುಂದುವರೆದು ಹೇಳಿದರು.

‘ಜನತಾ ಮಾಧ್ಯಮ’ವು ‘ಸಾಮಾಜಿಕ ಮಾಧ್ಯಮ’ಕ್ಕಿಂತ ಭಿನ್ನವಾದದ್ದು. ‘ಸಾಮಾಜಿಕ ಮಾಧ್ಯಮ’ ಎಂದು ಕರೆಯಲಾಗುವಂಥದ್ದು ಜಾಗತಿಕ ದೈತ್ಯ ಟೆಕ್ ವೇದಿಕೆಗಳ (ಗೂಗಲ್, ಫೇಸ್ ಬುಕ್, ಯೂ ಟ್ಯೂಬ್, ಟ್ವಿಟರ್, ವಾಟ್ಸಪ್ – ಇವೂ ದೈತ್ಯ ಜಾಗತಿಕ ಕಾರ್ಪೊರೆಟ್ ಗಳೇ) ಮೇಲೆ ಆಧಾರಿತವಾದವುಗಳು. ಅವುಗಳನ್ನು ‘ಜನತಾ ಮಾಧ್ಯಮ’ವು ಬಳಸಿಕೊಳ್ಳುತ್ತಲೇ, ಅವುಗಳ ಮೇಲೆನೇ ಪೂರ್ಣವಾಗಿ ಅವಲಂಬಿತವಾಗಿರಬಾರದು. ಅವುಗಳ ಏಕಸ್ವಾಮ್ಯ ನಿಯಂತ್ರಣದ ಕುರಿತು ಎಚ್ಚರಿಕೆ ಬೇಕು. ಈ ದೈತ್ಯ ಟೆಕ್ ವೇದಿಕೆಗಳು ಬಹುತೇಕ ಬಲಪಂಥೀಯ, ನವಉದಾರವಾದಿ–ಪರ, ಕೋಮುವಾದಿ, ಸಾಮಾಜಿಕ ಸಾಮರಸ್ಯ ಕದಡುವ



ವಿಷಪೂರಿತ ಪ್ರಚಾರಗಳ ವೇದಿಕೆಗಳಾಗಿರುವುದು ಆಕಸ್ಮಿಕವಲ್ಲ. ಅಥವಾ ಮೇಲುಸ್ತುವಾರಿಯ ಅಭಾವದಿಂದಲ್ಲ. ದುಡ್ಡು ಕೊಟ್ಟು ಪ್ರೊಮೋಟ್ ಮಾಡುವವರ ಪೋಸ್ಟ್ ಗಳನ್ನು ಪ್ರೊತ್ಸಾಹಿಸುವ ಅವುಗಳ ‘ಅಲ್ಗೊರಿತಂ’ ಎಂದು ಕರೆಯಲಾಗುವ ಗಣಿತ–ಆಧಾರಿತ ವಿಧಾನಗಳು ಈ ರೀತಿಯ ವಿನ್ಯಾಸ ಹೊಂದಿರುವುದೇ ಮೂಲಕಾರಣ. ಅವುಗಳು ತಮ್ಮ ‘ಅಲ್ಗೊರಿತಂ’ನ್ನು ಬಹಿರಂಗ ಪಡಿಸಲು, ಸಾರ್ವಜನಿಕ ಪ್ರಜಾಸತ್ತಾತ್ಮಕ ನಿಬಂಧನೆಗಳಿಗೆ ಒಳಪಡಿಸಲು ಒತ್ತಾಯಿಸಬೇಕು. ಅದೇ ಸಮಯದಲ್ಲಿ ದೈತ್ಯ ಟೆಕ್ ವೇದಿಕೆಗಳ ದುರ್ವರ್ತನೆಗಳನ್ನು ನೆಪವಾಗಿಟ್ಟುಕೊಂಡು, ಸಾಮಾಜಿಕ ಮಾಧ್ಯಮ ಅಥವಾ ನೆಟ್/ವೆಬ್ ಆಧಾರಿತ ಎಲ್ಲ (ಜನತಾ ಮಾಧ್ಯಮಗಳು ಸೇರಿದಂತೆ) ವೇದಿಕೆಗಳ ನಿಬಂಧನೆಯ ಹೆಸರಲ್ಲಿ (ಇತ್ತೀಚಿನ ಐಟಿ ಕಾನೂನಿನ ತಿದ್ದುಪಡಿಯಂತಹ) ಕಾನೂನು ಕ್ರಮಗಳ ಭೀತಿ ಹುಟ್ಟಿಸಿ ಸೆನ್ಸಾರ್ ಮಾಡುವುದನ್ನು ವಿರೋಧಿಸಬೇಕು. ‘ಜನತಾ ಮಾಧ್ಯಮ’ವು ಆ ಕುರಿತು ಜನಶಿಕ್ಷಣದ ಮೂಲಕ ಹೋರಾಡಬೇಕು ಎಂದು ಪುರಕಾಯಸ್ಥ ಅವರು ಕರೆ ಕೊಟ್ಟರು.

ಸಾಮಾಜಿಕ ಮತ್ತು ಇತರ ಸಾಂಪ್ರದಾಯಿಕ ಮಾಧ್ಯಮಗಳಲ್ಲೂ ಕೋಮುದ್ವೇಷ, ಮಹಿಳಾ ದೂಷಣೆಯ ಮತ್ತು ಸಾಮಾಜಿಕ ಸಾಮರಸ್ಯ ಕದಡುವ ವಿಷಪೂರಿತ ಪ್ರಚಾರವನ್ನು ಎದುರಿಸುವುದು ಹೇಗೆ ಎಂಬುದರ ಕುರಿತು ‘ಜನತಾ ಮಾಧ್ಯಮ’ವು ಸೃಜನಾತ್ಮವಾಗಿರಬೇಕು. ಅವುಗಳ ವಿಷಪೂರಿತ ಭಾಷೆಯಲ್ಲಿ ಪ್ರತಿಕ್ರಿಯಿಸಲು ಹೋಗಬಾರದು. ಬದಲಿಗೆ ಇಂತಹ ಪ್ರಚಾರವನ್ನು ಹರಿತವಾದ ವಿಡಂಬನೆಗಳ ಮೂಲಕ ಗೇಲಿ ಮಾಡುವ ಮೂಲಕ, ಅವುಗಳನ್ನು ಬಯಲುಗೊಳಿಸುವ ಸೃಜನಾತ್ಮಕ ಮೀಮ್, ವಿಡಿಯೊ, ಬರಹಗಳ ಮೂಲಕ ಅದನ್ನು ಮಾಡಬೇಕು ಎಂದು ಪ್ರಬೀರ್ ಪುರಕಾಯಸ್ಥ ಸಲಹೆ ಮಾಡಿದರು.

ಇದಕ್ಕಿಂತ ಮೊದಲು ವೆಬಿನಾರಿನ ವಿಷಯದ ಕುರಿತು ಪ್ರಸ್ತಾವನೆಯ ಮಾತುಗಳನ್ನು ಆಡುತ್ತಾ ವಸಂತರಾಜ ಎನ್.ಕೆ ‘ಜನತಾ ಮಾಧ್ಯಮ’ ಎಂದರೇನು ಎಂದು ವಿವರಿಸಿದರು. ಅಕ್ಟೋಬರ್ 2020ರಲ್ಲಿ “ಪರ್ಯಾಯ ಮಾಧ್ಯಮ ಏಕೆ? ಹೇಗೆ?” ಎಂಬ ವಿಷಯದ ಕುರಿತು ಜನಶಕ್ತಿ ಮೀಡಿಯಾ ಸಂಘಟಿಸಿದ ವೆಬಿನಾರಿನ ದಿಕ್ಸೂಚಿ ಭಾಷಣ ಮಾಡುತ್ತಾ ಪಿ ಸಾಯಿನಾಥ ಅವರು ಅರ್ಥೈಸಿದಂತೆ ‘ಜನತಾ ಮಾಧ್ಯಮ’ವನ್ನು ಕಲ್ಪಿಸಲಾಗಿದೆ. ಅವರು ‘ಮುಖ್ಯವಾಹಿನಿ ಮಾಧ್ಯಮ’, ‘ಪರ್ಯಾಯ ಮಾಧ್ಯಮ’ ಎಂಬ ಪರಿಕಲ್ಪನೆಯನ್ನೇ ಒಪ್ಪುವುದಿಲ್ಲ ಎಂದಿದ್ದರು. ಇಂದು ‘ಮುಖ್ಯವಾಹಿನಿ ಮಾಧ್ಯಮ’ ಎಂದು ಕರೆಸಿಕೊಳ್ಳುವಂತಹದು ಯಾವುದೇ ಅರ್ಥದಲ್ಲಿ ಮುಖ್ಯವಾಹಿನಿಯ ಮಾಧ್ಯಮವಲ್ಲ. ಅದು ಕಾಪೊರೆಟುಗಳಿಗಾಗಿ ಇರುವ ಕಾರ್ಪೊರೆಟ್ ಮಾಧ್ಯಮ. ಈ ಮಾಧ್ಯಮಗಳಿಗೆ ಈಗ ದೇಶದ ‘ಮುಖ್ಯವಾಹಿನಿ’ಯ ಶೇ. 90ರಷ್ಟು ಇರುವ ಜನರ ಜೀವನ, ಸಮಸ್ಯೆಗಳ ಕುರಿತು ಅರಿವಿಲ್ಲ, ಅದು ಬೇಕಾಗಿಯೂ ಇಲ್ಲ. ಅವರನ್ನು ಉದ್ದೇಶಿಸುವುದು ಕೂಡಾ ಅವರಿಗೆ ಬೇಕಾಗಿಲ್ಲ. ಅವರಿಗೆ ಬೇಕಾಗಿರುವುದು ಕಾರ್ಪೊರೆಟ್ ಕಂಪನಿಗಳ ಉತ್ಪನ್ನಗಳಿಗೆ ಗ್ರಾಹಕರನ್ನು ಒದಗಿಸುವುದು ಮಾತ್ರ. ಅದರ ಎಲ್ಲ ಚಟುವಟಿಕೆಗಳು ಅದರ ಸುತ್ತ ಗಿರಕಿ ಹೊಡೆಯುತ್ತವೆ. ಇದು (ಕೆಲವು ಅಪರೂಪದ ಅಪವಾದಗಳನ್ನು ಬಿಟ್ಟರೆ) ಕಾರ್ಪೊರೆಟ್ ಕಂಪನಿಗಳ ನೇರ/ಪರೋಕ್ಷ ಒಡೆತನ/ನಿಯಂತ್ರಣದಲ್ಲಿರುವ, ಅವುಗಳ ಮತ್ತು ಅವುಗಳ ಹಿತಾಸಕ್ತಿ ಕಾಪಾಡುವ ಆಳುವ ವರ್ಗಗಳ/ಪಕ್ಷಗಳ ನೀತಿಗಳ ಬೆಂಬಲಕ್ಕೆ ಟೊಂಕಕಟ್ಟಿ ನಿಂತಿರುವ, ಅದಕ್ಕೆ ಕುರುಡು ಹಿಂಬಾಲಕರನ್ನು ಶೇ. 90ರಷ್ಟು ಇರುವ ಜನರಲ್ಲಿ ಸೃಷ್ಟಿಸುವ ಉದ್ದೇಶವಿರುವ ‘ಕಾರ್ಪೊರೆಟ್ ಮಾಧ್ಯಮ’. ಜನಮಾನಸವನ್ನು ಈ ‘ಕಾರ್ಪೊರೆಟ್ ಮಾಧ್ಯಮ’ದ ಹಿಡಿತದಿಂದ ವಿಮೋಚನೆ ಮಾಡುವುದು ‘ಜನತಾ ಮಾಧ್ಯಮ’ದ ಮುಖ್ಯ ಕೆಲಸ. ನಿಜವಾದ ಅರ್ಥದಲ್ಲಿ ‘ಜನತಾ ಮಾಧ್ಯಮ’ವೇ ‘ಮುಖ್ಯವಾಹಿನಿಯ ಮಾಧ್ಯಮ’ ಎಂದು ಸಾಯಿನಾಥ ಹೇಳಿದ್ದರು.

ಮುಖ್ಯವಾಹಿನಿ ಜನತೆಯ ಕುರಿತು ಬರೆಯುವ ‘ಜನತಾ ಮಾಧ್ಯಮ’ಗಳು, ಅವುಗಳ ಗಾತ್ರ, ತಲುಪುವಿಕೆ ಎಷ್ಟೇ ಇರಲಿ, ತಮ್ಮನ್ನು ತಾವು ಮುಖ್ಯವಾಹಿನಿ ಮಾಧ್ಯಮಗಳೆಂದು ಪರಿಗಣಿಸಬೇಕು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಗಾಂಧಿ, ಅಂಬೇಡ್ಕರ್ ನಡೆಸಿದ ಪತ್ರಿಕೆಗಳು ಎಷ್ಟೇ ಸಣ್ಣವಾಗಿದ್ದರೂ ಜನತೆಯ ಮಾಧ್ಯಮಗಳಾಗಿ ಅಗಾಧ ರಾಜಕೀಯ ಪರಿಣಾಮ ಬೀರಿದವು. ಕಳೆದ 2–3 ದಶಕ ಬಿಟ್ಟರೆ ಸುಮಾರು 2 ಶತಕಗಳ ಭಾರತೀಯ ಮಾಧ್ಯಮದ ಇತಿಹಾಸದ ಉದ್ದಕ್ಕೂ ಇದು ಸಾಧ್ಯವಾಗಿತ್ತು. ಆದ್ದರಿಂದ ಕಾರ್ಪೊರೆಟ್ ಮಾಧ್ಯಮಗಳಿಂದ ಪ್ರತ್ಯೇಕವಾದ ‘ಜನತಾ ಮಾಧ್ಯಮ’ಕ್ಕೆ ತಕ್ಕುದಾದ ಶೈಲಿ, ಉದ್ದೇಶ, ಕಂಟೆಂಟ್, ಸಂರಚನೆ, ಸಂಪನ್ಮೂಲ ಹೊಂಚುವಿಕೆ, ನೋಡುಗ/ಓದುಗ ಸಮೂಹವನ್ನು ಕಟ್ಟಿ ಬೆಳೆಸುವ ಬಗೆ ಇತ್ಯಾದಿಗಳನ್ನು ರೂಪಿಸಿಕೊಳ್ಳಬೇಕು ಎಂಬ ಸಾಯಿನಾಥ ಅವರ ಸಲಹೆಯನ್ನು ಜಾರಿ ಮಾಡುವುತ್ತ ಈ ವೆಬಿನಾರ್ ಒಂದು ಹೆಜ್ಜೆ ಎಂದು ವಸಂತರಾಜ್ ವಿವರಿಸಿದರು.

ಆ ನಂತರದ ನಡೆದ ಸಂವಾದದಲ್ಲಿ ಹಲವು ವರ್ಷಗಳಿಂದ ನಡೆಯುತ್ತಿರುವ ಕನ್ನಡ ವೆಬ್ ಪತ್ರಿಕೆಗಳ ಸಂಪಾದಕರುಗಳಾದ ಶಶಿ ಸಂಪಳ್ಳಿ (ಪ್ರತಿಧ್ವನಿ ನ್ಯೂಸ್), ಸಿರಾಜ್ ಬಿಸರಳ್ಳಿ (ಕನ್ನಡನೆಟ್.ಕಾಂ) ಭಾಗವಹಿಸಿದ್ದರು. ಶಶಿ ಸಂಪಳ್ಳಿ ಅವರು ಮಾತನಾಡುತ್ತಾ ಇಂಗ್ಲಿಷ್ ವೆಬ್ ಪತ್ರಿಕೆಗಳು ಅಖಿಲ ಭಾರತ ಓದುಗರು, ಸಂಪನ್ಮೂಲಗಳು ,ಅನುಕೂಲಕರ ಸನ್ನಿವೇಶ ಇಲ್ಲದ ಕನ್ನಡ ವೆಬ್ ಪತ್ರಿಕೆಗಳ ಸಮಸ್ಯೆ ಮತ್ತು ಸವಾಲುಗಳನ್ನು ವಿವರಿಸಿದರು. ಕಾರ್ಪೊರೆಟ್ ಮತ್ತು ಇತರ ಮಾಧ್ಯಮಗಳು ನಿರ್ಲಕ್ಷ ಮಾಡುವ ಹಲವು ಸುದ್ದಿ ವಿದ್ಯಮಾನಗಳನ್ನು ಪ್ರಕಟಿಸಿದ ತಮ್ಮ ಅನುಭವದ ಬಗ್ಗೆ ಹೇಳಿದರು. ಒಂದು ವರದಿ ಬಹಳ ವೈರಲ್ ಆಗಿ ಇತರ ಮಾಧ್ಯಮಗಳೂ ಪ್ರಕಟಿಸುವುದು ಅನಿವಾರ್ಯ ಆಗಿದ್ದರ ಕುರಿತು ಹೇಳಿದರು. ಎಷ್ಟೋ ಬಾರಿ ಇಂತಹ ಪತ್ರಿಕೆಗಳು ವರದಿ ಮಾಡುವುದಕ್ಕಷ್ಟೆ ನಿಲ್ಲದೆ ಆ ವಿಷಯದ ಕುರಿತು ‘ಆಕ್ಟಿವಿಸ್ಟ್’ ಪಾತ್ರ ವಹಿಸಿ ಅದನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುವುದೂ ಅಗತ್ಯವಾಗುತ್ತದೆ ಎಂದರು.

ಸಿರಾಜ್ ಬಿಸರಳ್ಳಿ ಅವರು ಸರಕಾರ, ಪ್ರಾದೇಶಿಕ/ಸ್ಥಳೀಯ ಪಟ್ಟಭದ್ರ ಹಿತಾಸಕ್ತಿಗಳು ವೆಬ್ ಪತ್ರಿಕೆಗಳಿಗೆ ಕೊಡುವ ಕಿರುಕುಳದ ಕುರಿತು ಮಾತನಾಡಿದರು. ಸಿಎಎ ವಿರುದ್ಧ ಅವರ ಕವನವನ್ನು ನೆಪ ಮಾಡಿಕೊಂಡು ಅವರ ಮೇಲೆ ಕೇಸು ಹಾಕಿದ್ದನ್ನು, ಹೆಚ್ಚಿನ ಸಂಖ್ಯೆಯಲ್ಲಿ ಹುಸಿ ದೂರಗಳನ್ನು ಸೃಷ್ಟಿಸುವ ಮೂಲಕ ತಮ್ಮ ಮತ್ತು ಪತ್ರಿಕೆಯ ಸಾ.ಮಾ ಅಕೌಂಟುಗಳನ್ನು ಬ್ಲಾಕ್ ಮಾಡಿಸಿದ್ದನ್ನು ಉದಾಹರಿಸಿದರು. ಇಬ್ಬರೂ ಇಂತಹ ವೆಬ್ ಪತ್ರಿಕೆಗಳು ಒಂದು ಸಂಯೋಜನೆ ಸ್ಥಾಪಿಸಿಕೊಂಡು ಸಮಸ್ಯೆಗಳನ್ನು ಜಂಟಿಯಾಗಿ ಎದುರಿಸಬೇಕೆಂದು ಸಲಹೆ ಮಾಡಿದರು. ವಸಂತರಾಜ ಎನ್.ಕೆ ಸಮಾರೋಪದ ಮಾತುಗಳನ್ನಾಡುತ್ತಾ ಕನ್ನಡ ವೆಬ್ ಪತ್ರಿಕೆಗಳ ಜಾಲವನ್ನು ರಚಿಸುವ ಸಲಹೆ ಮಾಡಿದರು. ಈ ಜಾಲ ಸಮಸ್ಯೆಗಳನ್ನು ಜಂಟಿಯಾಗಿ ಎದುರಿಸುವುದಲ್ಲದೆ ಜಂಟಿಯಾಗಿ ಒಂದು ಸುದ್ದಿ ಏಜೆನ್ಸಿ, ತನಿಖಾ ವರದಿಗಳ ಮೇಲೆ ಕೆಲಸ ಮಾಡುವುದು ಮತ್ತಿತರ ಜಂಟಿ ಕೆಲಸಗಳನ್ನು ಮಾಡಬಹುದು ಎಂದು ಸೂಚಿಸಿದರು. ಜನಶಕ್ತಿ ಮೀಡಿಯಾ ಇಂತಹ ಜಾಲ ಸ್ಥಾಪಿಸುವ ಪ್ರಯತ್ನಗಳನ್ನು ಮಾಡುವುದು ಎಂದರು. ಗುರುರಾಜ ದೇಸಾಯಿ ನಿರೂಪಣೆ ಮಾಡಿ ಕಾರ್ಯಕ್ರಮ ನಡೆಸಿಕೊಟ್ಟರು. ●



JANASHAKTHI KANNADA VARA PATRIKE NOVEMBER 22-28, 2021 Price: Rs. 10/- Date of Publication: 19 NOVEMBER 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಕಾರ್ಮಿಕ ಹಕ್ಕುಗಳನ್ನು ರಕ್ಷಿಸಲು ಕಮ್ಯೂನಿಷ್ಟರಿಂದ ಮಾತ್ರ ಸಾಧ್ಯ – ವಸಂತ ಆಚಾರಿ

ಸಿಪಿಐ(ಎಂ) 23ನೇ ಬಂಟ್ವಾಳ ತಾಲೂಕು ಸಮ್ಮೇಳನ ಬಹಿರಂಗ ಸಭೆಯು ಬಿ.ಸಿ. ರೋಡಿನ ಮಿನಿವಿಧಾನ ಸೌಧದ ಮುಂಭಾಗ ನಡೆಯಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ಸಿ.ಪಿ.ಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಇಂದು ನಮ್ಮನ್ನಾಳುತ್ತಿರುವ ಸರಕಾರಗಳು ಕಾರ್ಮಿಕ ವಿರೋಧಿಯಾಗಿದ್ದು ಕಾರ್ಮಿಕರು ಹಲವು ಹೋರಾಟಗಳನ್ನು ನಡೆಸಿ ಪಡೆದುಕೊಂಡ ಹಕ್ಕುಗಳನ್ನು ಇಂದು ಕೇಂದ್ರ ಸರಕಾರವು ಕಾರ್ಮಿಕ ಕಾಯ್ದೆಗಳನ್ನು ತಿದ್ದುಪಡಿ ಮಾಡುವ ಮೂಲಕ ಕಾರ್ಮಿಕ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ ಮತ್ತು ಸಾರ್ವಜನಿಕ ರಂಗದ ಎಲ್ಲಾ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವ ಮೂಲಕ ಕೇಂದ್ರ ಸರಕಾರವು ಬಂಡವಾಳ ಶಾಹಿಗಳ ಹಿತ ಕಾಯುತ್ತಿದೆ ಎಂದು ಆರೋಪಿಸಿದರು.

ಬಿಸಿಯೂಟ ನೌಕರರಿಗೆ ವೇತನವನ್ನು ನೀಡದೆ ಸರಕಾರವು ವಂಚಿಸುತ್ತಿದೆ ಅಲ್ಲದೆ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ದುರ್ಬಲಗೊಳಿಸಿ ಕೋಟ್ಯಾಂತರ ರೂಪಾಯಿಯನ್ನು ಲಪಟಾಯಿಸಲಾಗಿದೆ ಎಂದರು. ಭೂ ಸುಧಾರಣೆ ಕಾನೂನು ಜಾರಿಯಾಗಲು ಕಮ್ಯೂನಿಷ್ಟರ ನೇತೃತ್ವದಲ್ಲಿ ಗೇಣೆದಾರರ ಪ್ರಬಲ ಹೋರಾಟ ಅಂದು ಬಂಟ್ವಾಳದಲ್ಲಿಯೇ ಆರಂಭಗೊಂಡಿದ್ದು ಕಮ್ಯೂನಿಷ್ಟರ ನಿರಂತರ ಹೋರಾಟದಿಂದ ಭೂ ಸುಧಾರಣಾ ಕಾಯ್ದೆ ಜಾರಿಯಾಗಿದ್ದು ಭೂ ಸುಧಾರಣಾ ಕಾಯ್ದೆಯಿಂದ ಭೂಮಿ ಪಡೆದವರು ಈಗ ಅಂದಿನ ಕಾಲದಲ್ಲಿ ಭೂ ಮಾಲಕರ ಪರವಾಗಿ ಇದ್ದ ಆರ್‌ಎಸ್‌ಎಸ್ ಬಿಜೆಪಿಯೊಂದಿಗೆ ಕೈಜೋಡಿಸಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ದುಡಿಯುವ ಜನರು ಇತಿಹಾಸವನ್ನು ಅರ್ಥಮಾಡಿಕೊಂಡು ಸಂಘ ಪರಿವಾರದಿಂದ ಈ ದೇಶವನ್ನು ಪಾರು ಮಾಡಲು ಹೋರಾಟಕ್ಕೆ ಕೈಜೋಡಿಸಬೇಕೆಂದು ಕರೆ ನೀಡಿದರು. ಸಭೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಬಾಲಕೃಷ್ಣ ಶೆಟ್ಟಿ ಮಾತನಾಡಿ ಸ್ವಾಗತಿಸಿದರು. ಸಿಪಿಐ(ಎಂ) ತಾಲೂಕು ಸಮಿತಿ ಸದಸ್ಯರಾದ ಉದಯಕುಮಾರ್ ಬಂಟ್ವಾಳ ಧನ್ಯವಾದ ಸಲ್ಲಿಸಿದರು.



ಬಿ.ಸಿ. ರೋಡಿನ ಸೋಮಸುಂದರ ರಾವ್ ಕಂಪೌಂಡ್ ನಲ್ಲಿ ಸಮ್ಮೇಳನದ ಅಧಿವೇಶನ ನಡೆಯಿತು. ಆರಂಭದಲ್ಲಿ ಪಕ್ಷದ ಹಿರಿಯ ಸದಸ್ಯರಾದ ಶಿವರಾಯಪ್ರಭು ಧ್ವಜರೋಹಣ ನಡೆಸಿದರು. ಜೆ. ಬಾಲಕೃಷ್ಣ ಶೆಟ್ಟಿ ಉದ್ಘಾಟಿಸಿದರು. ಸಮಾರಂಭದಲ್ಲಿ ಸ್ವಾಗತ ಸಮಿತಿ ಗೌರವಾಧ್ಯಕ್ಷರಾದ ರಾಜಾ ಚೆಂಡ್ತಿಮಾರ್, ಅಧ್ಯಕ್ಷರಾದ ಉದಯಕುಮಾರ್ ಬಂಟ್ವಾಳ, ಹಿರಿಯ ಮುಖಂಡರಾದ ಬಿ. ವಾಸುಗಟ್ಟಿ ಹಾಗೂ ಸಂಜೀವ ಬಂಗೇರ, ಸ್ವಾಗತ ಸಮಿತಿ ಕೋಶಾಧಿಕಾರಿ ಸುರೇಂದ್ರ ಕೋಟ್ಯಾನ್ ಉಪಸ್ಥಿತರಿದ್ದರು.

ಸಮ್ಮೇಳನದಲ್ಲಿ ಕಾರ್ಯದರ್ಶಿಯಾಗಿ ರಾಮಣ್ಣ ವಿಟ್ಲ ಪುನರಾಯ್ಕೆಯಾದರು. ಸದಸ್ಯರುಗಳಾಗಿ ಉದಯಕುಮಾರ್ ಬಂಟ್ವಾಳ, ದಿನೇಶ್ ಆಚಾರಿ ಮಾಣಿ, ತುಳಸೀದಾಸ್ ವಿಟ್ಲ, ಅಪ್ಪುನಾಯ್ಕ ನೀರಪಾದೆ, ದೇವಪ್ಪ ಗೌಡ ಕನ್ಯಾನ, ಶಿವರಾಯ ಪ್ರಭು, ಲೋಲಾಕ್ಷಿ ಬಂಟ್ವಾಳ ಆಯ್ಕೆಯಾದರು.



ಸಿಪಿಐ(ಎಂ)ನ ಕೋಲಾರ 8ನೇ ತಾಲ್ಲೂಕು ಸಮ್ಮೇಳನ

ಕೋಲಾರ ತಾಲ್ಲೂಕು 8ನೇ ಸಮ್ಮೇಳನವನ್ನು 16 ನವೆಂಬರ್ 2021 ರಂದು ಕೋಲಾರದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಕಾಂ. ಹೆಚ್.ಪಿ. ಲಕ್ಷ್ಮೀನಾರಾಯಣ ಅವರು ಬಹಿರಂಗ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಕಾಂ. ಪಿ. ಶ್ರೀನಿವಾಸ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಗಾಂಧಿನಗರ ನಾರಾಯಣಸ್ವಾಮಿ ಅವರು ಉಪಸ್ಥಿತರಿದ್ದರು. ಕಾಂ. ಟಿ.ಎಂ. ವೆಂಕಟೇಶ್ ತಾಲ್ಲೂಕು ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು.





ಕಾಂ. ಪುರುಷೋತ್ತಮ್ ಕಲಾಲ್‌ಬಂಡಿ ಕಾರ್ನರ್ ಛಾಯಚಿತ್ರ ಪ್ರದರ್ಶನವು ಬೆಂಗಳೂರಿನ ಉಡುಪಿ ಸ್ವಾದ್ ಹೋಟೆಲ್ ಆವರಣದಲ್ಲಿ 18 ನವೆಂಬರ್ 2021 ರಂದು ನಡೆಯಿತು. ಉದ್ಘಾಟನೆಯನ್ನು ಶ್ರೀ ಬಿ. ಸುರೇಶ್, ಚಲನಚಿತ್ರ ನಿರ್ದೇಶಕರು ಮಾಡಿದರು.





JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**